...SE
...AMMAR

ಕನ್ನಡ
ಶಾಲಾವ್ಯಾಕರಣ

NINTH EDITION

MANGALORE
BASEL MISSION BOOK & TRACT DEPOSITORY
1895

Price: 5 As. ಕ್ರಯ: ೫ ಆಣೆ.

1. The maximum time allowed for retention of a book shall be one fortnight. It may be borrowed again if not required by others.

2. No reference books shall be lent out.

3. No borrower shall have more than two volumes out of the Library at one time.

4. Borrowers must not pass books from one to another but must return them to the Librarian.

5. Library books must not be used as class-books.

6. Any one who defaces by writing or otherwise damages any book shall pay the full cost of the book or of the entire works, if it consists of more than one volume.

7. The borrower shall be responsible for the value of the books lent out to him if they are lost, damaged or otherwise cannot be returned to the Library when they are due or recalled.

8. The presence of the voucher with the Librarian shall be considered sufficient proof of the non-return of books.

1615-36 The Bangalore Press

CANARESE

SCHOOL-GRAMMAR

ಕನ್ನಡ

ಶಾಲಾವ್ಯಾಕರಣ

NINTH EDITION

MANGALORE
BASEL MISSION BOOK & TRACT DEPOSITORY
1895

rice: 5 As. ಕ್ರಯ: ೫ ಆಣೆ.

PRINTED AT THE BASEL MISSION PRESS, MANGALORE.

CONTENTS.

ಅನುಕ್ರಮಣಿಕೆ.

ಪುಟ.

ಮೂರನೆ ಭಾಗ. III. Part.

ವಾಕ್ಯಖಂಡ. Syntax.

ನಾಲ್ಕನೆ ಭಾಗ. IV. Part.

INTRODUCTION.

ಪೀಠಿಕೆ.

1. ಕನ್ನಡ ವ್ಯಾಕರಣವಂದರೇನು?

ಕನ್ನಡ ಭಾಷೆಯ ವಿಧಿಗಳನ್ನು (Rules) ವಿವರಿಸಿರುವ ವಿದ್ಯೆ.

2. ಅದಕ್ಕೆ ಭಾಗಗಳು ಎಷ್ಟು?

“ಅಕ್ಷರಖಂಡ”, “ಶಬ್ದಖಂಡ”, “ವಾಕ್ಯಖಂಡ”ವೆಂಬೀ ಮೂರು.

1. Part: Orthography.

ಮೊದಲನೆ ಭಾಗ.

ಅಕ್ಷರಖಂಡ.

1. ಸಂಜ್ಞಾಪ್ರಕರಣ. Of Letters.

3. ಅಕ್ಷರವಂದರೇನು?

ಮಾತನಾಡುವದರಲ್ಲಿ ಒಂದೇ ಉಚ್ಚಾರಣೆಯಿಂದ ಹುಟ್ಟುವ ಶಬ್ದವೂ, ಅಂಥಾ ಶಬ್ದವನ್ನು ಬರೆಯುವದಕ್ಕೆ ಹಿರಿಯರು ಕಲ್ಪಿಸಿದ ಲಿಪಿಸಂಜ್ಞೆಯೂ “ಅಕ್ಷರ”ವೆಂದೆನ್ನಿಸುವದು.

4. ಕನ್ನಡದಲ್ಲಿ ಅಕ್ಷರಗಳು ಎಷ್ಟು ವಿಧವು?

“ವರ್ಣಾಕ್ಷರಗಳು” (Single Letters), “ಕಾಗುಣಿತಾಕ್ಷರಗಳು” (Syllables), “ಒತ್ತಕ್ಷರಗಳು” (Double Consonants), ಈ ಮೂರು ವಿಧವು.

ವರ್ಣಾಕ್ಷರಗಳು (Single Letters).

5. ವರ್ಣಗಳು ಯಾವವು?

ಸಂಸ್ಕೃತ ವರ್ಣಮಾಲೆಗೆ ಅನುಸಾರವಾಗಿ ಕರ್ಣಾಟಕದಲ್ಲಿಯೂ 50 ವರ್ಣಗಳೆಣಿಸುವವು. ಅವು ಯಾವವಂದರೆ—

ಅ	ಆ	ಇ	ಈ	ಉ	ಊ
ಋ	ೠ				
ಎ	ಏ	ಐ	ಒ	ಓ	ಔ
		ಅಂ	ಅಃ		

ಕ	ಖ	ಗ	ಘ (ಘ)	ಙ
ಚ	ಛ	ಜ	ಝ	ಞ
ಟ	ಠ	ಡ	ಢ	ಣ
ತ	ಥ	ದ	ಧ	ನ
ಪ	ಫ	ಬ	ಭ (ಭ)	ಮ
ಯ	ರ	ಲ	ವ	
ಶ	ಷ (ಷ)	ಸ	ಹ (ಹ)	ಳ

6. ಒಂದೊಂದು ವರ್ಣದ ಹೆಸರನ್ನು ಅನ್ನುವ ಹಾಗೆ ಅದಕ್ಕೆ ಏನು ಕೂಡಿಸುತ್ತಾರೆ?

"ಕಾರ" ಎಂಬದನ್ನು ಕೂಡಿಸುತ್ತಾರೆ. ಉದಾಹರಣೆ— ಅಕಾರ, ಇಕಾರ, ಕಕಾರ, ಮಕಾರ—ಇತ್ಯಾದಿ.

7. ವರ್ಣಗಳಲ್ಲಿ ಎಷ್ಟು ಭೇದಗಳು?

"ಸ್ವರಗಳು" (Vowels), "ವ್ಯಂಜನಗಳು" (Consonants), "ಅಯೋಗವಾಹಗಳು" (Semi-letters) ಎಂಬ ಮೂರು ಭೇದಗಳು.

8. ಸ್ವರಗಳು ಯಾವವು?

ಅಕಾರ ಹಿಡಿದು ಔಕಾರದ ವರೆಗೆ 14 ಸ್ವರಗಳು.

9. ವ್ಯಂಜನಗಳು ಯಾವವು?

ಕಕಾರ ಹಿಡಿದು ಳಕಾರದ ವರೆಗೆ 34 ವ್ಯಂಜನಗಳು.

10. ಸ್ವರಗಳು ಎಷ್ಟು ವಿಧವು?

"ಹ್ರಸ್ವ" (short), "ದೀರ್ಘ" (long) ಎಂಬ ಎರಡು ವಿಧವು.

ಅ, ಇ, ಉ, ಋ, ಎ, ಒ — ಇವು 6 ಹ್ರಸ್ವಸ್ವರಗಳು.

ಆ, ಈ, ಊ, ೠ, ಏ, ಐ, ಓ, ಔ — ಇವು 8 ದೀರ್ಘ ಸ್ವರಗಳು.

ಇವುಗಳಲ್ಲಿ "ಅ ಆ, ಇ ಈ, ಉ ಊ" ಎಂಬ 6 ಶುದ್ಧಸ್ವರಗಳು "ಎ ಏ, ಒ ಓ" ಎಂಬ 4 ಮಿಶ್ರಸ್ವರಗಳು, "ಐ ಔ" ಎಂಬ 2 ಸಂಧಿಸ್ವರಗಳು, "ಅ ಆ" ಎಂಬಿವು ಗಂಟ್ಲಿನಲ್ಲಿ, "ಇ ಈ" ಎಂಬಿವು ಅಂಗಳದಲ್ಲಿ, "ಉ ಊ" ಎಂಬಿವು ತುಟಿಯಲ್ಲಿ, "ಋ ೠ" ಎಂಬಿವು ನಾಲಿಗೆಯ ತುದಿಯನ್ನು ಬಾಯಿಯ ಶಿಖರಕ್ಕೆ ಒತ್ತುವಲ್ಲಿ, "ಎ ಏ ಐ" ಎಂಬಿವು ಗಂಟ್ಲಿಗೂ ಅಂಗಳಕ್ಕೂ ನಡುವಿನಲ್ಲಿ, "ಒ ಓ ಔ" ಎಂಬಿವು ಗಂಟ್ಲಿಗೂ ತುಟಿಗೂ ನಡುವಿನಲ್ಲಿ ಹಟ್ಟುವಂಥಾವು.

11. ವ್ಯಂಜನಗಳಲ್ಲಿ ಎಷ್ಟು ವಿಶೇಷಗಳು?

"ವರ್ಗೀಯಗಳು" (Classified Consonants), ಅವರ್ಗೀಯಗಳು" (Unclassified Consonants) ಎಂಬ ಎರಡು ವಿಶೇಷಗಳುಂಟು. ವರ್ಗೀಯಗಳೊಳಗೆ ಗಂಟ್ಲಿನಲ್ಲಿ ಹುಟ್ಟುವ ಕವರ್ಗಕ್ಕೆ (ಕಂಠ್ಯವರ್ಣಗಳು" (Gutturals), ಅಂಗಳದಲ್ಲಿ ಹುಟ್ಟುವ ಚವರ್ಗಕ್ಕೆ "ತಾಲವ್ಯವರ್ಣಗಳು" (Palatals), ನಾಲಿಗೆಯ ತುದಿಯನ್ನು ಬಾಯಿಯ ಶಿಖರಕ್ಕೆ ಒತ್ತುವದರಿಂದ ಹುಟ್ಟುವ ಟವರ್ಗಕ್ಕೆ "ಮೂರ್ಧನ್ಯವರ್ಣಗಳು" (Cerebrals or Linguals), ಹಲ್ಲುಗಳಲ್ಲಿ ಹುಟ್ಟುವ ತವರ್ಗಕ್ಕೆ "ದಂತ್ಯವರ್ಣಗಳು" (Dentals), ತುಟಿಗಳಲ್ಲಿ ಹುಟ್ಟುವ ಪವರ್ಗಕ್ಕೆ "ಓಷ್ಠ್ಯವರ್ಣಗಳು" (Labials) ಎಂದು ಹೆಸರು. ಅವರ್ಗೀಯಗಳೊಳಗೆ "ಯ, ರ, ಲ, ವ, ಳ" ಎಂಬ ಐದಕ್ಕೆ "ಮಧ್ಯ

ವರ್ಣಗಳು" ಅಥವಾ "ಅಂತಸ್ಥಗಳು" (Intermediates), "ಶ, ಷ, ಸ, ಹ" ಎಂಬ ನಾಲ್ಕಕ್ಕೆ "ಊಷ್ಮವರ್ಣಗಳು" (Sibilants) ಅನ್ನುವದು ಉಂಟು.

12. ವರ್ಗಗಳ ವರ್ಣಗಳು ಎಷ್ಟು ವಿಧವು?

ಪ್ರತಿ ವರ್ಗದಲ್ಲಿಯೂ 1ನೇ 2ನೇ ಅಕ್ಷರಗಳು "ಪರುಷ" (hard), 3ನೇ 4ನೇ ಅಕ್ಷರಗಳು "ಸರಳ" (soft), 5ನೇ ಅಕ್ಷರ "ಅನುನಾಸಿಕ" (nasal), ಈ ಪ್ರಕಾರ ಮೂರು ಭೇದಗಳು ಉಂಟು. ಪರುಷಾಕ್ಷರಗಳಲ್ಲಿಯೂ ಸರಳಾಕ್ಷರಗಳಲ್ಲಿಯೂ 1ನೇದು "ಅಲ್ಪಪ್ರಾಣ" (unaspirated) ಎಂದೂ, 2ನೇದು "ಮಹಾಪ್ರಾಣ" (aspirated) ಎಂದೂ ವರ್ತಿಸುವದು. ವ್ಯಾಕರಣ ಅರಿಯದ ಗ್ರಾಮಸ್ಥರು ತಮ್ಮ ಸಾಧಾರಣ ಪ್ರಯೋಗದಲ್ಲಿ ಅಲ್ಪಪ್ರಾಣಕ್ಕೆ ಹೆಣ್ಣಕ್ಷರವೆಂದೂ, ಮಹಾಪ್ರಾಣಕ್ಕೆ ಗಂಡಕ್ಷರವೆಂದೂ ಅನ್ನುವರು.

13. ಅಯೋಗವಾಹಗಳು ಯಾವವು?

"ಅನುಸ್ವಾರ" (ಂ), "ವಿಸರ್ಗ" (ಃ) ಎಂಬ ಎರಡು ಅಕ್ಷರಗಳ ಉಚ್ಚಾರಣೆಯು ಸ್ವರಕ್ಕೂ ವ್ಯಂಜನಕ್ಕೂ ನಡುವಿನಲ್ಲಿರುವ ಕಾರಣ ಅವುಗಳು "ಅಯೋಗವಾಹ"ಗಳೆಂದೆನ್ನಿಸುವವು.

14. ಅನುಸ್ವಾರದ ಪ್ರಯೋಗವು ಹ್ಯಾಗೆ?

ಅನುಸ್ವಾರವು ಕನ್ನಡದಲ್ಲಿ "ಬಿಂದ್ವಕ್ಷರ"ವೆಂದೂ "ಸೊನ್ನೆ" ಎಂದೂ ವರ್ತಿಸುವದು. ಆದರೆ ಸೊನ್ನೆಯನ್ನು ಕನ್ನಡ ಬರಹದಲ್ಲಿ ಅನುನಾಸಿಕಕ್ಕೂ ಪ್ರಯೋಗಿಸುತ್ತಾರೆ. ಹೀಗಿರಲಾಗಿ ಅದು ವರ್ಗೀಯಗಳಿಗೆ ಪೂರ್ವವಾದಾಗ ಅನುನಾಸಿಕವೆಂತಲೂ, ಅವರ್ಗೀಯಗಳಿಗೆ ಪೂರ್ವವಾದಾಗ ಮಾತ್ರವೆ ಅನುಸ್ವಾರವೆಂತಲೂ ತಿಳಿಯತಕ್ಕದ್ದು.

ಉದಾ: ಂ=ಅನುನಾಸಿಕ—ಅಂಕೆ=ಅಙ್ಕೆ, ಚಂಚಲ=ಚಞ್ಚಲ, ಅಂಟು=ಅಣ್ಟು, ಒಂದು=ಒನ್ದು, ಕೆಂಪು=ಕೆಮ್ಪು ಇತ್ಯಾದಿ.

ಂ= ಅನುಸ್ವಾರವಾಗಿರುವಲ್ಲಿ ಬೇರೆ ರೂಪವಿಲ್ಲ, ಅದರ ಉಚ್ಚಾರವನ್ನು ಕೇಳಿ, ತಿಳಿಯಬೇಕು. ಸಂಯೋಗ, ಸಂರಕ್ಷಣೆ, ಸಂಲಾಪ, ಸಂವತ್ಸರ, ಸಂಶಯ, ಸಂಸಾರ, ಸಿಂಹ ಇತ್ಯಾದಿ.

15. ವಿಸರ್ಗದ ಉಚ್ಚಾರಣೆಯು ಹ್ಯಾಗೆ?

ಅದರ ಉಚ್ಚಾರಣೆಯು ಸ್ವರವಿಲ್ಲದ ಹಕಾರಕ್ಕೆ ಸಮವಾಗಿದೆ. ಉದಾ: ಅಂತಃಕರಣ, ಪ್ರಾತಃಕಾಲ, ಮನಃಪೂರ್ವಕ.

16. ಮೇಲೆ ಹೇಳಿದ ಎಲ್ಲಾ ಅಕ್ಷರಗಳಿಗೂ ಕನ್ನಡದಲ್ಲಿ ಪ್ರಯೋಗ ಉಂಟೋ?

ಋ, ೠ, ಶ, ಷ, (ಃ) ವಿಸರ್ಗ ಇವುಗಳಿಗೆ ಕನ್ನಡದಲ್ಲಿ ಪ್ರಯೋಗಿಸುವ ಸಂಸ್ಕೃತ ಶಬ್ದಗಳಲ್ಲಿಯೂ, ಎ, ಒ, ಎಂಬಿವುಗಳಿಗೆ ಕನ್ನಡ ಶಬ್ದಗಳಲ್ಲಿಯೂ ಪ್ರಯೋಗ ಉಂಟು. ಕನ್ನಡ ಶಬ್ದಗಳಲ್ಲಿ ಮಾತ್ರ ಪ್ರಯೋಗಿಸುವ ಅಕ್ಷರಗಳಿಗೆ ದೇಶ್ಯಾಕ್ಷರಗಳೆಂದು ಹೆಸರು. ಮತ್ತು ಶ ವರ್ಣವನ್ನು ರೂಢಿಯಿಂದ ಕನ್ನಡದಲ್ಲಿ ಪ್ರಯೋಗಿಸುತ್ತಾರೆ.

ಉದಾ: ಶೇಕ, ಶಗಣೆ, ಶೇರು, ಹಶಿವು, ಶಿಕ್ಕಿತು.

ಕಾಗುಣಿತಾಕ್ಷರಗಳು (Syllables).

17. ಕಾಗುಣಿತಾಕ್ಷರಗಳು ಯಾವವು?

ವ್ಯಂಜನಗಳಿಗೆ ಸ್ವರಗಳನ್ನು ಕೂಡಿಸುವದರಿಂದ ಹುಟ್ಟಿದ ಅಕ್ಷರಗಳೆಲ್ಲಾ "ಕಾಗುಣಿತಾಕ್ಷರ"ಗಳೆಂದೂ "ಬಳ್ಳಿ"ಗಳೆಂದೂ ವರ್ತಿಸುವವು. ಅವುಗಳಲ್ಲಿ ವ್ಯಂಜನಗಳ ಮೇಲೆ ಬರುವ ಸ್ವರಸಂಜ್ಞೆಗಳು ಯಾವವಂದರೆ—

ಆ=ಾ, ಇ=ಿ, ಈ=ೀ, ಉ=ು, ಊ=ೂ, ಋ=ೃ, ೠ=ೄ ಎ=ೆ, ಏ=ೇ, ಐ=ೈ, ಒ=ೊ (ೊ), ಓ=ೋ (ೋ), ಔ=ೌ.

ವ್ಯಂಜನಗಳ ಉಚ್ಚಾರಣೆ ಸುಲಭವಾಗುವ ಹಾಗೆ, ಅವುಗಳಿಗೆಲ್ಲ ಹ್ರಸ್ವ "ಅ"ಸ್ವರವು ಸಹಜವಾಗಿರುವ ಕಾರಣ ಅದಕ್ಕೆ ಕಾಗುಣಿತಗಳಲ್ಲಿ ಪ್ರತ್ಯೇಕ ಸಂಜ್ಞೆ ಇಲ್ಲ. ಉದಾ: ಕ ಕಾ ಕಿ ಕೀ ಕು ಕೂ ಕೃ ಕೄ ಕೆ ಕೇ ಕೈ ಕೊ (ಕೊ) ಕೋ (ಕೋ) ಕೌ.

18. ವ್ಯಂಜನಕ್ಕೆ ಸ್ವರವಿಲ್ಲವೆಂಬುವದಕ್ಕೆ ಸಂಜ್ಞೆ ಏನು?

ವ್ಯಂಜನವು ಸ್ವರರಹಿತವಾದದ್ದೆಂದು ತೋರಿಸುವದಕ್ಕೆ ಅದರ ತಲೆಕಟ್ಟಿಗೆ ಒಂದು ಗುರುತು ಹತ್ತಿಸುವದುಂಟು. ಉದಾ: ಕ್, ಗ್, ವ್, ಳ್. ಅಂಥಾ ಸ್ವರರಹಿತವ್ಯಂಜನಕ್ಕೆ ಅರ್ಧಾಕ್ಷರ" (Quiescent) ಎಂಬ ಹೆಸರು.

ಒತ್ತಕ್ಷರಗಳು (Double Consonants.)

19. ಒತ್ತಕ್ಷರಗಳು ಯಾವವು?

ಎರಡು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸಂಯೋಗವಾದರೆ, ಅವುಗಳಲ್ಲಿ ಒಂದನ್ನು ಮತ್ತೊಂದರ ಕೆಳಗೆ ಒತ್ತಾಗಿ ಬರೆಯುವದರಿಂದ ಇಂಥ ಸಂಯುಕ್ತವಾದ ವ್ಯಂಜನಕ್ಕೆ "ಒತ್ತಕ್ಷರ"ವೆಂಬ ಹೆಸರು ಬಂದದೆ. ಒತ್ತಕ್ಷರವಾಗುವದರಲ್ಲಿ (1) ಕೆಲವು ವ್ಯಂಜನಗಳ ಸ್ವರೂಪವು ಯಥಾಪ್ರಕಾರವಾಗಿರುವದು, (2) ಕೆಲವುಗಳ ತಲೆಕಟ್ಟು ಮಾತ್ರ ಹೋಗುವದು, (3) ಕೆಲವು ಬಹಳ ವಿಕಾರವಾಗುವವು.

1) ಖ್ಖ, ಙ್ಙ, ಜ್ಜ, ಞ್ಞ, ಣ್ಣ, ಬ್ಬ.

2) ಕ್ಕ, ಗ್ಗ, ಘ್ಘ, ಚ್ಚ, ಛ್ಛ, ಝ್ಝ, ಟ್ಟ, ಠ್ಠ, ಡ್ಡ, ಢ್ಢ, ಥ್ಥ, ದ್ದ, ಧ್ಧ, ಪ್ಪ, ಫ್ಫ, ಭ್ಭ, ವ್ವ, ಶ್ಯ, ಷ್ಷ, ಸ್ಸ, ಹ್ಹ, ಳ್ಳ.

3) ತ್ತ, ನ್ನ, ಮ್ಮ, ಯ್ಯ, ರ್ರ, ಲ್ಲ,.

20. ರೇಫವಂದರೇನು?

ರಕಾರಕ್ಕೆ ಮತ್ತೊಂದು ವ್ಯಂಜನವು ಸಂಯೋಗವಾಗುವಲ್ಲಿ ಆ ಎರಡನೆ ವ್ಯಂಜನವನ್ನು ಒತ್ತಕ್ಷರವಾಗಿ ರಕಾರದ ಕೆಳಗೆ ಬರೆಯದೆ ರಕಾರವನ್ನು ಅರ್ಧಾಕ್ಷರದ ಸ್ವರೂಪದಿಂದ (ೞ) ಆ ಎರಡನೆ ಅಕ್ಷರದ ಉತ್ತರದಲ್ಲಿ ಬರೆದು ಅದರ ಪೂರ್ವದಲ್ಲಿ ಉಚ್ಚರಿಸಿದರೆ, "ರೇಫ" ಇಲ್ಲವೆ "ಅರ್ಕಾಒತ್ತು" ಎಂದೆನ್ನಿಸುವದು.

ಉದಾ: ಕಾರ್‍ಯ = ಕಾರ್ಯ, ಶೌರ್‍ಯ = ಶೌರ್ಯ.

2. ಸಂಧಿಪ್ರಕರಣ. Euphony.

21. ಸಂಧಿಯಂದರೇನು?

ಕೂಡಿ ನುಡಿಯುವ ಎರಡು ಶಬ್ದಗಳ ಉಚ್ಚಾರಣೆಯು ಸುಲಭವಾಗುವ ರೀತಿಯಿಂದ ಪೂರ್ವಶಬ್ದದ ಕಡೇ ಅಕ್ಷರಕ್ಕೆ ಪರಶಬ್ದದ ಆದಿ ಅಕ್ಷರವನ್ನು ಕೂಡಿಸುವದೇ "ಸಂಧಿ" ಎಂದೆನ್ನಿಸುವದು.

22. ಸಂಧಿ ಮಾಡದೆ ಶಬ್ದಗಳನ್ನು ಬರೆಯುವದು ಉಂಟೋ?

ವಾಕ್ಯಗಳ ಅರ್ಥವನ್ನು ತಿಳಿಯುವದಕ್ಕೆ ತೊಡಕು ಆಗದ ಹಾಗೆ ಸಂಧಿ ಮಾಡದೆ ಪದಗಳನ್ನು ಭಿನ್ನವಾಗಿ ಬರೆಯುವದುಂಟು; ಅದು "ಪ್ರಕೃತಿಭಾವ"ವೆಂದೆನ್ನಿಸುವದು.

23. ಸಂಧಿ ಮಾಡುವ ಸಾಧನಗಳು ಯಾವವು?

"ಲೋಪ" (Elision), "ಆಗಮ" (Insertion), "ಆದೇಶ" (Permutation) ಎಂಬ ಮೂರು ಸಾಧನಗಳಿಂದ ಸಂಧಿ ಆಗುವದು. ಅವುಗಳ ವಿವರವು ಹ್ಯಾಗಂದರೆ—

ಲೋಪವಂದರೆ—ಮುಂಚೆ ಇದ್ದ ಅಕ್ಷರಗಳಲ್ಲಿ ಒಂದು ಕಾಣದೆ ಹೋಗುವದೇ. ಉದಾ: ಮಾತು+ಇಲ್ಲ=ಮಾತಿಲ್ಲ, ಹಾಗೆ+ಆದರೆ=ಹಾಗಾದರೆ.

ಆಗಮವಂದರೆ—ಮುಂಚೆ ಇದ್ದ ಅಕ್ಷರಗಳ ನಡುವೆ ಮತ್ತೊಂದು ಹೊಸ ಅಕ್ಷರ ಬರುವದೇ. ಉದಾ: ಕೆಲಸ+ಇಲ್ಲ=ಕೆಲಸವಿಲ್ಲ, ಬುದ್ಧಿ+ಇಂದ=ಬುದ್ಧಿಯಿಂದ.

ಆದೇಶವಂದರೆ—ಮುಂಚೆ ಇದ್ದ ಅಕ್ಷರಗಳಲ್ಲಿ ಒಂದನ್ನು ಕೆಡಿಸಿ ಅದಕ್ಕೆ ಪ್ರತಿಯಾಗಿ ಬೇರೊಂದು ಹೊಸ ಅಕ್ಷರ ಬರುವದೇ. ಉದಾ: ಸೋತು+ಹೋಗಿ=ಸೋತ್ಹೋಗಿ.

24. ಸಂಧಿ ಬರುವದು ಎಲ್ಲಿ?

ಸಂಧಿಯು ಪದಗಳ ಮಧ್ಯದಲ್ಲಿಯೂ ಪದಗಳ ಅಂತ್ಯದಲ್ಲಿಯೂ ಆಗುವದು. ಎರಡು ಭಿನ್ನಪದಗಳನ್ನು ಒಂದಕ್ಕೊಂದು

ಸಮಾಸ ಮಾಡುವದರಲ್ಲಿಯೂ, ಶಬ್ದಗಳ ಪ್ರಕೃತಿರೂಪಕ್ಕೆ ಪ್ರತ್ಯಯಗಳನ್ನು ಅನುಬಂಧಿಸುವದರಲ್ಲಿಯೂ ಆಗುವ ಸಂಧಿ "ಪದಮಧ್ಯಸಂಧಿ" ಎನ್ನಿಸುವದು. ವಾಕ್ಯಸಂಹಿತದಲ್ಲಿ ಪದಗಳನ್ನು ಒಂದಕ್ಕೊಂದು ಪೋಣಿಸುವದರಲ್ಲಿ ಆಗುವ ಸಂಧಿ "ಪದಾಂತ್ಯಸಂಧಿ" ಎಂದು ವರ್ತಿಸುವದು.

25. ಸಂಧಿ ಎಷ್ಟು ವಿಧವು?

"ಸಂಸ್ಕೃತಸ್ವರಸಂಧಿ", ಸಂಸ್ಕೃತವ್ಯಂಜನಸಂಧಿ"ಗಳೆಂದೂ, "ಕನ್ನಡಸ್ವರಸಂಧಿ", "ಕನ್ನಡವ್ಯಂಜನಸಂಧಿ"ಗಳೆಂದೂ ನಾಲ್ಕು ವಿಧವು. ಸಂಸ್ಕೃತವಿಧಿಗಳಿಗೆ ಕನ್ನಡವಿಧಿಗಳು ಸಂಬಂಧವಲ್ಲ. ಸಂಸ್ಕೃತದಿಂದ ಕನ್ನಡದಲ್ಲಿ ಸೇರಿದ ತತ್ಸಮ ಸಮಾಸಪದಗಳಲ್ಲಿ ಮಾತ್ರ ಸಂಸ್ಕೃತಸಂಧಿ ಪ್ರಯೋಗಿಸುವದು, ಕಡಿಮೆ ಎಲ್ಲಾ ಪಕ್ಷಗಳಲ್ಲಿ ಕನ್ನಡಸಂಧಿ ಸಲ್ಲುವದು.

ಸಂಸ್ಕೃತಸಂಧಿ (Euphony in Sanskrit words).

26. ಸಂಸ್ಕೃತಸ್ವರಸಂಧಿಯ ಮುಖ್ಯವಾದ ವಿಧಿಗಳು ಯಾವವು?

"ಸವರ್ಣದೀರ್ಘ", "ಯಣ್ಣು", "ಗುಣ", "ವೃದ್ಧಿ" ಎಂಬ ನಾಲ್ಕು ಸ್ವರಸಂಧಿವಿಧಿಗಳು ಕನ್ನಡದಲ್ಲಿ ಉಪಯೋಗಿಸುವಂಥಾವು.

27. ಸವರ್ಣದೀರ್ಘವೆಂದರೆ ಹ್ಯಾಗೆ?

ಒಂದೊಂದು ಸ್ವರದ ಹ್ರಸ್ವದೀರ್ಘಗಳು ತಮ್ಮೊಳಗೆ ಸವರ್ಣವೆಂದೂ, ಸಮಾನಾಕ್ಷರವೆಂದೂ ಎನ್ನಿಸುವವು; ಕಡಿಮೆ ಸ್ವರಗಳು ಒಂದಕ್ಕೊಂದು ಅಸವರ್ಣವೆಂದು ವ್ಯವಹರಿಸುವವು. ಆದರೆ ಒಂದಕ್ಕೊಂದು ಪರವಾಗುವ ಸವರ್ಣಸ್ವರಗಳು ಒಂದಕ್ಕೊಂದು ಬೆರಸಿ ಹೋಗಿ ದೀರ್ಘವಾಗುವದೇ "ಸವರ್ಣದೀರ್ಘ"ವೆಂದು ವರ್ತಿಸುವದು.

ಉದಾ: ಅ+ಅ, ಅ+ಆ, ಆ+ಆ } ಆ { ಅಕ್ಷರ+ಅಭ್ಯಾಸ=ಅಕ್ಷರಾಭ್ಯಾಸ. ಪರಿಶುದ್ಧ+ಆತ್ಮ=ಪರಿಶುದ್ಧಾತ್ಮ. ಮಹಾ+ಆತ್ಮ=ಮಹಾತ್ಮ.

ಇ+ಇ, ಇ+ಈ } ಈ { ಮಹಿ+ಇಂದ್ರ=ಮಹೀಂದ್ರ. ಕವಿ+ಈಶ್ವರ=ಕವೀಶ್ವರ.

ಉ+ಉ=ಊ, ವಿಷ್ಣು+ಉತ್ಸವ=ವಿಷ್ಣೂತ್ಸವ.

ಋ+ಋ=ಋೂ. ಧಾತೃ+ಋದ್ಧಿ=ಧಾತೄದ್ಧಿ.

28. ಯಣ್ಣ ಎಂಬ ಸ್ವರಸಂಧಿಯ ವಿಧಿಯು ಹ್ಯಾಗೆ?

ಅಸವರ್ಣ ಸ್ವರಗಳಾದ ಇ, ಉ, ಋಕಾರಗಳಿಗೆ ಬೇರೆ ಸ್ವರಗಳು ಪರವಾದರೆ, ಇಕಾರಕ್ಕೆ "ಯ"ಒತ್ತು ಉಕಾರಕ್ಕೆ "ವ"ಒತ್ತು ಋಕಾರಕ್ಕೆ "ರ"ಒತ್ತು ಬರುವದು.

ಉದಾ: ಪ್ರತಿ+ಅಕ್ಷ=ಪ್ರತ್ಯಕ್ಷ, ಅತಿ+ಉತ್ತಮ=ಅತ್ಯುತ್ತಮ, ಪ್ರತಿ+ಏಕ=ಪ್ರತ್ಯೇಕ, ಮನು+ಅಂತರ=ಮನ್ವಂತರ, ಪಿತೃ+ಅಂಶ=ಪಿತ್ರಂಶ.

29. ಗುಣ ಎಂಬ ಸ್ವರಸಂಧಿಯ ವಿಧಿಯು ಹ್ಯಾಗೆ?

ಅ ಆಕಾರಗಳಿಗೆ ಇ ಈಕಾರಗಳು ಪರವಾದರೆ, "ಏ"ಕಾರವಾಗುವದು. ಅವುಗಳಿಗೆ ಉ ಊಕಾರಗಳು ಪರವಾದರೆ, "ಓ"ಕಾರವಾಗುವದು. ಅವಕ್ಕೆ ಋಕಾರ ಪರವಾದರೆ, "ಅರ್"ಕಾರವಾಗುವದು.

ಉದಾ: ಜ್ಞಾನ+ಇಂದ್ರಿಯ=ಜ್ಞಾನೇಂದ್ರಿಯ, ಮಹಾ+ಈಶ್ವರ=ಮಹೇಶ್ವರ, ಪರ+ಉಪಕಾರ=ಪರೋಪಕಾರ, ಪ್ರಶ್ನಾ+ಉತ್ತರ=ಪ್ರಶ್ನೋತ್ತರ, ಮಹಾ+ಋಷಿ=ಮಹರ್ಷಿ.

30. ವೃದ್ಧಿ ಎಂಬ ಸ್ವರಸಂಧಿಯ ವಿಧಿಯು ಹ್ಯಾಗೆ?

ಅ ಆಕಾರಗಳಿಗೆ ಏ ಐಕಾರಗಳು ಪರವಾದರೆ "ಐ"ಕಾರವೂ, ಅವುಗಳಿಗೆ ಓ ಔಕಾರಗಳು ಪರವಾದರೆ "ಔ"ಕಾರವೂ ಆಗುವದು.

ಉದಾ: ಪ್ರಥಮ + ಏಕವಚನ = ಪ್ರಥಮೈಕವಚನ, ವಿಶ್ವ + ಐಕ್ಯ = ವಿಶ್ವೈಕ್ಯ, ಸೇನ + ಓಘ = ಸೇನೌಘ, ಅಧಿಕ + ಔದಾರ್ಯ = ಅಧಿಕೌದಾರ್ಯ.

31. ಸಂಸ್ಕೃತವ್ಯಂಜನಸಂಧಿಯ ವಿಧಿಗಳು ಯಾವವು?

ಅವು ನಾನಾ ವಿಧವಾಗಿರುವದರಿಂದ ಪದಸಮಾಸದಲ್ಲಿ ಪ್ರಯೋಗಿಸುವಂಥ ಮುಖ್ಯ ವಿವರಗಳನ್ನು ಮುಂದಣ ವಿಧಿಗಳಿಂದ ತಿಳುಕೊಳ್ಳತಕ್ಕದ್ದು.

ಸಂಸ್ಕೃತವ್ಯಂಜನಸಂಧಿಯಲ್ಲಿ (ಲಕ್ಷಿಸತಕ್ಕ ಅಂಶಗಳು) ವ್ಯಂಜನಗಳ "ಸ್ಥಳಾಂತರವು" (change of place), "ಗುಣಾಂತರವು" (change of quality) ಎಂದು ಎರಡು ವಿಧಗಳು.

1. ಸ್ಥಳಾಂತರ ಅಂದರೆ ಪೂರ್ವಪದಾಂತ ವ್ಯಂಜನವು ಲೋಪವಾಗಿ ಬೇರೆ ಅಕ್ಷರ ಬರುವದು.

ಉದಾ: ಮಹತ್ + ಚಕ್ರ = ಮಹಚ್ಚಕ್ರ, ಜಗತ್ + ಜನ = ಜಗಜ್ಜನ, ಬೃಹತ್ + ಟೀಕೆ = ಬೃಹಟ್ಟೀಕೆ, ಸತ್ + ಲಕ್ಷಣ = ಸಲ್ಲಕ್ಷಣ, ಚಿತ್ + ಶಕ್ತಿ = ಚಿಚ್ಛಕ್ತಿ.

2. ಗುಣಾಂತರ ಅಂದರೆ ಪೂರ್ವಪದಾಂತ ವ್ಯಂಜನವು ಲೋಪವಾಗಿ ಅದರ ಸವರ್ಣಾಕ್ಷರ ಬರುವದು.

ಉದಾ: ವಾಕ್ + ಈಶ = ವಾಗೀಶ, ಜಗತ್ + ಈಶ = ಜಗದೀಶ, ಸತ್ + ಆಚಾರ = ಸದಾಚಾರ, ದಿಕ್ + ಗಜ = ದಿಗ್ಗಜ, ಅಪ್ + ಜ = ಅಬ್ಜ, ಅಪ್ + ದ = ಅಬ್ದ, ಸತ್ + ಗುರು = ಸದ್ಗುರು, ಸತ್ + ಮಾರ್ಗ = ಸನ್ಮಾರ್ಗ, ವಾಕ್ + ಮಯ = ವಾಙ್ಮಯ, ತತ್ + ಮಾತ್ರ = ತನ್ಮಾತ್ರ, ಸತ್ + ವರ್ತನೆ = ಸದ್ವರ್ತನೆ, ಮಹತ್ + ರಥ = ಮಹದ್ರಥ, ಉತ್ + ಯಮ = ಉದ್ಯಮ ಸತ್ – ಧರ್ಮ = ಸದ್ಧರ್ಮ, ಷಟ್ + ವೈರಿ = ಷಡ್ವೈರಿ.

3. ವಿಸರ್ಗವು ಸಂಧಿಯಲ್ಲಿ ಕೆಲವು ಕಡೆ "ಓ"ಕಾರವೂ ಕೆಲವು ಕಡೆ "ರೇಫ"ವೂ, ಕೆಲವು ಕಡೆ "ಶ, ಷ, ಸ"ಕಾರವೂ ಆಗುತ್ತದೆ.

ಉದಾ:

ಓಕಾರಕ್ಕೆ.— ತಮಃ + ಗುಣ = ತಮೋಗುಣ, ಮನಃ + ಜಾತ = ಮನೋಜಾತ, ತೇಜಃ + ವಂತ = ತೇಜೋವಂತ.

ರೇಫಕ್ಕೆ.— ಜ್ಯೋತಿಃ + ಮಯ = ಜ್ಯೋತಿರ್ಮಯ, ಧನುಃ + ಗುಣ = ಧನುರ್ಗುಣ.

ಸಕಾರಕ್ಕೆ.— ನಿಃ + ತೇಜ = ನಿಸ್ತೇಜ, ತಮಃ + ತರಣ = ತಮಸ್ತರಣ.

ಶ, ಷಕಾರಕ್ಕೆ.— ನಿಃ + ಶ್ರೇಣಿ = ನಿಶ್ಶ್ರೇಣಿ, ಅಂತಃ + ಷಷ್ಠ = ಅತಷಷ್ಠ.

ಕನ್ನಡಸಂಧಿ (Euphony in Canarese Words).

32. ಕನ್ನಡಸಂಧಿಯು ಹ್ಯಾಗೆ?

ಶಬ್ದಸಮಾಸದಲ್ಲಿಯೂ ಪ್ರತ್ಯಯಾನುಬಂಧನೆಯಲ್ಲಿಯೂ ಕನ್ನಡಸಂಧಿ ನಿತ್ಯವಾದದ್ದು, ವಾಕ್ಯಸಂಹಿತದಲ್ಲಿ ಮಾತ್ರ ಅದು ವಿಕಲ್ಪವಾದದ್ದು.

33. ಕನ್ನಡಸ್ವರಸಂಧಿಯ ವಿಧಿಗಳು ಯಾವವು?

ಅವುಗಳಲ್ಲಿ ಮುಖ್ಯವಾದವುಗಳು ಯಾವವಂದರೆ—

1. ಸಂಧಿ ಮಾಡುವದರಿಂದ ಪದಗಳ ಅರ್ಥವನ್ನು ತಿಳಿಯುವದಕ್ಕೆ ತೊಡಕುಬೀಳುವಲ್ಲಿಯೂ ಶ್ರುತಿಕಷ್ಟ ಬರುವಲ್ಲಿಯೂ ಸಂಧಿ ಮಾಡಬಾರದು. ಉದಾ: ಮನೆ + ಅನ್ನು = ಮನನ್ನು, ನಂಬಿಕೆ + ಇದು = ನಂಬಿಕಿದು, ನಂಬಿಕೆ + ಇಟ್ಟು = ನಂಬಿಕಿಟ್ಟು. (ಹೀಗೆ ಸಂಧಿ ಮಾಡ ಕೂಡದು.)
2. ಶುದ್ಧ ಕನ್ನಡ ಪದಗಳೊಂದಿಗೆ ಸ್ವರಲೋಪದಿಂದ ಅರ್ಥ ತಿಳಿಯುವದಕ್ಕೆ ಎಲ್ಲಿ ಅಡ್ಡಿ ಆಗುವದಿಲ್ಲವೋ ಅಲ್ಲಿ ಹ್ರಸ್ವ ಅಂತ್ಯಸ್ವರಗಳನ್ನು ಲೋಪ ಮಾಡಬಹುದು. ಉದಾ: ಔಡ್ಲ + ಎಣ್ಣೆ = ಔಡ್ಲೆಣ್ಣೆ, ಕಲ್ಲು + ಆನೆ = ಕಲ್ಲಾನೆ, ಹಾಗೆ + ಆಯಿತು = ಹಾಗಾಯಿತು, ಬೇರೆ + ಒಬ್ಬ = ಬೇರೊಬ್ಬ.

3. ಸ್ವರಲೋಪದಿಂದ ಪದರೂಢಿ ಅಳಿಯುವ ಪಕ್ಷದಲ್ಲಿ ಅಕಾರದ ಮುಂದೆ "ವ್" ಆಗಮವು, ಇ ಎಕಾರಗಳ ಮುಂದೆ "ಯ್" ಆಗಮವು ಬರುವದು. ಉದಾ: ಮರ + ಅನ್ನು = ಮರವನ್ನು, ಕುರಿ + ಯಿಂದ = ಕುರಿಯಿಂದ, ಹುಲಿ + ಉಗುರು = ಹುಲಿಯುಗುರು, ಹೊಟ್ಟೆ + ಉರಿ = ಹೊಟ್ಟೆಯುರಿ.

4. ಸಂಸ್ಕೃತದಿಂದ ಕನ್ನಡದಲ್ಲಿ ಸೇರಿದ ತತ್ಸಮಪದಗಳೊಂದಿಗೆ ಎಂದಿಗೂ ಸ್ವರಲೋಪವು ಆಗದು, ಅಂತ್ಯಸ್ವರವಾದ ಅ, ಉ, ಋ, ಓಕಾರಗಳ ಮುಂದೆ "ವ್" ಆಗಮವೂ, ಇಕಾರದ ಮುಂದೆ "ಯ್" ಆಗಮವೂ ನಿತ್ಯವಾಗಿ ಬರುವದು. ಉದಾ: ಜ್ಞಾನ+ಅನ್ನು=ಜ್ಞಾನವನ್ನು, ಗುಣ+ಆಗು=ಗುಣವಾಗು, ಗುರು + ಇಗೆ = ಗುರುವಿಗೆ, ಪಿತೃ + ಉ = ಪಿತೃವು, ಗೋ + ಉ = ಗೋವು, ಬುದ್ಧಿ + ಅನ್ನು = ಬುದ್ಧಿಯನ್ನು, ಬುದ್ಧಿಯಿಲ್ಲದ, ಬುದ್ಧಿಯುಳ್ಳ.

5. ದೇಶೀ ಶಬ್ದಗಳಲ್ಲಿ ಎಲ್ಲಾ ದೀರ್ಘಸ್ವರಗಳ ಮುಂದೆ ನಿತ್ಯವಾಗಿ "ಯ್" ಆಗಮ ಬರುವದು. ಉದಾ: ಕೈ + ಅನ್ನು = ಕೈಯನ್ನು, ಕಾ + ಉತ್ತಾನೆ = ಕಾಯುತ್ತಾನೆ.

ಆದರೆ ಆಕಾರಕ್ಕೆ ಉ, ಊ, ಒ, ಓಕಾರಗಳು ಪರವಾದಾಗ ಮಾತ್ರ "ವ"ಕಾರಾಗಮವೂ ಬರುತ್ತದೆ. ಉದಾ: ಆ + ಉದಕ = ಆವುದಕ, ಆ+ಊರು = ಆವೂರು, ಆ + ಒಲೆ= ಆವೊಲೆ, ಆ + ಓಲೆ = ಆವೋಲೆ.

6. ಸ್ವರಲೋಪದಿಂದಾಗಲಿ, ಆಗಮದಿಂದಾಗಲಿ ಪದರೂಢಿ ಕೆಡುವಲ್ಲಿ ಅಂತಾಕ್ಷರದ "ಇ" ಸ್ವರವು "ಕೀಯಾವಾಡಿ" ಎಂದೆನ್ನಿಸುವ "ೄ" ಒತ್ತಕ್ಷರವಾಗುವದು. ಉದಾ: ಮಾಡಿ + ಆನು = ಮಾಡ್ಯಾನು, ಅಲ್ಲಿ + ಆಗಲಿ = ಅಲ್ಲ್ಯಾಗಲಿ.

7. ಅವಧಾರಣಾರ್ಥಕ ಎ, ಏಕಾರವು ಅಥವಾ ವಿಶಂಕಾರ್ಥಕ ಒ, ಓಕಾರವು ಪರವಾದರೆ, "ಅ" ಸ್ವರದ ಮುಂದೆ

"ಲ್" ಆಗಮ ಬರುವದು. ಉದಾ: ಗರ್ವದಿಂದ+ಏ= ಗರ್ವದಿಂದಲೇ, ಸಂಗಡ+ಏ=ಸಂಗಡಲೇ, ಮಾಡದಲೇ, ಸಂಗಡ+ಓ=ಸಂಗಡಲೋ.

8 ದೇಶೀಶಬ್ದಗಳಲ್ಲಿ "ಎ" ಸ್ವರಕ್ಕೆ ಸಂಧಿಯಿಂದ ವಿಕಲ್ಪವಾಗಿ "ಅ" ಸ್ವರಾದೇಶ ಬರುವದು. ಉದಾ: ಹಳೆ+ಕನ್ನಡ= ಹಳಗನ್ನಡ, ತೆಗೆ+ದು=ತೆಗದು, ಹೊಡೆ+ದು=ಹೊಡದು.

34. ಕನ್ನಡವ್ಯಂಜನಸಂಧಿಯು ಹ್ಯಾಗೆ?

ಈ ವಿಷಯದ ವಿಧಿಗಳೊಳಗೆ ಸಾಮಾನ್ಯವಾಗಿ ಎಲ್ಲಾ ಪಕ್ಷಗಳಲ್ಲಿ ಪ್ರಯೋಗಿಸುವಂಥಾವು ಯಾವವಂದರೆ—

1. ಹಳಗನ್ನಡ, ಸಂಸ್ಕೃತ, ಅನ್ಯದೇಶ್ಯ ಶಬ್ದಗಳಲ್ಲಿ ಅನೇಕವು ಸ್ವರರಹಿತ ವ್ಯಂಜನಾಂತಗಳೇ, ಆದರೆ ಇಂಥಾ ಅಂತಾಕ್ಷರದ ಉಚ್ಚಾರಣೆಯು ಈಗಿನ ಕನ್ನಡ ಜನರಿಗೆ ಕಷ್ಟವಾಗುವ ಕಾರಣದಿಂದ ಶ್ರುತಿಕಷ್ಟ ತಪ್ಪಿಸುವದಕ್ಕೆ ಹೊಸಗನ್ನಡದಲ್ಲಿ ಅದಕ್ಕೆ "ಉ" ಸ್ವರ ಸೇರುವದು. ಉದಾ: ನೀರ್=ನೀರು, ಜಗತ್=ಜಗತ್ತು, ಸಲಾಂ=ಸಲಾಮು, ಅಪೀಲ್=ಅಪೀಲು. ಪರಂತು ಸಂಧಿಯಿಂದ ಇಂಥಾ ಶಬ್ದಕ್ಕೆ ವ್ಯಂಜನ ಆದಿಯಾದ ಪ್ರತ್ಯಯವಾಗಲಿ ಮತ್ತೊಂದು ಶಬ್ದವಾಗಲಿ ಮುಂದಾದರೆ, ಅನಿತ್ಯ "ಉ" ಸ್ವರಕ್ಕೆ ಲೋಪ ಬರುವದರಿಂದ, ಪೂರ್ವದ ಸ್ವರೂಪವನ್ನು ಹೊಂದಿದ ಪೂರ್ವಶಬ್ದದ ಸ್ವರರಹಿತ ಅಂತಾಕ್ಷರಕ್ಕೆ ಪರಶಬ್ದದ ಆದಿ ವ್ಯಂಜನವು ಒತ್ತಕ್ಷರವಾಗಿ ಸೇರುವದು. ಉದಾ: ಮೇಲು-ಮಾಳಿಗೆ=ಮೇಲ್ಮಾಳಿಗೆ, ತಾಳು-ಮೆ=ತಾಳ್ಮೆ.

2. ದ್ವಿತ್ವ (doubling) ಹೊಂದಿದ ಅಂತಾಕ್ಷರಕ್ಕೆ ಮತ್ತೊಂದು ವ್ಯಂಜನವು ಒತ್ತಕ್ಷರವಾಗಿ ಸೇರುವಲ್ಲಿ ಶ್ರುತಿಕಷ್ಟವಾಗದ ಹಾಗೆ ಆ ದ್ವಿತ್ವಕ್ಕೆ ಲೋಪ ಬರುವದು. ಉದಾ: ಕಲ್ಲು-

ಮಳೆ = ಕಲ್ಮಳೆ, ಅಡ್ಡ-ಜಾತಿ = ಅಡ್ಜಾತಿ, ಅನ್ನು-ದು = ಅನ್ದು = ಅಂದು.

3. ಸ್ವರರಹಿತ ರ್‌ಕಾರಕ್ಕೆ ಸಂಧಿಯಿಂದ ಮತ್ತೊಂದು ವ್ಯಂಜನವು ಮುಂದಾದರೆ, ರಕಾರಕ್ಕೆ ರೇಫಸ್ವರೂಪ ಬರುವದು. ಉದಾ: ಎದುರ್-ಕೊಳ್ಳು = ಎದುರ್ಗೊಳ್ಳು.

4. ಸ್ವರರಹಿತ ಅನುನಾಸಿಕಕ್ಕೆ ಸಂಧಿಯಿಂದ ಮತ್ತೊಂದು ವ್ಯಂಜನ ಮುಂದಾದರೆ, ಅದಕ್ಕೆ ಬಿಂದುಸ್ವರೂಪ ಬರೆಯುವದು ರೂಢಿಯಾಗಿದೆ. ಉದಾ: ಮುನ್-ಬಾಗಲು = ಮುಂಬಾಗಲು, ಕೆಮ್-ಜೋಳ = ಕೆಂಜೋಳ.

5. ಶ್ರುತಿ ಸರಳವಾಗುವ ಹಾಗೆ, ದೇಶೀ ಸಮಾಸದಲ್ಲಿ ಪರಪದದ ಆದಿವ್ಯಂಜನಗಳಾದ ಕ, ತ, ಪಕಾರಗಳಿಗೆ ವಿಕಲ್ಪವಾಗಿ ಗ, ದ, ಬಕಾರಗಳ ಆದೇಶ ಬರುವದು. ಉದಾ: ಹೊಸ + ಕನ್ನಡ = ಹೊಸಗನ್ನಡ, ಬೆಳೆ + ತಿಂಗಳು = ಬೆಳದಿಂಗಳು, ಕಣ್ಣು + ಪರಿ = ಕಣ್ಬರಿ.

ವಿಶೇಷ ಪ್ರಯೋಗದ ಸಂಧಿವಿಧಿಗಳನ್ನು ಮುಂದೆ 54, 70ನೆ ಉತ್ತರಗಳಲ್ಲಿ ನೋಡು.

Appendix: Marks of Punctuation.

ಉಪಪ್ರಕರಣ.

ಲೇಖನಾಂತರಚಿಹ್ನಗಳ ವಿವರ.

35. ಲೇಖನಚಿಹ್ನಗಳು ಯಾವವು?

ಕರ್ಣಾಟಕದ ಹಿರಿಯರು ಸಂಸ್ಕೃತ ಗ್ರಂಥಗಳನ್ನು ಅನುಸರಿಸಿ, ತಮ್ಮ ಬರಹದಲ್ಲಿ ವಾಕ್ಯಗಳ ಪದಗಳನ್ನೆಲ್ಲಾ ಒಂದಕ್ಕೊಂದು ಸಂಧಿ ಮಾಡಿ ಬರೆಯುವರು. ಈ ಪ್ರಕಾರ ಬರೆಯುವದು "ಸಂಹಿತಪಾಠ"ವೆಂದೆನ್ನಿಸುವದು. ಅದರಿಂದ ವಾಕ್ಯಗಳ ಉಚ್ಚಾರಣೆಯು ಸರ

ಳವಾಗುವದು ಸರಿ; ಪರಂತು ವಾಕ್ಯಗಳ ಅರ್ಥವನ್ನು ತಿಳಿಯುವದಕ್ಕೆ ಕಷ್ಟ ಬರುವದು. ಅದು ಕಾರಣ "ಪದಪಾತ"ವೆಂದೆನ್ನಿಸುವ ರೀತಿಯಿಂದ ವಾಕ್ಯಗಳ ಪದಗಳನ್ನು ಒಂದಕ್ಕೊಂದು ಅಗಲಿಸಿ, ಭಿನ್ನಭಿನ್ನವಾಗಿ ಬರೆಯುವ ಪದ್ಧತಿಯನ್ನು ಅನುಸರಿಸತಕ್ಕದ್ದು. ಇದಲ್ಲದೆ ಇಂಗ್ಲಿಷ ಗ್ರಂಥಗಳಲ್ಲಿ ವಾಕ್ಯಗಳ ವಿಭಾಗಗಳನ್ನೂ ಅರ್ಥವಿಶೇಷಗಳನ್ನೂ ಬರಹದಲ್ಲಿ ಕಾಣಿಸುವದಕ್ಕೆ ಲೇಖನಾಂತರಚಿನ್ಹಗಳನ್ನು ಪ್ರಯೋಗಿಸುವದು ಉಂಟು. ಈ ಪ್ರಯೋಗವನ್ನು ಹೊಸದಾಗಿ ಛಾಪಿಸುವ ಕನ್ನಡ ಪುಸ್ತಕಗಳಲ್ಲಿಯೂ ಅನುಸರಿಸುವದಕ್ಕೆ ಕೆಲವರು ಆರಂಭ ಮಾಡಿದ್ದಾರೆ. ಆ ಲೇಖನಾಂತರ ಚಿನ್ಹಗಳೂ, ಅವವುಗಳನ್ನು ಸೂಚಿಸುವ ಅರ್ಥವಿಶೇಷಗಳೂ ಯಾವವಂದರೆ—

, ಅಲ್ಪವಿರಾಮ	: ಸೂಚಕಚಿನ್ಹ
; ಅರ್ಧವಿರಾಮ	— ಸಂಬಂಧಕಚಿನ್ಹ
. ಪೂರ್ಣವಿರಾಮ	= ಸಮಾರ್ಥಕಚಿನ್ಹ
? ಪ್ರಶ್ನಚಿನ್ಹ	" " ವಿಶೇಷಕಚಿನ್ಹ
! ಸಂಬೋಧನಾಚಿನ್ಹ	{ } [ ] ( ) ಆವರಣಚಿನ್ಹ

* † ಈ ಗುರುತುಗಳ ಪ್ರಯೋಗವು "ಚಿತ್ರಿಕ ಹಂಸಪಾದ" ಗಳೆಂಬ ಚಿನ್ಹಗಳ ಪ್ರಯೋಗಕ್ಕೆ ಸಮಾನವಾಗಿದೆ.

II. Part: Etymology.

ಎರಡನೆ ಭಾಗ.

ಶಬ್ದಖಂಡ.

---

1. ಶಬ್ದಪ್ರಕರಣ. Formation of Words.

ಶಬ್ದನಿರ್ಣಯ (Definitions of a Word).

36. ಶಬ್ದವೆಂದರೇನು?

ಒಂದೇ ಅರ್ಥವನ್ನು ಹೇಳುವ ಅಕ್ಷರಗಳ ಗುಂಪು "ಶಬ್ದ" (Word) ಎಂದು ವರ್ತಿಸುವದು. ಅದರ ಮೂಲಾಕ್ಷರಗಳು ಮಾತ್ರ ಇದ್ದರೆ, "ಪ್ರಕೃತಿ" (Crude Form) ಎಂದೆನ್ನಿಸುವದು. ಪ್ರಕೃತಿಯ ತುದಿಯಲ್ಲಿ ಸೇರುವ ಬೇರೆಬೇರೆ ಅಕ್ಷರಗಳಿಗೆ "ಪ್ರತ್ಯಯ" (Affix) ಎಂಬ ಹೆಸರು. ಅಂಥಾ ಪ್ರತ್ಯಯಗಳನ್ನು ಹೊಂದುವ ಶಬ್ದವು "ಪದ" (Inflected Word) ಎಂದು ವ್ಯವಹರಿಸುವದು.

37. ಶಬ್ದಗಳಲ್ಲಿ ವಿಶೇಷಿಸತಕ್ಕ ಲಕ್ಷಣಗಳು ಯಾವವು?

ಅವುಗಳ ವಿವಿಧವಾದ ಜಾತಿ ವಾಗರ್ಥ ರೂಪ ಭೇದಗಳು ಇವನ್ನೆಲ್ಲಾ ವಿಚಾರಿಸಿ ನಿಶ್ಚಯಿಸುವದೇ "ಶಬ್ದವ್ಯುತ್ಪತ್ತಿ" ಎಂದೆನ್ನಿಸುವದು.

ಶಬ್ದಜಾತಿಭೇದಗಳು (Distinctions of Words according to their Origin).

38. ಜಾತಿಭೇದದಿಂದ ಕನ್ನಡಶಬ್ದಗಳು ಎಷ್ಟು ವಿಧವು?

ಈಗಿನ ಕನ್ನಡ ಜನರು ಪ್ರಯೋಗಿಸುವ ಶಬ್ದಗಳಲ್ಲಿ ಆರಂಭದಿಂದ ಅವರ ಪುರಾತನರು ಪ್ರಯೋಗಿಸುತ್ತಾ ಬಂದ ಶುದ್ಧಕನ್ನಡ

ಶಬ್ದಗಳೇ ಹೊರ್ತು, ಇನ್ನು ಬೇರೆ ಭಾಷೆಗಳಿಂದ ಕರ್ಣಾಟಕದೊಳಗೆ ಸೇರಿದ ಶಬ್ದಗಳು ಇರಲಾಗಿ, ಬಲ್ಲವರು ಈಗಿನ ಕನ್ನಡ ಶಬ್ದಗಳಲ್ಲಿ, ಅವವುಗಳ ವಿವಿಧ ಉತ್ಪತ್ತಿಯ ಪ್ರಕಾರ, 5 ಜಾತಿಭೇದಗಳನ್ನು ವಿಶೇಷಿಸುತ್ತಾರೆ. ಅವು ಯಾವವೆಂದರೆ —

"ತತ್ಸಮ" (Pure Sanskrit), "ತದ್ಭವ" (Corrupted Sanskrit), "ದೇಶ್ಯ" (Pure Canarese), "ಅನ್ಯದೇಶ್ಯ" (Foreign), "ಗ್ರಾಮ್ಯ" (Vulgar) ಎಂಬೀ ಐದು.

39. ತತ್ಸಮಶಬ್ದಗಳು ಯಾವವು?

ಸಂಸ್ಕೃತದಿಂದ ವಿಕೃತಿ ಇಲ್ಲದೆ ಕನ್ನಡದಲ್ಲಿ ಸೇರಿದ ಶಬ್ದಗಳು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಸಮವಾಗಿ ಪ್ರಯೋಗಿಸುವ ಕಾರಣ "ತತ್ಸಮ"ವೆಂದು ವರ್ತಿಸುವವು.

ಉದಾ: ಶೂರ, ಪ್ರೀತಿ, ಗುರು, ಶತ್ರು, ಗೋ — ಇತ್ಯಾದಿ.

ಪ್ರತ್ಯಯಾನುಬಂಧನೆಗೋಸ್ಕರ ಕನ್ನಡ ಸಂಧಿವಿಧಿಗಳಿಗೆ ಅನುಸಾರವಾಗುವ ಹಾಗೆ ಕೆಲವು ಸಂಸ್ಕೃತಶಬ್ದಗಳ ಅಂತಾಕ್ಷರಕ್ಕೆ ಕನ್ನಡದಲ್ಲಿ ಬರುವ ಆದೇಶದಿಂದ ಅವುಗಳ ತತ್ಸಮತ್ವವು ಭಂಗವಾಗದು. ಆದರೆ ಸಮಾಸದಲ್ಲಿ ಅವುಗಳಿಗೆ ತಿರಿಗಿ ಮೂಲಸ್ವರೂಪ ಬರುವದು.

ಉದಾ: ಲಕ್ಷ್ಮೀ = ಲಕ್ಷ್ಮಿ, ವಿಶ್ವಪಾ = ವಿಶ್ವಪ, ಗಂಗಾ = ಗಂಗೆ, ವೀಣಾ = ವೀಣೆ, ಪ್ರಶ್ನಾ = ಪ್ರಶ್ನೆ, ಸಂಜ್ಞಾ = ಸಂಜ್ಞೆ, ಬಂಧನ = ಬಂಧನೆ, ಸೂಚನಾ = ಸೂಚನೆ, ಛೇದನ = ಛೇದನೆ, ಮರುತ್ = ಮರುತ್ತು, ಜಗತ್ = ಜಗತ್ತು, ಮಹತ್ = ಮಹತ್ತು, ಮನಸ್ = ಮನಸ್ಸು = ಮನ, ತೇಜಸ್ = ತೇಜಸ್ಸು = ತೇಜ, ತಪಸ್ = ತಪಸ್ಸು = ತಪ.

40. ತದ್ಭವಶಬ್ದಗಳು ಯಾವವು?

ಸಂಸ್ಕೃತದಲ್ಲಿ ಇರುವಂತೆ ಅಲ್ಲಾ, ವಿಕಾರವಾಗಿ ಕನ್ನಡದಲ್ಲಿ ಪ್ರಯೋಗಿಸುವ ಸಂಸ್ಕೃತಶಬ್ದಗಳು "ತದ್ಭವ"ವೆಂದೂ, "ಅಪಭ್ರಂಶ"ವೆಂದೂ ವ್ಯವಹರಿಸುವವು. ಅವುಗಳಿಗೆ ಬಂದ ವಿಕೃತಿಗಳ ಕಾರಣವೇನಂದರೆ, ಸಂಸ್ಕೃತಶಬ್ದಗಳ ಶುದ್ಧ ಉಚ್ಚಾರಣೆಯು ಕನ್ನಡ

ಜನರಿಗೆ ಶ್ರುತಿಕಷ್ಟವಾದ್ದರಿಂದ, ಅವರು ತಮ್ಮ ದೇಶೀಪ್ರಯೋಗಾನುಸಾರವಾಗಿ ಶಿಥಿಲ ಉಚ್ಚಾರಣೆಯಿಂದ ಆ ಶಬ್ದಗಳನ್ನು ನಾನಾವಿಧವಾಗಿ ವಿಕಾರಿಸಿದರು. ಈ ಪ್ರಕಾರ ಹುಟ್ಟಿದ ವಿಕೃತಿಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ—

1. ಪರುಷಾಕ್ಷರವು ಸರಳಾಕ್ಷರವಾಯಿತು: ಕಾಚ = ಗಾಜು, ಅಟವಿ = ಅಡವಿ, ಜಟಾ = ಜಡೆ, ಸೂಚಿ = ಸೂಜಿ.
2. ಮಹಾಪ್ರಾಣವು ಅಲ್ಪಪ್ರಾಣವಾಯಿತು: ಖಂಡ = ಕಂಡ, ಘಂಟಾ = ಗಂಟೆ, ಪಥ = ಪತ, ಅಚ್ಛ = ಅಚ್ಚ.
3. ಶ, ಷಕಾರಗಳು ಸಕಾರವಾದವು: ಶಶಿ = ಸಸಿ, ಶುಂಠಿ = ಸುಂಟಿ, ಶಿಥಿಲ = ಸಡಿಲು, ವೇಷ = ವೇಸ, ದೋಷ = ದೋಸ.
4. ಯಕಾರವು ಜಕಾರವಾಯಿತು: ಯೋಗಿ = ಜೋಗಿ, ಯಾತ್ರೆ = ಜಾತ್ರೆ, ಯವೆ = ಜವೆ.
5. ಪ, ಬ, ಮಕಾರಗಳು ವಕಾರವಾದವು: ದೀಪಿಕಾ = ದೀವಿಗೆ, ಕಬಳ = ಕವಳ, ಅಮರಿ = ಅವರೆ, ಸಮ = ಸವ.
6. ವಕಾರವು ಬಕಾರವಾಯಿತು: ವೇಗ = ಬೇಗ, ವೀಥಿ=ಬೀದಿ, ವಾಸಿ = ಬಾಚಿ, ವರ್ಣ = ಬಣ್ಣ.
7. ಪ, ಫಕಾರಗಳು ಹಕಾರವಾದವು: ಪಣ=ಹಣ, ಪಕ್ಷಿ=ಹಕ್ಕಿ, ಫಲಕ = ಹಲಿಗೆ, ಫೋಲಿಕಾ = ಹೋಳಿಗೆ.
8. ಡ, ಲಕಾರಗಳು ಳಕಾರವಾದವು: ದಾಡಿಮ = ದಾಳಿಂಬ, ಕಂಬಲ = ಕಂಬಳಿ, ನಾಡಿ = ನಾಳಿ.
9. ದೀರ್ಘಸ್ವರಗಳು ಅದರದರ ಹ್ರಸ್ವವಾದವು: ಕಾರ್ಯ = ಕಜ್ಜ, ಕಸ್ತೂರಿ = ಕತ್ತುರಿ, ಕಾಷ್ಠ = ಕಟ್ಟಿಗೆ, ಶ್ರೇಷ್ಠಿ = ಸೆಟ್ಟಿ.
10. ಉ, ಊಕಾರಗಳು ಒ, ಓಕಾರಗಳಾದವು: ಮೂಢ = ಮೋಡ, ತುಲಸಿ = ತೊಳಸಿ, ಕುಡ್ಯ = ಗೋಡೆ.
11. ಋಕಾರವು ರಿ, ಅಥವಾ ಇಕಾರವಾಯಿತು: ಋಣ = ರಿಣ, ಋಷಿ = ರಿಸಿ, ಮೃಗ = ಮಿಗ, ಶೃಂಗ = ಸಿಂಗ.

12. ಕೆಲವು ಪದಗಳಲ್ಲಿಯು ಹಕಾರವು ಲೋಪವಾಯಿತು: ಪ್ರಗ್ರಹ = ಹಗ್ಗ, ಸಹಜ = ಸಾಜ; ಸಾಹಸ = ಸಾಸ.

13. ಕೆಲವು ಪದಗಳಲ್ಲಿಯು ಯಕಾರವು ಲೋಪವಾಯಿತು: ನಿಯಮ = ನೇಮ, ವಿನಾಯಕ = ಬೆನಕ.

ಸಂಯುಕ್ತವ್ಯಂಜನಗಳ ಶ್ರುತಿಕಷ್ಟ ತಪ್ಪಿಸುವದಕ್ಕೆ ಉಂಟಾದ ವಿಕೃತಿಗಳು ಯಾವವಂದರೆ—

1. ಎರಡು ವ್ಯಂಜನಗಳ ನಡುವಿನಲ್ಲಿ ಒಂದು ಸ್ವರವನ್ನು ಸೇರಿಸಿದರು. ಉದಾ: ವರ್ಷ = ವರುಷ, ಯತ್ನ = ಜತನ, ಚರ್ಯೆ = ಚರಿಗೆ, ಭಕ್ತಿ = ಬಕುತಿ, ಮುಕ್ತಿ = ಮುಕುತಿ.

2. ಎರಡು ವ್ಯಂಜನಗಳಲ್ಲಿ ಒಂದನ್ನು ಲೋಪಿಸಿದರು. ಉದಾ: ಸ್ಫಟಿಕ = ಪಟಿಕ, ಸ್ಪರ್ಶ = ಪರುಸ, ಕ್ಷಾರ = ಕಾರ.

3. ಎರಡು ವ್ಯಂಜನಗಳನ್ನು ಒಂದರ ದ್ವಿತ್ವಕ್ಕೆ ವಿಕಾರಿಸಿದರು. ಉದಾ: ಅರ್ಘ = ಅಗ್ಗ, ಕೂರ್ಪಾಸ = ಕುಪ್ಪಸ, ಶೂನ್ಯ = ಸೊನ್ನೆ.

ಕಡಿಮೆ ವಿಕೃತಿಗಳನ್ನು ಮುಂದಿನ ಉದಾಹರಣೆಗಳಿಂದಲೂ ರೂಢಿಯಿಂದಲೂ ತಿಳುಕೊಳ್ಳತಕ್ಕದ್ದು.

ಜ್ಞಾನ = ಗ್ನಾನ, ಸಂಧ್ಯೆ = ಸಂಜೆ, ವೃಷಭ = ಬಸವ, ವೈಶಾಖ = ಬೇಸಿಗೆ, ದೇವಾಗಾರ = ದೇಗಲ, ವಿಜ್ಞಾಪನ = ಬಿನ್ನಹ, ವಿಷಮ = ಬೆಸಿ, ಪೂರ್ಣಿಮಾ = ಹುಣ್ಣಿವಿ, ಆಜ್ಞಾ = ಆಣೆ, ಧ್ಯಾನ = ಜಾನ.

41. ದೇಶ್ಯಶಬ್ದಗಳು ಯಾವವು?

ಅನ್ಯ ಭಾಷೆಗಳಿಂದ ಬಾರದೆ ಆರಂಭದಿಂದ ಕನ್ನಡ ದೇಶದಲ್ಲಿ ಇದ್ದ ಶಬ್ದಗಳು "ದೇಶ್ಯ" (=ದೇಶೀ) ಎಂದೂ "ಅಚ್ಚಗನ್ನಡ"ವೆಂದೂ ವರ್ತಿಸುವವು. ಆದರೆ ಹಳಗನ್ನಡ ಪ್ರಯೋಗಕ್ಕೂ ಹೊಸಗನ್ನಡ ಪ್ರಯೋಗಕ್ಕೂ ಕೆಲವು ವಿಷಯುಗಳಲ್ಲಿ ಕಾಲಾಂತರದಿಂದ ಬಿಡುಗಡೆ ಬಂದದೆ. ಉದಾ: ನೀರ್ = ನೀರು, ಕಾಲ್ = ಕಾಲು, ಪಾಲ್ = ಹಾಲು, ಪೇೞ್ = ಹೇಳು, ಮುಱಿ = ಮುರಿ, ಕುೞಿ = ಕುಣಿ, ಬಾೞೆ = ಬಾಳೆ, ಮೂಱು = ಮೂರು.

42. ಅನ್ಯದೇಶ್ಯಶಬ್ದಗಳು ಯಾವವು?

ಕರ್ಣಾಟಕ ದೇಶದಲ್ಲಿ ಮುಂಚೆ ಧೊರೆತನ ಮಾಡಿದ ತುರುಕರು, ಈಗ ಹಿಂದುಸ್ಥಾನವನ್ನು ಆಳುವ ಇಂಗ್ಲಿಷರು, ಇವರು ಮೊದಲಾದ ಅನ್ಯದೇಶಸ್ಥರ ಸಹವಾಸದಿಂದ ಕನ್ನಡದಲ್ಲಿ ಸೇರಿದ ಶಬ್ದಗಳು "ಅನ್ಯದೇಶ್ಯ" ಎಂದು ವರ್ತಿಸುವವು. ಅನ್ಯದೇಶ್ಯ ಶಬ್ದಗಳನ್ನು ಪ್ರಯೋಗಿಸುವದರಲ್ಲಿ ಕನ್ನಡಜನರು ಆ ಶಬ್ದಗಳನ್ನು ತದ್ಭವಗಳಂತೆ ನಾನಾ ವಿಧವಾಗಿ ವಿಕಾರಿಸುತ್ತಾರೆ.

ಉದಾ: ಸಲಾಂ = ಸಲಾಮು, ದೌಲತ್ = ದವಲತು, ಮಾಮ್ಲೆದಾರ್ = ಮಾಮಲೆದಾರ, ಕೋರ್ಟ್ = ಕೊಡತ್ತಿ, ಕೊಲ್ಲೆಕ್ಟರ್ = ಕಲಕಟರ ಇತ್ಯಾದಿ.

43. ಗ್ರಾಮ್ಯಶಬ್ದಗಳು ಯಾವವು?

ಗ್ರಾಮಸ್ಥರು ವ್ಯಾಕರಣವಿರುದ್ಧವಾಗಿ ಪ್ರಯೋಗಿಸುವ ಅಪಶಬ್ದಗಳು. ಉದಾ: ಊರಾಗೆ, ಹೋಗೋಕೆ, ಬರೋಕೆ, ಬತ್ತೀನಿ, ಹೊಯಿತೀನಿ, ಉಣ್ಣೋಕೆ, ಮೇಗೆ = ಮ್ಯಾಗೆ.

ಶಬ್ದವಾಗರ್ಥಭೇದಗಳು. (Distinctions of Words according to their Parts of Speech).

44. ವಾಗರ್ಥಭೇದದಿಂದ ಶಬ್ದಗಳು ಎಷ್ಟು ವಿಧವು?

ಸಂಸ್ಕೃತವ್ಯಾಕರಣಕಾರರು ಶಬ್ದಗಳಲ್ಲಿ "ನಾಮಪದ" (Nouns), "ಕ್ರಿಯಾಪದ" (Verbs), "ಅವ್ಯಯ" (Indeclinables) ಎಂಬ 3 ಮುಖ್ಯ ವಿಶೇಷಗಳನ್ನು ಮಾಡಿ, ಕಡಿಮೆ ಶಬ್ದವಿಧಗಳೆಲ್ಲ ಇವುಗಳ ಉಪವಿಶೇಷಗಳೆಂದೆಣಿಸಿದ್ದಾರೆ. ಹ್ಯಾಗಂದರೆ ಕ್ರಮದಿಂದ ವಿಭಕ್ತಿಪ್ರತ್ಯಯಗಳನ್ನು ಪಡಕೊಳ್ಳುವ ಪದಗಳೆಲ್ಲಾ ನಾಮಪದಗಳೆಂದೂ, ಕ್ರಿಯೆಗಳನ್ನು ಹೇಳುವ ಪದಗಳೆಲ್ಲಾ ಕ್ರಿಯಾಪದಗಳೆಂದೂ ಇವೆರಡು ಲಕ್ಷಣವಿಲ್ಲದ ಕಡಿಮೆ ಶಬ್ದಗಳೆಲ್ಲಾ ಅವ್ಯಯಗಳೆಂದೂ ತಿಳುಕೊಳ್ಳತಕ್ಕದ್ದು.

2. ನಾಮಪದಪ್ರಕರಣ. Nouns.

ನಾಮನಿರ್ಣಯ (Classification of Nouns).

45. ನಾಮಪದವಂದರೇನು?

ಜೀವಾಜೀವ ವಸ್ತುಗಳ ಹೆಸರುಗಳನ್ನೂ ಅವುಗಳ ಗುಣ ಕ್ರಿಯಾದಿಗಳ ಹೆಸರುಗಳನ್ನೂ ಹೇಳುವ ಶಬ್ದಗಳೆಲ್ಲಾ "ನಾಮ ಪದ"ಗಳೆಂದೆನ್ನಿಸುವವು. ಅವುಗಳೊಳಗೆ ವಸ್ತುಗಳನ್ನು ಹೇಳುವಂಥಾವು "ವಸ್ತುವಾಚಕನಾಮುಗಳು (Concrete Nouns) ಎಂದೂ, ಇವುಗಳ ಸ್ಥಿತಿಗುಣ ಕ್ರಿಯಾದಿಗಳನ್ನು ಹೇಳುವಂಥಾವು "ಭಾವವಾಚಕನಾಮುಗಳು" (Abstract Nouns) ಎಂದೂ ವರ್ತಿಸುವವು. ವಸ್ತುವಾಚಕನಾಮುಗಳಲ್ಲಿ ಬಲ್ಲವರು "ರೂಢನಾಮುಗಳು" (Common Nouns), "ಅನ್ವರ್ಥನಾಮುಗಳು" (Denominative Nouns), "ಅಂಕಿತನಾಮುಗಳು" (Proper Nouns) ಎಂಬ 3 ವಿಶೇಷಗಳನ್ನು ಮಾಡುತ್ತಾರೆ. ಹ್ಯಾಗಂದರೆ, ವಸ್ತುಗಳನ್ನು ಪ್ರಸಿದ್ಧ ಪಡಿಸುವದಕ್ಕೆ ಕಾಲಾಂತರದಲ್ಲಿ ಪ್ರಯೋಗದಿಂದ ಅವುಗಳಿಗೆ ರೂಢಿ ಬಿದ್ದ ಸಾಮಾನ್ಯ ಹೆಸರುಗಳೇ ರೂಢನಾಮುಗಳೆಂದು ವರ್ತಿಸುವವು. ಇವುಗಳೊಳಗೆ ಪ್ರತ್ಯೇಕ ವಸ್ತುವನ್ನು ಅಲ್ಲಾ, ಅದೇ ಬಗೆಯ ವಸ್ತುಗಳನ್ನೆಲ್ಲಾ ಸಮುದಾಯಾರ್ಥವಾಗಿ ಹೇಳುವಂಥಾವು "ಸಂಘವಾಚಕನಾಮುಗಳು" (Collective Nouns) ಎಂದೆನ್ನಿಸಿಕೊಳ್ಳುವವು. ಅನ್ವರ್ಥನಾಮುಗಳು ಅಂದರೆ ಆ ಆ ಮನುಷ್ಯರ ಉದ್ಯೋಗ ಗುಣಾದಿಗಳಿಗೆ ಅನುರೂಪಿಸಿದ ಹೆಸರುಗಳು. ಅಂಕಿತನಾಮುಗಳು ಅಂದರೆ ಅದೇ ಸಾಮಾನ್ಯ ನಾಮ ಧರಿಸುವಂಥ ಸಕಲ ವಸ್ತುಗಳಲ್ಲಿ ಪ್ರತಿ ವಸ್ತುವನ್ನು ಪ್ರತ್ಯೇಕವಾಗಿ ವಿಶೇಷಿಸುವದಕ್ಕೆ ಅವವಕ್ಕೆ ಇಟ್ಟ ಹೆಸರುಗಳೇ. ಉದಾ:

I. ವಸ್ತುವಾಚಕನಾಮುಗಳು:

1. ರೂಢನಾಮುಗಳು—ಮನುಷ್ಯ, ದೇಶ, ಪರ್ವತ, ನದಿ, ವೃಕ್ಷ, ಅರಸು, ಊರು, ಮನೆ, ಮಣ್ಣು, ಗಿಡ, ಹುಳ.

ಸಂಘವಾಚಕಗಳು—ಬ್ರಾಹ್ಮಣಿಕೆ, ಪರಿಷೆ, ಜೀವರಾಶಿ, ವನ.

2. ಅನ್ವರ್ಥನಾಮಗಳು—ಶಾಸ್ತ್ರಿ, ಚಿತ್ರಗಾರ, ಬುದ್ಧಿವಂತ, ಉದ್ಯೋಗಸ್ಥ, ವ್ಯಾಪಾರಸ್ಥ, ರೋಗಿಷ್ಠ, ಬೋಧಕ, ಗಾಣಿಗ, ಕುಂಬಾರ.
3. ಅಂಕಿತನಾಮಗಳು—ದೇವದಾಸ, ಸುಭದ್ರೆ, ಹಿಂದುಸ್ಥಾನ, ಹಿಮಾಲಯ, ಗಂಗೆ, ಮುಂಬಯಿ, ಹೊಸಹಳ್ಳಿ.

II. ಭಾವವಾಚಕನಾಮಗಳು:

1. ಕ್ರಿಯಾವಾಚಕಗಳು—ಗಮನ, ನಾದ, ಆಟ, ನಂಬಿಕೆ.
2. ಸ್ಥಿತಿವಾಚಕಗಳು—ಶಾಂತಿ, ಭಯ, ಬಡತನ, ಮುಪ್ಪು.
3. ಗುಣವಾಚಕಗಳು—ಪ್ರಕಾಶ, ಭಾರ, ಗರ್ವ, ದೊಡ್ಡಸ್ತಿಕೆ.

ನಾಮಪದಗಳ ಲಕ್ಷಣಗಳು (Properties of Nouns).

46. ನಾಮಗಳಿಗೆ ಬರುವ ಲಕ್ಷಣಗಳು ಯಾವವು?

"ಲಿಂಗ" (Gender), "ವಚನ" (Number), "ವಿಭಕ್ತಿ" (Case) ಎಂಬ ಮೂರು ವಿಧದ ಲಕ್ಷಣಗಳನ್ನು ನಾಮಪದಗಳಲ್ಲಿ ವಿಶೇಷಿಸುವದು ಉಂಟು.

ಲಿಂಗ (Gender).

47. ಲಿಂಗ ಎಷ್ಟು ವಿಧವು?

"ಪುಲ್ಲಿಂಗ" (Masculine), "ಸ್ತ್ರೀಲಿಂಗ" (Feminine), "ನಪುಂಸಕಲಿಂಗ" (Neuter) ಎಂಬ 3 ವಿಧವು. ಕನ್ನಡದಲ್ಲಿ ಲಿಂಗಗಳ ವ್ಯವಸ್ಥೆ ಹ್ಯಾಗಂದರೆ—ಜ್ಞಾನಜೀವಿಗಳೊಳಗೆ ಪುರುಷರನ್ನು ಹೇಳುವ ನಾಮಪದಗಳಿಗೆ ಪುಲ್ಲಿಂಗವೂ, ಸ್ತ್ರೀಯರನ್ನು ಹೇಳುವ ನಾಮಪದಗಳಿಗೆ ಸ್ತ್ರೀಲಿಂಗವೂ, ಜ್ಞಾನವಿಲ್ಲದ ಕಡಿಮೆ ಎಲ್ಲಾ ಚರಾಚರ ವಸ್ತುಗಳನ್ನೂ ಅವುಗಳ ಗುಣ ಕ್ರಿಯಾದಿಗಳನ್ನೂ ಹೇಳುವ ನಾಮಪದಗಳಿಗೆಲ್ಲಾ ನಪುಂಸಕಲಿಂಗವೂ ಬರುವದು.

48. ಈ ವಿಧಿಗೆ ಅಪವಾದಗಳು (exceptions) ಯಾವವು?

1. "ಸೂರ್ಯ, ಚಂದ್ರ, ಗ್ರಹಗಳು" ಜ್ಞಾನವಿಲ್ಲದ ನಕ್ಷತ್ರಲೋಕಗಳಾಗಿದ್ದಾಗ್ಯೂ, ಅವುಗಳ ಹೆಸರುಗಳಿಗೆ ವಿಕಲ್ಪವಾಗಿ ಪುಲ್ಲಿಂಗ ಬರುವದು; ಯಾಕಂದರೆ ಕನ್ನಡ ಹಿರಿಯರು ಅವುಗಳನ್ನು ದೇವತೆಗಳೆಂದು ಆರಾಧಿಸಿದರು. ಅದೇ ಕಾರಣದಿಂದ—ಕೂರ್ಮ, ವರಹ, ವೃಷಭ (= ಬಸವ) ಮೊದಲಾದ ನಪುಂಸಕ ನಾಮಗಳಿಗೆ ವಿಕಲ್ಪವಾಗಿ ಪುಲ್ಲಿಂಗ ಬರುವದು.
2. "ಶಿಶು, ಕೂಸು, ಮಗು, ಆಳು" ಎಂಬ ಹೆಸರುಗಳು ಮನುಷ್ಯರನ್ನು ಹೇಳಿದಾಗ್ಯೂ, ಅವುಗಳನ್ನು ಧರಿಸುವವರಿಗೆ ಜ್ಞಾನವು ಇನ್ನು ಹುಟ್ಟಲಿಲ್ಲವೆಂದು ಆ ನಾಮಗಳಿಗೆ ನಪುಂಸಕಲಿಂಗ ಕೊಡುತ್ತಾರೆ. ಅದೇ ಕಾರಣದಿಂದ "ದೇವತೆ, ಹೆಂಡತಿ, ತೊತ್ತು" ಮುಂತಾದ ಕೆಲವು ಸ್ತ್ರೀವಾಚಕಗಳಿಗೆ ಅಸಹ್ಯವೃತ್ತ್ಯರ್ಥದಲ್ಲಿ ವಿಕಲ್ಪವಾಗಿ ನಪುಂಸಕಲಿಂಗ ಬರುವದು.
3. "ಜನ" ಎಂಬ ನಾಮಪದಕ್ಕೆ ಏಕವಚನದಲ್ಲಿ ನಪುಂಸಕಲಿಂಗವು, ಬಹುವಚನದಲ್ಲಿ ಪುಲ್ಲಿಂಗವು ಬರುವದು. ಉದಾ: ಬಹು ಜನ ಕೂಡಿತು, ಬಹಳ ಜನರು ಬಂದರು. "ಸಜ್ಜನ, ದುರ್ಜನ" ಎಂಬದಕ್ಕೆ ಏಕವಚನದಲ್ಲಿಯೂ ಪುಲ್ಲಿಂಗ ಬರುವದು.

ವಚನ (Number.)

49. ನಾಮಪದಗಳಿಗೆ ಬರುವ ವಚನವಿಶೇಷಗಳು ಎಷ್ಟು?

"ಏಕವಚನ" (Singular), "ಬಹುವಚನ" (Plural) ಎಂಬ ಎರಡು ವಿಧವು. ಏಕವಚನವು ಒಂದು ವಸ್ತುವನ್ನು, ಬಹುವಚನವು ಅನೇಕ ವಸ್ತುಗಳನ್ನು ಹೇಳುವದು.

50. ಏಕವಚನವನ್ನೂ ಬಹುವಚನವನ್ನೂ ವಿಶೇಷಿಸುವದು ಹ್ಯಾಗೆ?

ಈ ವಿಷಯದ ವಿಧಿಗಳು ಯಾವವಂದರೆ—

1. ನಾಮಪದಗಳ ಬರೆ ಪ್ರಕೃತಿರೂಪವು ಏಕತ್ವವನ್ನು ಹೇಳು ವದು. ಅಕಾರಾಂತ ಪುರುಷವಾಚಕಗಳಿಗೆ ಮಾತ್ರ ಏಕ ವಚನದಲ್ಲಿ ಲಿಂಗಸೂಚಕ "ಅನು" ಅಚ್ಪ್ರತ್ಯಯವೂ, ಅವು ಗಳಿಂದ ಹುಟ್ಟಿದ ಸ್ತ್ರೀವಾಚಕಗಳಿಗೆ "ಆಳು" ಅಚ್ಪ್ರತ್ಯ ಯವೂ ಹತ್ತುವದು.
2. ಬಹುವಚನದಲ್ಲಿ ಅಕಾರಾಂತ ಪುಂಸ್ತ್ರೀವಾಚಕಗಳಿಗೆ "ಅರು" ಪ್ರತ್ಯಯವು ಬರುವದು. ನಪುಂಸಕ ಅಕಾರಾಂ ತಗಳಿಗೂ, ಪುಂಸ್ತ್ರೀನಪುಂಸಕ ಇ, ಎ, ಉ, ಋಕಾರಾಂ ತಗಳಿಗೂ, "ಗಳು" ಪ್ರತ್ಯಯ ಹತ್ತುವದು.

ಈ ವಿಧಿಗಳ ಉದಾಹರಣೆಗಳನ್ನು ಮುಂದೆ ಬರೆದ ವಿಭಕ್ತಿ ರೂಪಮಾಲೆಯಲ್ಲಿ ನೋಡತಕ್ಕದ್ದು.

51. ಈ ವಿಧಿಗೆ ಅಪವಾದಗಳು ಯಾವವು?

1. "ಸ್ತ್ರೀ, ಅತ್ತೆ, ಸೊಸೆ, ಹುಡುಗಿ, ಮುದುಕಿ, ತಂಗಿ, ಬೀ ಗಿತಿ, ತೊತ್ತು=ತೊತ್ತಿ, ಸೂಳೆ" ಮುಂತಾದ ಕೆಲವು ಇ ಎಕಾರಾಂತ ಸ್ತ್ರೀವಾಚಕಗಳಿಗೆ ಬಹುವಚನದಲ್ಲಿ "ಅರು" ಪ್ರತ್ಯಯ ಹತ್ತುವದು. ಉದಾ: ಸ್ತ್ರೀ—ಸ್ತ್ರೀಯರು, ಅತ್ತೆ—ಅತ್ತೆಯರು.
2. "ಅಪ್ಪ, ಅಣ್ಣ, ತಮ್ಮ, ಅವ್ವ, ಅಮ್ಮ, ಅಕ್ಕ, ಮಾವ, ಭಾವ" ಮುಂತಾದ ಕೆಲವು ಬಂಧುವಾಚಕಗಳಿಗೆ ಬಹು ವಚನದಲ್ಲಿ ಹಳಗನ್ನಡ ಪ್ರಯೋಗದಿಂದ "ಅಂದಿರು" ಎಂ ಬದೂ, ಹೊಸಗನ್ನಡ ಪ್ರಯೋಗದಿಂದ "ಗಳು" ಎಂಬದೂ ಹತ್ತುವದು. ಉದಾ: ಅಪ್ಪಂದಿರು=ಅಪ್ಪಗಳು, ತಮ್ಮಂದಿ ರು=ತಮ್ಮಗಳು; ಗಂಡ ಎಂಬದಕ್ಕೆ ಗಂಡಂದಿರು, ಗಂಡರು ಎಂಬ 2 ರೂಪಗಳು ಬರುವವು.
3. ಇನ್ನು ಅಪವಾದಗಳಾದ ಬಹುವಚನದ ರೂಪಗಳು ಯಾ ವವಂದರೆ—

ಮಗನು, ಮಗಳು, ಮಗು = ಮಕ್ಕಳು; ಹೆಂಡತಿ = ಹೆಂಡರು; ಗಂಡಸು, ಗಂಡಸರು = ಗಂಡಸುಗಳು; ಹೆಂಗಸು, ಹೆಂಗಸರು = ಹೆಂಗಸುಗಳು; ಅರಸ, ಅರಸು, ಅರಸರು = ಅರಸುಗಳು = ಅರಸರುಗಳು; ಜನ, ಜನರು = ಜನಗಳು = ಜನರುಗಳು.

4. "ಅವ್ವ, ಅಮ್ಮ, ಅಕ್ಕ" ಎಂಬವು ಅಕಾರಾಂತ ಸ್ತ್ರೀವಾಚಕಗಳಾಗಿದ್ದಾಗ್ಯೂ, ಅವುಗಳಿಗೆ ಏಕವಚನದಲ್ಲಿ "ಅಳು" ಪ್ರತ್ಯಯವಲ್ಲ, "ಅನು" ಪ್ರತ್ಯಯ ಹತ್ತುವದು. ಅವ್ವನು, ಅಮ್ಮನು, ಅಕ್ಕನು. ಅದು ಕಾರಣ ಇವುಗಳಿಗೂ "ಅಪ್ಪ, ಅಣ್ಣ, ತಮ್ಮ, ಮಾವ, ಭಾವ, ಅಯ್ಯ" ಎಂಬವುಗಳಿಗೂ, ಸನ್ಮಾನಿಸುವ ಪೂಜ್ಯಾರ್ಥದಲ್ಲಿ "ಅವರು" ಎಂಬದನ್ನು ಸೇರಿಸುವದರಿಂದ "ಅಪ್ಪನವರು, ಅವ್ವನವರು, ಅಣ್ಣನವರು, ಅಕ್ಕನವರು, ಅಯ್ಯನವರು" ಮೊದಲಾದ ಪೂಜ್ಯಾರ್ಥಕ ರೂಪಗಳು ಆಗುವವು.

ವಿಭಕ್ತಿಗಳು (Cases).

52. ವಿಭಕ್ತಿಯೆಂದರೇನು?

ವಾಕ್ಯಗಳಲ್ಲಿ ನಾಮಪದಗಳು ಹೇಳುವ ನಾನಾ ಕಾರಕಾರ್ಥಗಳನ್ನು ಅವುಗಳ ಸ್ವರೂಪಗಳಲ್ಲಿ ತೋರಿಸುವದಕ್ಕೆ ಆ ಕಾರಕಾರ್ಥಗಳನ್ನು ವಿಭಾಗಿಸುವ ವಿಭಕ್ತಿಪ್ರತ್ಯಯಗಳು ನಾಮಪದಗಳ ತುದಿಗೆ ಸೇರುವವು. ಅಂಥ ವಿಭಕ್ತಿಪ್ರತ್ಯಯ ಹೊಂದಿದ ನಾಮಪದಸ್ವರೂಪಗಳಿಗೆ ವಿಭಕ್ತಿಗಳೆಂಬ ಹೆಸರು.

53. ಅಂಥ ವಿಭಕ್ತಿಗಳು ಕನ್ನಡದಲ್ಲಿ ಎಷ್ಟು?

ಸಂಸ್ಕೃತದಲ್ಲಿ ಸಪ್ತವಿಭಕ್ತಿಗಳು ಇರುವದರಿಂದ, ಪೂರ್ವದಲ್ಲಿ ಕನ್ನಡ ವ್ಯಾಕರಣಕರ್ತರು ಕನ್ನಡದಲ್ಲಿಯೂ ಏಳು ವಿಭಕ್ತಿಗಳನ್ನು ವಿವರಿಸಿ, ಅವುಗಳಿಗೆ ಆ ಸಂಸ್ಕೃತ ವಿಭಕ್ತಿಗಳ ಅಂಕಾಸಂಜ್ಞೆ, ಕಾರಕಾರ್ಥಸಂಜ್ಞೆಗಳಾದ ಹೆಸರುಗಳನ್ನು ಇಟ್ಟರು, ಹ್ಯಾಗಂದರೆ—

ಅಂಕಾಸಂಜ್ಞೆ.	ಕಾರಕಾರ್ಥಸಂಜ್ಞೆ.		ವಿಭಕ್ತಿಪ್ರತ್ಯಯ.
ಪ್ರಥಮೆ	ಕರ್ತೃವಿಭಕ್ತಿ	Nominative	ಉ
ಸಂಬೋಧನ	ಆಮಂತ್ರಣ	Vocative	ಏ (ಎ)
ದ್ವಿತೀಯೆ	ಕರ್ಮವಿಭಕ್ತಿ	Accusative	ಅನ್ನು
ತೃತೀಯೆ	ಕರಣವಿಭಕ್ತಿ	Instrumental	ಇಂದ
ಚತುರ್ಥಿ	ಸಂಪ್ರದಾನವಿಭಕ್ತಿ	Dative	ಇಗೆ (ಗೆ, ಕ್ಕೆ)
ಪಂಚಮಿ	ಅಪಾದಾನವಿಭಕ್ತಿ	Ablative	ದೆಸೆಯಿಂದ
ಷಷ್ಠಿ	ಸಂಬಂಧವಿಭಕ್ತಿ	Genitive	ಅ
ಸಪ್ತಮಿ	ಅಧಿಕರಣವಿಭಕ್ತಿ	Locative	ಅಲ್ಲಿ

ಕನ್ನಡ ವಿಭಕ್ತಿಗಳನ್ನು ನೆಟ್ಟಗೆ ವಿಚಾರಿಸಿ ನೋಡಿದರೆ, ಕಾಣಿಸುವದೇನಂದರೆ—ಅಪಾದಾನವಿಭಕ್ತಿಯು ಕನ್ನಡದಲ್ಲಿ ಇಲ್ಲ. ಹ್ಯಾಗೆಂದರೆ "ದೆಸೆಯಿಂದ" ಎಂಬದು ಪ್ರತ್ಯೇಕ ವಿಭಕ್ತಿ ಅಲ್ಲ, "ದೆಸೆ" ಎಂಬ ನಾಮಪದದ ತೃತೀಯಾರೂಪವಾಗಿದೆ. ಯಾಕೆಂದರೆ ಅಪಾದಾನ ಕಾರಕಾರ್ಥವನ್ನು ಹೇಳುವದಕ್ಕೆ ಕನ್ನಡದಲ್ಲಿ ತೃತೀಯಾವಿಭಕ್ತಿ ಪ್ರಯೋಗಿಸುವದು. ಅದು ಕಾರಣ ಮುಂದೆ ಬರೆದ ವಿಭಕ್ತಿರೂಪಮಾಲೆಯಲ್ಲಿ "ಅಪಾದಾನ"ವೆಂಬ ಪಂಚಮಿಾವಿಭಕ್ತಿಯನ್ನು ಸೇರಿಸಲಿಲ್ಲ.

(ಪ್ರಯೋಗದಲ್ಲಿ ಆ ಆ ವಿಭಕ್ತಿಗಳು ಹೇಳುವ ಕಾರಕಾರ್ಥಗಳ ವಿವರವನ್ನು ಮುಂದೆ 132-138ನೇ ಉತ್ತರಗಳಲ್ಲಿ ನೋಡು).

54. ವಿಭಕ್ತಿಪ್ರತ್ಯಯಗಳು ನಾಮಪದಗಳ ತುದಿಯಲ್ಲಿ ಸೇರುವದು ಹ್ಯಾಗೆ?

ಈ ವಿಷಯದ ಸಂಧಿವಿಧಿಗಳು ಯಾವವಂದರೆ—

1. ಏಕವಚನದಲ್ಲಿ ವಿಭಕ್ತಿಪ್ರತ್ಯಯಗಳು ಅಕಾರಾಂತ ಪುಂಸ್ತ್ರೀವಾಚಕಗಳಲ್ಲಿ "ಅನು, ಅಳು" ಎಂಬ ಅಚ್ಪ್ರತ್ಯಯಗಳ[1] ಮೇಲೆ ಬರುವವು. ಕಡಿಮೆ ಎಲ್ಲಾ ನಾಮಪದಗಳಲ್ಲಿ ಪ್ರಕೃತಿರೂಪದ ಮೇಲೆ ಹತ್ತುವವು.

[1] ಅಂದರೆ ಸ್ವರಾಕ್ಷರ ಆದಿಯಾದ ಪ್ರತ್ಯಯಗಳು.

2. "ಅನು, ಅಳು" ಎಂಬ ಅಚ್ಪ್ರತ್ಯಯಗಳ "ಉ" ಸ್ವರಕ್ಕೂ, ಉಕಾರಾಂತ ದೇಶ್ಯಶಬ್ದಗಳ "ಉ" ಸ್ವರಕ್ಕೂ ವಿಭಕ್ತಿ ಪ್ರತ್ಯಯಗಳು ಪರವಾಗುವಲ್ಲಿ ಲೋಪ ಬರುವದು. ಇ, ಎಕಾರಾಂತಗಳ ಮುಂದೆ ಪ್ರಕೃತಿಗೂ ಪ್ರತ್ಯಯಕ್ಕೂ ನಡುವಿನಲ್ಲಿ "ಯ್" ಆಗಮ ಬರುವದು. ನಪುಂಸಕ ಅಕಾರಾಂತಗಳ ಮುಂದೆಯೂ ನಿತ್ಯ ಉ, ಋಕಾರಾಂತ ಗಳ ಮುಂದೆಯೂ ಕರ್ತೃ, ಸಂಬೋಧನ, ಕರ್ಮವಿಭಕ್ತಿ ಗಳಲ್ಲಿ "ವ್" ಆಗಮ ಬರುವದು; ತೃತೀಯೆ, ಷಷ್ಠಿ, ಸಪ್ತಮೀವಿಭಕ್ತಿಗಳಲ್ಲಿ ನಪುಂಸಕ ಅಕಾರಾಂತಗಳ ಮುಂ ದೆ "ದ್" ಆಗಮವು, ನಿತ್ಯ ಉ, ಋಕಾರಾಂತಗಳ ಮುಂದೆ "ಇನ್" ಆಗಮವು ಬರುವದು. ಚತುರ್ಥಿಯಲ್ಲಿ ನಪುಂ ಸಕ ಅಕಾರಾಂತಗಳ ಮುಂದೆ "ಕ್ಕೆ" ಪ್ರತ್ಯಯ ಬರುವದು.

3. ಬಹುವಚನದಲ್ಲಿ ವಿಭಕ್ತಿಪ್ರತ್ಯಯಗಳು ಎಲ್ಲ ನಾಮಪದ ಗಳ ಬಹುವಚನದ ಪ್ರತ್ಯಯಗಳ ಮೇಲೆ ಬರುವವು. ಈ ವಿಧಿಗಳ ಉದಾಹರಣೆಗಳನ್ನು ಮುಂದೆ ಬರೆದ ವಿಭ ಕ್ತಿಮಾಲೆಯಲ್ಲಿ ನೋಡತಕ್ಕದ್ದು.

ನಾಮಪದಗಳ

	ವಿಭಕ್ತಿ ಸಂಜ್ಞೆಗಳು	ವಿಭಕ್ತಿ ಪ್ರತ್ಯಯಗಳು	ಅಕಾರಾಂತ	
			ಪುಲ್ಲಿಂಗ	ಸ್ತ್ರೀಲಿಂಗ
			ಸೇವಕ	
ಏಕವಚನ.	ಪ್ರ. ಕರ್ತೃವಿಭಕ್ತಿ	ಉ	ಸೇವಕನು	ಸೇವಕಳು
	ಸಂ. ಆಮಂತ್ರಣ	ಏ (ಏ)	ಸೇವಕನೇ	ಸೇವಕಳೇ
	ದ್ವಿ. ಕರ್ಮವಿಭಕ್ತಿ	ಅನ್ನು	ಸೇವಕನನ್ನು	ಸೇವಕಳನ್ನು
	ತೃ. ಕರಣವಿಭಕ್ತಿ	ಇಂದ	ಸೇವಕನಿಂದ	ಸೇವಕಳಿಂದ
	ಚ. ಸಂಪ್ರದಾನವಿಭಕ್ತಿ	ಇಗೆ (ಗೆ, ಕ್ಕೆ)	ಸೇವಕನಿಗೆ	ಸೇವಕಳಿಗೆ
	ಷ. ಸಂಬಂಧವಿಭಕ್ತಿ	ಅ	ಸೇವಕನ	ಸೇವಕಳ
	ಸ. ಅಧಿಕರಣವಿಭಕ್ತಿ	ಅಲ್ಲಿ	ಸೇವಕನಲ್ಲಿ	ಸೇವಕಳಲ್ಲಿ
ಬಹುವಚನ.	ಪ್ರ. ಕರ್ತೃವಿಭಕ್ತಿ	ಉ	ಸೇವಕರು	
	ಸಂ. ಆಮಂತ್ರಣ	ಏ (ಏ)	ಸೇವಕರೇ	
	ದ್ವಿ. ಕರ್ಮವಿಭಕ್ತಿ	ಅನ್ನು	ಸೇವಕರನ್ನು	
	ತೃ. ಕರಣವಿಭಕ್ತಿ	ಇಂದ	ಸೇವಕರಿಂದ	
	ಚ. ಸಂಪ್ರದಾನವಿಭಕ್ತಿ	ಇಗೆ	ಸೇವಕರಿಗೆ	
	ಷ. ಸಂಬಂಧವಿಭಕ್ತಿ	ಅ	ಸೇವಕರ	
	ಸ. ಅಧಿಕರಣವಿಭಕ್ತಿ	ಅಲ್ಲಿ	ಸೇವಕರಲ್ಲಿ	

* ಉಕಾರಾಂತಗಳ ಉಕಾರವು ಯಾವಾಗ ನಿತ್ಯ, ಯಾವಾಗ ಅನಿತ್ಯವೆಂತ ತಿಳಿಯುವದಕ್ಕೆ ಉಪಾಯವೇನಂದರೆ—

1. ನಿತ್ಯ. ೧. ಸಂಸ್ಕೃತದಿಂದ ತತ್ಸಮವಾಗಿ ಬರುವ ಎಲ್ಲಾ ಉಕಾರಾಂತ ಶಬ್ದಗಳು. ಉದಾ: ಗುರು, ಪಶು, ವಿಷ್ಣು. ೨. ಉಕಾರಾಂತ ದ್ವ್ಯಕ್ಷರದ ಕನ್ನಡ ಶಬ್ದಗಳಲ್ಲಿ ಮೊದಲನೆ ಅಕ್ಷರವು ಒಂದೇ ಮಾತ್ರೆಯಾಗಿರುವಲ್ಲಿ. ಉದಾ: ಮಗು, ಕರು, ನಡು.

ವಿಭಕ್ತಿರೂಪಮಾಲೆ (Declensions).

ಗಳು..	ಇ, ಎ, ಐ ಕಾರಾಂತಗಳು.	ಉಕಾರಾಂತಗಳು.*	
ನಪುಂಸಕ ಲಿಂಗ.	ಪು. ಸ್ತ್ರೀ. ನಂಪು	ನಿತ್ಯ ಉಕಾರಾಂತ.	ಅನಿತ್ಯ ಉಕಾರಾಂತ.
ಮರ.	ಕುರಿ.	ಗುರು.	ಊರು.
ಮರವು	ಕುರಿಯು	ಗುರುವು	ಊರು
ಮರವೇ	ಕುರಿಯೇ	ಗುರುವೇ	ಊರೇ
ಮರವನ್ನು	ಕುರಿಯನ್ನು	ಗುರುವನ್ನು	ಊರನ್ನು
ಮರದಿಂದ	ಕುರಿಯಿಂದ	ಗುರುವಿನಿಂದ ಗುರುವಿಂದ	ಊರಿನಿಂದ, ಊರಿಂದ
ಮರಕ್ಕೆ	ಕುರಿಗೆ	ಗುರುವಿಗೆ	ಊರಿಗೆ
ಮರದ	ಕುರಿಯ	ಗುರುವಿನ	ಊರಿನ, ಊರ
ಮರದಲ್ಲಿ	ಕುರಿಯಲ್ಲಿ	ಗುರುವಿನಲ್ಲಿ ಗುರುವಲ್ಲಿ	ಊರಿನಲ್ಲಿ, ಊರಲ್ಲಿ
ಮರಗಳು	ಕುರಿಗಳು	ಗುರುಗಳು	ಊರುಗಳು
ಮರಗಳೇ	ಕುರಿಗಳೇ	ಗುರುಗಳೇ	ಊರುಗಳೇ
ಮರಗಳನ್ನು	ಕುರಿಗಳನ್ನು	ಗುರುಗಳನ್ನು	ಊರುಗಳನ್ನು
ಮರಗಳಿಂದ	ಕುರಿಗಳಿಂದ	ಗುರುಗಳಿಂದ	ಊರುಗಳಿಂದ
ಮರಗಳಿಗೆ	ಕುರಿಗಳಿಗೆ	ಗುರುಗಳಿಗೆ	ಊರುಗಳಿಗೆ
ಮರಗಳ	ಕುರಿಗಳ	ಗುರುಗಳ	ಊರುಗಳ
ಮರಗಳಲ್ಲಿ	ಕುರಿಗಳಲ್ಲಿ	ಗುರುಗಳಲ್ಲಿ	ಊರುಗಳಲ್ಲಿ

2. ಅನಿತ್ಯ. ಮಿಕ್ಕಾದ ಕನ್ನಡ ಉಕಾರಾಂತಗಳೆಲ್ಲಾ, ಅಂದರೆ ದ್ವ್ಯಕ್ಷರವಾಗಿದ್ದರೂ ಮೊದಲನೇದು ಎರಡು ಮಾತ್ರೆಯಾಗಿದ್ದರೆ, ಮತ್ತು ಎರಡಕ್ಕಿಂತ ಹೆಚ್ಚು ಅಕ್ಷರಗಳಿರುವ ಶಬ್ದಗಳು. ಉದಾ:

a) ಊರು, ಮೂಗು, ಗಂಟು (= ಗಣ್ಟು), ಸೊಕ್ಕು (= ಸೊಱ್ಕು).

b) ಸಿಗುರು, ಬಿರುಕು, ಕನಸು, ಹರಕು, ಉಗುಳು.

55. ಹಿಂದೆ ಬರೆದ ವಿಭಕ್ತಿರೂಪಮಾಲೆಯಲ್ಲಿ ತೋರಿಸಿದ ರೂಪಗಳು ಅಲ್ಲದೆ ಇನ್ನು ಬೇರೆ ವಿಭಕ್ತಿರೂಪಗಳನ್ನು ಪ್ರಯೋಗಿಸುವದು ಉಂಟೇ?

ಹಳಗನ್ನಡಪ್ರಯೋಗದಿಂದಲೂ ಜನರ ಶಿಥಿಲಪ್ರಯೋಗದಿಂದಲೂ ಈಗಿನ ಕನ್ನಡ ಜನರಲ್ಲಿ ಇನ್ನು ವರ್ತಿಸುವ ರೂಪಗಳು ಯಾವವಂದರೆ—

1. ಏಕವಚನದ ಪ್ರಥಮಾವಿಭಕ್ತಿಗೆ ಪ್ರತಿಯಾಗಿ ಪ್ರಕೃತಿರೂಪವನ್ನು ಪ್ರಯೋಗಿಸುವದು ಬಹಳ ಉಂಟು. ವಾಕ್ಯಾರ್ಥವು ಅದರಿಂದ ಅಳಿಯದ ಪಕ್ಷದಲ್ಲಿ ಅದಕ್ಕೆ ದೋಷವಿಲ್ಲ. ಉದಾ: ರಾಮು ಬಂದನು.
2. ಸಂಬೋಧನದಲ್ಲಿ ಸಹ ಜನರು ಬಹಳವಾಗಿ ಬರೀ ಪ್ರಕೃತಿರೂಪವನ್ನು ಪ್ರಯೋಗಿಸುತ್ತಾರೆ. ಆದರೆ ಪ್ರಕೃತಿಯ ಅಂತಸ್ವರಕ್ಕೆ ದೀರ್ಘ ಕೊಡುವದು ಹೆಚ್ಚು ಪ್ರವರ್ತನೆ ಉಂಟು. ಉದಾ: ಸೇವಕಾ, ಮರಾ, ಕುರೀ, ತಂದೇ, ಗುರೂ. ಬಹುವಚನದಲ್ಲಿ "ಇರಾ" ಪ್ರತ್ಯಯವನ್ನು ಹತ್ತಿಸಿ ಸಂಬೋಧನೆ ಮಾಡುವದು ಹಳಗನ್ನಡಪ್ರಯೋಗ ಉಂಟು. ಉದಾ: ತಂದೆಗಳಿರಾ, ಗುರುಗಳಿರಾ.
3. ಸಂಪೂರ್ಣ ದ್ವಿತೀಯಾರೂಪಕ್ಕೆ ಪ್ರತಿಯಾಗಿ ಇನ್ನು ಪ್ರಯೋಗಿಸುವ ರೂಪಗಳು ಯಾವವಂದರೆ—ನಪುಂಸಕ ಅಕಾರಾಂತ, ಇ, ಎಕಾರಾಂತ, ಅನಿತ್ಯ ಉಕಾರಾಂತ ನಾಮಪದಗಳ ಪ್ರಕೃತಿರೂಪವು ಏಕವಚನದ ದ್ವಿತೀಯಾ ವಿಭಕ್ತಿಯ ಅರ್ಥದಲ್ಲಿ ಪ್ರಯೋಗಿಸುವದು. ವಾಕ್ಯದ ಅರ್ಥ ತಿಳಿಯುವದಕ್ಕೆ ಬಹಳ ಅಡ್ಡಿ ಆಗದಲ್ಲಿ ಈ ಪ್ರಯೋಗಕ್ಕೆ ದೋಷವಿಲ್ಲ. ಉದಾ: ಮರ ಕಡಿ, ಕುರಿ ತಡಿ, ಮನೆ ಕಟ್ಟು, ನೀರು ಕುಡಿ.

   "ಅ" ಪ್ರತ್ಯಯವುಳ್ಳ ದ್ವಿತೀಯಾರೂಪವನ್ನು ಕವೀಶ್ವರರು ಗ್ರಂಥಗಳಲ್ಲಿ ಬಹಳ ಪ್ರಯೋಗಿಸುವರು; ಯಾಕಂದರೆ ಅದರಿಂದ ರಚನೆಯು ಸರಳವಾಗುವದು. ಉದಾ: ಸೇವಕನ, ಮರವ, ಕುರಿಯ, ಗುರುವ, ಊರ, ಸೇವಕರ, ಮರಗಳ.

ಇವುಗಳಿಗೆ ಬದಲಾಗಿ ಜನರ ಸಾಧಾರಣ ಪ್ರಯೋಗದಲ್ಲಿ ವರ್ತಿಸುವ ರೂಪಗಳು ಯಾವವಂದರೆ—ಸೇವಕನ್ನ, ಮರವನ್ನ, ಕುರಿಯನ್ನ, ಗುರುವನ್ನ, ಊರನ್ನ, ಸೇವಕರನ್ನ, ಮರಗಳನ್ನ—ಇತ್ಯಾದಿ.

4. ಸಪ್ತಮೀವಿಭಕ್ತಿಯ ಪ್ರತ್ಯಯವಾದ "ಅಲ್ಲಿ" ಎಂಬದಕ್ಕೆ ಪ್ರತಿಯಾಗಿ ಹಳಗನ್ನಡಪ್ರಯೋಗದ "ಒಳು" ಎಂಬದನ್ನೂ, ಗ್ರಾಮ್ಯಪ್ರಯೋಗದ "ಆಗೆ=ಒಳಗೆ" ಎಂಬದನ್ನೂ ವಿಕಲ್ಪವಾಗಿ ಪ್ರಯೋಗಿಸುವರು: ಉದಾ: ಮನೆಯಲ್ಲಿ=ಮನೆಯೊಳು, ಮನೆಯಾಗೆ, ಮನೆಯೊಳಗೆ.

5. "ಅಲ್ಲಿ" ಎಂಬದಕ್ಕೆ ವಿಕಲ್ಪವಾಗಿ ಇನ್ನು ತೃತೀಯೆ, ಚತುರ್ಥಿ, ಷಷ್ಠೀವಿಭಕ್ತಿಗಳ ಪ್ರತ್ಯಯಗಳು ಅನುಬಂಧವಾಗುವವು. ಉದಾ: ಮನೆಯಲ್ಲಿಂದ, ಮನೆಯಲ್ಲಿಗೆ, ಮನೆಯಲ್ಲಿಯ.

6. ಕೆಲವು ಅಕಾರಾಂತ ನಪುಂಸಕಲಿಂಗ ಶಬ್ದಗಳ ಷಷ್ಠಿಯಲ್ಲಿ ಪ್ರಯೋಗಿಸುವ ರೂಪಗಳ್ಯಾವವಂದರೆ—ಉದಾ: ಕದವಿನ=ಕದದ, ದನವಿನ=ದನದ, ಹಣವಿನ=ಹಣದ.

---

3. ಸರ್ವನಾಮಪ್ರಕರಣ. Pronouns.

56. ಸರ್ವನಾಮವಂದರೇನು?

ನಾಮಪದಗಳ ಸ್ಥಳಗಳಲ್ಲಿ ಅವುಗಳಿಗೆ ಪ್ರತಿಯಾಗಿ ಪ್ರಯೋಗಿಸುವ ಪದಗಳು "ಸರ್ವನಾಮ"ಗಳೆಂದು ವರ್ತಿಸುವವು. ಸರ್ವನಾಮಗಳು ವಸ್ತುಗಳ ನಾಮಾರ್ಥಗಳನ್ನು ಹೇಳುವದಿಲ್ಲ, ವಸ್ತುಗಳನ್ನೂ ಅವುಗಳ ಗುಣ ಸಂಖ್ಯೆಗಳನ್ನೂ ಸೂಚಿಸುತ್ತವೆ ಅಷ್ಟೆ; ಮತ್ತು ಇವುಗಳಿಗೆ ಸಂಬೋಧನವಿಭಕ್ತಿ ಇಲ್ಲ.

57. ಸರ್ವನಾಮಗಳು ಎಷ್ಟು ವಿಧವು?

"ಪುರುಷಾರ್ಥಕ" (Personal), "ಆತ್ಮಾರ್ಥಕ" (Reflexive), "ಪ್ರಶ್ನಾರ್ಥಕ" (Interrogative), "ನಿದರ್ಶಕ" (Demonstrative) ಎಂಬ ನಾಲ್ಕು ವಿಧವು. ಇವುಗಳಿಗೆ ಇನ್ನು ಸಂಖ್ಯಾವಾಚಕ, ಪರಿಮಾಣವಾಚಕ, ಸಾಮಾನ್ಯಾರ್ಥಕ, ಸಮಾಸಸರ್ವನಾಮಗಳು ಸಂಬಂಧವಾಗಿವೆ.

58. ಪುರುಷಾರ್ಥಕಸರ್ವನಾಮುಗಳು ಯಾವವು?

ಅವು "ಉತ್ತಮಪುರುಷ" (1st person), ಮಧ್ಯಮಪುರುಷ" (2nd person), ಪ್ರಥಮಪುರುಷ" (3rd person) ಎಂಬ ಮೂರು ಪುರುಷಾರ್ಥಗಳನ್ನು ಹೇಳುವಂಥಾವು. ಇವುಗಳ ವಿವರವು ಹ್ಯಾಗಂದರೆ—ಸಂಭಾಷಣೆಯಲ್ಲಿ ಮಾತನಾಡುವ ಇಬ್ಬರೊಳಗೆ ಯಾವನು ಮಾತನಾಡುತ್ತಾನೋ, ಅವನೆ ಉತ್ತಮಪುರುಷ. ಇವನು ಯಾವನ ಸಂಗಡ ಮಾತನಾಡುತ್ತಾನೋ, ಆ ಎರಡನೆಯವನು ಮಧ್ಯಮಪುರುಷ. ಇವರಿಬ್ಬರು ತಮ್ಮೊಳಗೆ ಯಾವನ ವಿಷಯ ಮಾತನಾಡುತ್ತಾರೋ, ಆ ಮೂರನೆಯವನು ಪ್ರಥಮಪುರುಷ ವೆಂದು ವರ್ತಿಸುವದು. ಉದಾ:

		ಏಕವಚನ:	ಬಹುವಚನ:
ಉತ್ತಮಪುರುಷ:		ನಾನು	ನಾವು
ಮಧ್ಯಮಪುರುಷ:		ನೀನು	ನೀವು
ಪ್ರಥಮಪುರುಷ:	ಪು.—	ಅವನು	ಅವರು
	ಸ್ತ್ರೀ.—	ಅವಳು	
	ನಪುಂ.—	ಅದು	ಅವು=ಅವುಗಳು

59. ಆತ್ಮಾರ್ಥಕಸರ್ವನಾಮ ಯಾವದು?

ಏಕವಚನ "ತಾನು", ಬಹುವಚನ "ತಾವು". ಇವುಗಳನ್ನು ಪ್ರಥಮಪುರುಷದ ಲಿಂಗತ್ರಯದಲ್ಲಿ ಆತ್ಮಾರ್ಥವಾಗಿ ಪ್ರಯೋಗಿಸುವರು.

60. ಪ್ರಶ್ನಾರ್ಥಕ, ನಿದರ್ಶಕಸರ್ವನಾಮುಗಳು ಯಾವವು?

ಪ್ರಶ್ನಾರ್ಥಕಸರ್ವನಾಮುಗಳು ವಸ್ತುಗಳ ವ್ಯಕ್ತಿಯನ್ನು ಅಥವಾ ಅವುಗಳ ಬಗೆಯನ್ನು ಕೇಳುವಂಥ ಎರಡು ವಿಧವು. ಇವುಗಳಿಗೆ ಪ್ರತ್ಯುತ್ತರವಾಗಿ ನಿದರ್ಶಕಸರ್ವನಾಮುಗಳು ಸಮಿಾಪದಲ್ಲಿ ಅಥವಾ ದೂರದಲ್ಲಿ ಇರುವ ವಸ್ತುಗಳನ್ನಾಗಲಿ ಅವುಗಳ ಬಗೆಯನ್ನಾಗಲಿ ತೋರಿಸಿ ಸೂಚಿಸುವವು. ಅವಕ್ಕೂ ಇವಕ್ಕೂ ಗಮಕಸಮಾಸದಲ್ಲಿ ಪೂರ್ವಪದವಾಗಿ ಪ್ರಯೋಗಿಸುವ "ಸಂಕ್ಷೇಪಸ್ವರೂಪವು" ಮತ್ತು ಉತ್ತರವಿಶೇಷಣವಾಗಿ ಪ್ರಯೋಗಿಸುವ "ಸಂಪೂರ್ಣಸ್ವರೂಪವು" ಉಂಟು. ಅವು ಹ್ಯಾಗಂದರೆ:

ಪ್ರಶ್ನಾರ್ಥಕ ಸರ್ವನಾಮಗಳು	ಸಂಕ್ಷೇಪ ಸ್ವರೂಪ	ಸಂಪೂರ್ಣಸ್ವರೂಪ
ವ್ಯಕ್ತಿ ಕೇಳುವಂಥಾವು:	ಯಾವ	ಯಾವನು, ಯಾವಳು, ಯಾವದು; ಯಾರು, ಯಾವರು, ಯಾವವು [ಗಳು].
ಬಗೆ ಕೇಳುವಂಥಾವು:	ಎಂಥ	ಎಂಥವನು, ಎಂಥವಳು, ಎಂಥಾದ್ದು; ಎಂಥಾವರು, ಎಂಥವರು, ಎಂಥಾವು, ಎಂಥವು[ಗಳು].
ನಿದರ್ಶಕಸರ್ವನಾಮಗಳು ವ್ಯಕ್ತಿ ತೋರಿಸುವಂಥಾವು:		
ಸಮೀಪದಲ್ಲಿ (proximate)	ಈ [ಇವ]	ಇವನು, ಇವಳು, ಇದು; ಇವರು, ಇವರುಗಳು, ಇವು [ಗಳು].
ದೂರದಲ್ಲಿ (remote)	ಆ [ಅವ]	ಅವನು, ಅವಳು, ಅದು; ಅವರು, ಅವು[ಗಳು].
ಬಗೆ ತೋರಿಸುವಂಥಾವು: ಸಮೀಪದಲ್ಲಿ (proximate)	ಇಂಥ	ಇಂಥಾವನು, ಇಂಥವನು, ಇಂಥಾವಳು, ಇಂಥವಳು, ಇಂಥಾದ್ದು; ಇಂಥಾವರು, ಇಂಥವರು, ಇಂಥಾವು, ಇಂಥವು[ಗಳು].
ದೂರದಲ್ಲಿ (remote)	ಅಂಥ	ಅಂಥಾವನು, ಅಂಥವನು, ಅಂಥಾವಳು, ಅಂಥವಳು, ಅಂಥಾದ್ದು; ಅಂಥಾವರು, ಅಂಥವರು, ಅಂಥಾವು, ಅಂಥವು[ಗಳು].

ಇವಲ್ಲದೆ ಇನ್ನು "ಯಾರು, ಏನು" ಎಂಬಿವು ವ್ಯಕ್ತವಾಗಿ ಅಲ್ಲಾ, ಒಟ್ಟಿಗೆ ಕೇಳುವಂಥ ಪ್ರಶ್ನಾರ್ಥಕಸರ್ವನಾಮಗಳಾಗಿ ಸಾಧಾರಣ ಪ್ರಯೋಗದಲ್ಲಿ ವರ್ತಿಸುವವು. ಹಾಗೂ ಪೂಜ್ಯಾರ್ಥದಲ್ಲಿ "ಇವನು, ಇವಳು" ಮತ್ತು "ಅವನು, ಅವಳು" ಎಂಬವುಗಳಿಗೆ ಪ್ರತಿಯಾಗಿ "ಈತನು, ಈಕೆ" ಮತ್ತು "ಆತನು, ಆಕೆ" ಎಂಬವುಗಳನ್ನು ಪ್ರಯೋಗಿಸುವ ಪದ್ಧತಿ ಉಂಟು.

61. ಸರ್ವನಾಮಗಳ ವಿಭಕ್ತಿರೂಪಗಳು ಹ್ಯಾಗೆ?

ಇವುಗಳನ್ನು ಮುಂದಿನ ಪಟ್ಟಿಯಲ್ಲಿ ನೋಡಿ ತಿಳುಕೊಳ್ಳತಕ್ಕದ್ದು.

ಸರ್ವನಾಮಗಳ ವಿಭಕ್ತಿರೂಪಮಾಲೆ.

	ಉತ್ತಮಪುರುಷಾರ್ಥಕ.		ಪುಂಸ್ತ್ರೀಲಿಂಗ.			ನಪುಂಸಕಲಿಂಗ.		ಅವ್ಯಕ್ತಾರ್ಥಕ.	
	ಏಕವ.	ಬಹುವ.	ಏಕವಚನ.		ಬಹುವ.	ಏಕವ.	ಬಹುವ.	ಪುಂಸ್ತ್ರೀ.	ನಪುಂ.
ಪ್ರ.	ನಾನು	ನಾವು	ಅವನು	ಅವಳು	ಅವರು	ಅದು	ಅವು[ಗಳು]	ಯಾರು	ಏನು
ದ್ವಿ.	ನನ್ನನ್ನು	ನಮ್ಮನ್ನು	ಅವನನ್ನು	ಅವಳನ್ನು	ಅವರನ್ನು	ಅದನ್ನು	ಅವುಗಳನ್ನು	ಯಾರನ್ನು	ಏನನ್ನು
ತೃ.	ನನ್ನಿಂದ	ನಮ್ಮಿಂದ	ಅವನಿಂದ	ಅವಳಿಂದ	ಅವರಿಂದ	ಅದರಿಂದ	ಅವುಗಳಿಂದ	ಯಾರಿಂದ	ಏತರಿಂದ ಯಾತರಿಂದ
ಚ.	ನನಗೆ	ನಮಗೆ	ಅವನಿಗೆ	ಅವಳಿಗೆ	ಅವರಿಗೆ	ಅದಕ್ಕೆ	ಅವುಗಳಿಗೆ	ಯಾರಿಗೆ	ಏತಕ್ಕೆ ಯಾತಕ್ಕೆ, ಯಾಕೆ
ಷ.	ನನ್ನ	ನಮ್ಮ	ಅವನ	ಅವಳ	ಅವರ	ಅದರ	ಅವುಗಳ	ಯಾರ	ಏತರ ಯಾತರ
ಸ.	ನನ್ನಲ್ಲಿ	ನಮ್ಮಲ್ಲಿ	ಅವನಲ್ಲಿ	ಅವಳಲ್ಲಿ	ಅವರಲ್ಲಿ	ಅದರಲ್ಲಿ	ಅವುಗಳಲ್ಲಿ	ಯಾರಲ್ಲಿ	ಏತರಲ್ಲಿ ಯಾತರಲ್ಲಿ
ಅದೇಪ್ರಕಾರ	ನೀನು	ನೀವು	ಇವನು	ಇವಳು	ಇವರು	ಇದು	ಇವು[ಗಳು]		
	ತಾನು	ತಾವು	ಯಾವನು	ಯಾವಳು	ಯಾವರು	ಯಾವದು	ಯಾವವು[ಗಳು]		

"ಈತ, ಆತ" ಎಂಬವುಗಳಿಗೆ ಅಕಾರಾಂತ ಪುಲ್ಲಿಂಗ ನಾಮಪದಗಳ ಪ್ರಕಾರ, ಮತ್ತು "ಈಕೆ, ಆಕೆ" ಎಂಬವುಗಳಿಗೆ ಎಕಾರಾಂತ ನಾಮಪದಗಳ ಪ್ರಕಾರ ವಿಭಕ್ತಿಗಳಾಗುವವು.

62. ಸಂಖ್ಯಾಪರಿಣಾಮವಾಚಕಗಳು ಯಾವವು?

"ಒಂದು [ಒಬ್ಬ], ಎರಡು [ಇಬ್ಬ], ಮೂರು [ಮೂವ]" ಮೊದಲಾದ ಅಂಕೆಗಳ ಹೆಸರುಗಳು "ಸಂಖ್ಯಾವಾಚಕಗಳು" (Cardinal Numbers) ಎಂದು ವರ್ತಿಸುವವು. ಅವುಗಳಿಗೆ ಪೂರಣಾರ್ಥದಲ್ಲಿ "ನೆ" ಎಂಬ ಪ್ರತ್ಯಯ ಹತ್ತಿಸುವದರಿಂದ, "ಒಂದನೆ, ಎರಡನೆ, ಮೂರನೆ" ಮೊದಲಾದ "ಸಂಖ್ಯಾಪೂರಣಗಳು" (Ordinal Numbers) ಆಗುವವು. ಆದರೆ "ಎಷ್ಟು, ಅಷ್ಟು, ಇಷ್ಟು, ಬಹಳ, ಸ್ವಲ್ಪ, ಕೆಲವು, ಹಲವು, ಎಲ್ಲ, ಅನೇಕ, ಸಕಲ, ಸಮಸ್ತ, ಯಾವತ್ತು" ಇತ್ಯಾದಿ ಪದಗಳು ವಸ್ತುಗಳ ಸಂಖ್ಯೆ ವಿಶೇಷಿಸದೆ, ಅವುಗಳ ಪರಿಮಾಣ ಮಾತ್ರ ಒಟ್ಟಿಗೆ ಹೇಳುವ ಕಾರಣ, "ಪರಿಮಾಣವಾಚಕಗಳು" (Quantitative or Indefinite Pronouns) ಅಥವಾ "ಅವಿಶೇಷ ಸಂಖ್ಯೆಗಳು" ಎಂದು ಅನ್ನಿಸಿಕೊಳ್ಳುವವು. ಅವುಗಳಲ್ಲಿ "ಎಷ್ಟು" ಎಂಬದಕ್ಕೆ ಪ್ರಶ್ನಾರ್ಥವೂ, "ಇಷ್ಟು, ಅಷ್ಟು" ಎಂಬವುಗಳಿಗೆ ನಿದರ್ಶಕ ಅರ್ಥವೂ ಬರುವದು.

63. ಇವುಗಳಿಂದ ಸರ್ವನಾಮುಗಳಿಗೆ ಸಮಾನಪದಗಳು ಹುಟ್ಟುವದು ಹ್ಯಾಗೆ?

ಮೇಲೆ ಹೇಳಿದ ಸಂಖ್ಯಾವಾಚಕ, ಸಂಖ್ಯಾಪೂರಣ, ಪರಿಮಾಣವಾಚಕಗಳೆಲ್ಲಾ ಗಮಕಸಮಾಸದಲ್ಲಿ ಪೂರ್ಣಪದಗಳಾಗಿ ಪ್ರಯೋಗಿಸುವವು. (ಈ ಪ್ರಯೋಗದ ವಿವರ ಮುಂದೆ 150ನೆ ಉತ್ತರದಲ್ಲಿ ನೋಡು.) ಆದರೆ ಉತ್ತರವಿಶೇಷಣಗಳ ಪ್ರಯೋಗದಲ್ಲಿ ಅವುಗಳೊಳಗೆ ಕೆಲವುಗಳು ಪುಂಸ್ತ್ರೀಲಿಂಗ ಬಹುವಚನಾರ್ಥಕ ಅಚ್ಪ್ರತ್ಯಯುಗಳನ್ನು ಹೊಂದುವದರಿಂದ ಸರ್ವನಾಮುಗಳಿಗೆ ಸಮಾನಪದಗಳಾಗುವವು. ಉದಾ:

ಒಬ್ಬನು, ಒಬ್ಬಳು, ಒಬ್ಬರು, ಇಬ್ಬರು, ಮೂವರು (= ಮುವ್ವರು), ನಾಲ್ವರು, ಐವರು, ಆರ್ವರು, ಏಳ್ವರು; ಕೆಲವರು, ಹಲವರು, ಎಲ್ಲರು, ಅನೇಕರು, ಸಕಲರು, ಸಮಸ್ತರು—ಇತ್ಯಾದಿ.

ಇವುಗಳಲ್ಲಿ "ಒಬ್ಬನು, ಒಬ್ಬಳು, ಒಬ್ಬರು" ಎಂಬವುಗಳಿಗೆ ತಮ್ಮ ಸಂಖ್ಯಾರ್ಥವೇ ಹೊರ್ತು ಸಾಮಾನ್ಯಾರ್ಥಕ ಸಹ ಬರುವದು.

"ಒಂದು ಎರಡು" ಮುಂತಾದ ನಪುಂಸಕಲಿಂಗಗಳಿಗೆ "ಅದು" ಎಂಬ ನಪುಂಸಕ ಸರ್ವನಾಮದ ಪ್ರಕಾರ, ಮತ್ತು "ಒಬ್ಬನು, ಒಬ್ಬಳು, ಒಬ್ಬರು, ಇಬ್ಬರು" ಮೊದಲಾದ ಪುಂಸ್ತ್ರೀಲಿಂಗಗಳಿಗೆ "ಇವನು, ಇವಳು, ಇವರು" ಎಂಬ ಪುಂಸ್ತ್ರೀಲಿಂಗದ ಸರ್ವನಾಮಗಳ ಪ್ರಕಾರ ವಿಭಕ್ತಿಗಳಾಗುವವು.

64. ಸಂಖ್ಯಾವಾಚಕಸರ್ವನಾಮಕಸಮಾಸಪದಗಳು ಹ್ಯಾಗೆ?

"ಬೇರೆ" ಮತ್ತು "ಇನ್ನು" ಮುಂತಾದ ಅವ್ಯಯಗಳಿಗಾಗಲಿ, ಅಥವಾ "ಯಾವದು (ಯಾವನು, ಯಾವಳು, ಯಾರು)" ಎಂಬ ಪ್ರಶ್ನಾರ್ಥಕಸರ್ವನಾಮಕ್ಕಾಗಲಿ, ಅಥವಾ ತನ್ನ ಸ್ವಂತ ಸ್ವರೂಪಕ್ಕಾಗಲಿ ಅನುಬಂಧಿಸುವದರಿಂದ, ಸಾಮಾನ್ಯಾರ್ಥಕ ಸಮಾಸಪದಗಳು ಆಗುವವು. ಉದಾ:

ಬೇರೊಂದು (ಬೇರೊಬ್ಬ), ಮತ್ತೊಂದು, ಇನ್ನೊಂದು.

ಯಾವದೊಂದು, ಯಾವನೊಬ್ಬನು, ಯಾವಳೊಬ್ಬಳು, ಯಾರೊಬ್ಬರು.

ಒಂದಾನೊಂದು, ಒಬ್ಬಾನೊಬ್ಬ—ಇತ್ಯಾದಿ.

ವಿಭಕ್ತಿಪ್ರತ್ಯಯಗಳನ್ನು ಹೊಂದುವ ಕ್ರಿಯಾವಿಶೇಷಣಗಳು (Inflected Adverbs).

65. ನಾಮಪದಗಳಿಗೂ ಸರ್ವನಾಮಗಳಿಗೂ ಅಲ್ಲದೆ, ಇನ್ನು ಬೇರೆ ಶಬ್ದಗಳಿಗೆ ವಿಭಕ್ತಿಗಳು ಬರುವದು ಉಂಟೋ?

ಸ್ಥಾನವಾಚಕ, ಕಾಲವಾಚಕ ಕ್ರಿಯಾವಿಶೇಷಣಗಳೊಳಗೆ

ಕೆಲವುಗಳಿಗೆ ಸಪ್ತಮೀವಿಭಕ್ತ್ಯರ್ಥಕ ಅವುಗಳ ನಿಜಸ್ವರೂಪವೇ ಹೊರ್ತು, ಇನ್ನು ತೃತೀಯೆ, ಚತುರ್ಥಿ, ಷಷ್ಠೀವಿಭಕ್ತಿರೂಪಗಳು ಉಂಟು. ಇವುಗಳ ಪ್ರಯೋಗವು ಹಳಗನ್ನಡದಿಂದ ಹೊಸಗನ್ನಡದಲ್ಲಿ ಬಂದದೆ. ಅವು ಯಾವದಂದರೆ—

"ಎತ್ತ"—ತೃ. ಎತ್ತಣಿಂದ, ಚ. ಎತ್ತಣ್ಗೆ, ಷ. ಎತ್ತಣ; "ಎತ್ತಲು"—ಎತ್ತಲಿಂದ, ಎತ್ತಲಿಗೆ, ಎತ್ತಲಿನ; ಇದರಂತೆ "ಇತ್ತ, ಅತ್ತ, ಸುತ್ತ = ಇತ್ತಲು, ಅತ್ತಲು, ಸುತ್ತಲು" ಎಂಬಿವುಗಳ ವಿಭಕ್ತಿರೂಪಗಳು. "ಹೊರಗೆ" [=ಹೊರಗು]—ತೃ. ಹೊರಗಿನಿಂದ, ಚ. ಹೊರಕ್ಕೆ=ಹೊರಗೆ, ಷ. ಹೊರಗಣ=ಹೊರಗಿನ; ಇದರಂತೆ "ಒಳಗೆ=ಒಳಗು, ಕೆಳಗೆ=ಕೆಳಗು" ಎಂಬಿವುಗಳ ರೂಪಗಳು.

"ಮೇಲೆ" [=ಮೇಲು]—ಮೇಲಿನಿಂದ, ಮೇಲಕ್ಕೆ, ಮೇಲಿನ.

"ಮೇಗೆ" [=ಮೇಗು]—ಮೇಗಿನಿಂದ, ಮೇಗೆ=ಮೇಕ್ಕೆ, ಮೇಗಣ=ಮೇಗಳ. ಇದರಂತೆ "ಮುಂದೆ, ಮುಂದು, ಹಿಂದೆ, ಹಿಂದು".

"ಎಲ್ಲಿ"—ತೃ. ಎಲ್ಲಿಂದ, ಚ. ಎಲ್ಲಿಗೆ, ಷ. ಎಲ್ಲಿಯ; ಇದರಂತೆ "ಇಲ್ಲಿ, ಅಲ್ಲಿ". "ಈಚೆ"—ತೃ. ಈಚೆಯಿಂದ, ಚ. ಈಚೆಗೆ, ಷ. ಈಚೆಯ; ಇದರಂತೆ "ಆಚೆ". "ಎಂದು"—ತೃ. ಎಂದಿನಿಂದ, ಚ. ಎಂದಿಗೆ, ಷ. ಎಂದಿನ; ಇದರಂತೆ "ಇಂದು, ಅಂದು". "ನಾಳೆ" ತೃ. ನಾಳಿಂದ=ನಾಳಿನಿಂದ, ಚ. ನಾಳಿಗೆ, ಷ. ನಾಳಿನ=ನಾಳೆಯ; ಇದರಂತೆ "ನಿನ್ನೆ, ಮೊನ್ನೆ, ಮುಂಚೆ, ನಾಡಿದು [=ನಾಳಿದ್ದು]". "ಈಗ" [=ಈಗ್ಯೆ]—ತೃ. ಈಗಿನಿಂದ, ಷ. ಈಗಿನ; ಇದರಂತೆ "ಆಗ=ಆಗ್ಯೆ".

"ಎತ್ತಣ, ಅತ್ತಣ, ಇತ್ತಣ, ಹೊರಗಣ, ಒಳಗಣ, ಕೆಳಗಣ, ಮೇಗಣ=ಮೇಗಳ, ಮುಂದಣ=ಮುಂದಲ, ಹಿಂದಣ=ಹಿಂದಳ, ಎಲ್ಲಿಯಣ, ಇಲ್ಲಿಯಣ, ಅಲ್ಲಿಯಣ" ಎಂಬ ಹಳಗನ್ನಡ ಷಷ್ಠೀ ವಿಭಕ್ತಿರೂಪಗಳು ಹೊಸಗನ್ನಡದಲ್ಲಿ "ಎಲ್ಲಿಯ, ಅಲ್ಲಿಯ, ಇಲ್ಲಿಯ, ಹೊರಗಿನ, ಒಳಗಿನ, ಕೆಳಗಿನ, ಮೇಲಿನ, ಮುಂದಿನ, ಹಿಂದಿನ," ಎಂದು ಪ್ರಯೋಗವಾಗುವವು.

---

4. ಕ್ರಿಯಾಪದಪ್ರಕರಣ. Verbs.

66. ಕ್ರಿಯಾಪದವಂದರೇನು?

ಮಾಡೋಣ, ಪಡೋಣ, ಇರೋಣ ಮೊದಲಾದ ಕ್ರಿಯೆಗಳನ್ನು ಹೇಳುವ ಪದಗಳಿಗೆ "ಕ್ರಿಯಾಪದ"ವೆಂಬ ಹೆಸರು. ಇಂಥ ಕ್ರಿಯಾಪದಗಳ ಮೂಲಸ್ವರೂಪವು "ಧಾತು"ವೆಂದು ವರ್ತಿಸುವದು.

67. ಕ್ರಿಯಾಪದಗಳಲ್ಲಿ ವಿಶೇಷಿಸತಕ್ಕ ಲಕ್ಷಣಗಳು ಯಾವವು?

"ಧಾತ್ವರ್ಥತ್ರಯ, ರೂಪತ್ರಯ, ಕಾಲತ್ರಯ, ಅರ್ಥವಿಶೇಷತ್ರಯ, ಪುರುಷತ್ರಯ, ಲಿಂಗತ್ರಯ, ವಚನದ್ವಯ", ಈ ಪ್ರಕಾರ 20 ಲಕ್ಷಣಗಳು ಕ್ರಿಯಾಪದಗಳಲ್ಲಿ ವಿಶೇಷಿಸುವದಕ್ಕೆ ಉಂಟು.

ಧಾತುಗಳು (Verbal Roots).

68. ಧಾತ್ವರ್ಥತ್ರಯ ಯಾವವು?

ಧಾತುಗಳು ಹೇಳುವ ಅರ್ಥಗಳನ್ನು ನೋಡಿದರೆ, ಅವು "ಸಕರ್ಮಕ" (Transitive), "ಅಕರ್ಮಕ" (Intransitive), "ಪ್ರಯೋಜಕ" (Causative) ಎಂಬ ಮೂರು ವಿಧವು. ಹ್ಯಾಗಂದರೆ—

1. ಯಾವ ಧಾತುಗಳಿಗೆ ಕರ್ಮವಿರುವದೋ ಅವೇ "ಸಕರ್ಮಕ"ವೆಂದೆನ್ನಿಸುವವು. ಕರ್ಮವಂದರೆ ಧಾತು ಹೇಳುವ ಕ್ರಿಯೆಗೆ ವಿಷಯವಾದದ್ದು. ಉದಾ: ಪುಸ್ತಕವನ್ನು ಓದು, ಅಕ್ಷರಗಳನ್ನು ಬರೆ.
2. ಕರ್ಮವಿಲ್ಲದ ಧಾತುಗಳು "ಅಕರ್ಮಕ"ವೆಂದೆನ್ನಿಸುವವು. ಅವುಗಳ ಮುಂದೆ "ಯಾರನ್ನು? ಏನನ್ನು?" ಎಂಬ ಪ್ರಶ್ನೆಗಳಿಗೆ ಉತ್ತರ ಬರುವದಿಲ್ಲ. ಉದಾ: ಹೋಗು, ನಡಿ, ಆಗು, ಇರು.
3. ಧಾತು ಹೇಳುವ ಕ್ರಿಯೆಯನ್ನು ನಡಿಸುವವನು ಅದನ್ನು ತನ್ನ ಕೈಯಿಂದ ಮಾಡದೆ ಬೇರೆಯವನ ಮುಖದಿಂದ

ನಡಿಸುವನು ಎಂಬ ಅರ್ಥವನ್ನು ಹೇಳುವ ಧಾತುಗಳು "ಪ್ರಯೋಜಕ"ವೆಂದೆನ್ನಿಸುವವು. ಉದಾ: [ಬೀಳು] ಬೀಳಿಸು, [ಹೊಗು] ಹೊಗಿಸು, [ಮಾಡು] ಮಾಡಿಸು, [ಹೇಳು] ಹೇಳಿಸು, [ತಿನ್ನು] ತಿನ್ನಿಸು, [ಬರೆ] ಬರೆಯಿಸು.

ಯಾವದೊಂದು ಕ್ರಿಯೆ ಮಾಡುವವನು (ಪಡುವವನು) ಅದರ "ಕರ್ತೃ" (Agent) ಎಂದೆನ್ನಿಸುವದು; ಆದರೆ ಕರ್ತೃಗಳೊಳಗೆ "ನಿಜಕರ್ತೃ, ಪರಕರ್ತೃ"ವೆಂಬ ಎರಡು ವಿಶೇಷಗಳುಂಟು. ಹ್ಯಾಗಂದರೆ ಕ್ರಿಯೆಯನ್ನು ತನ್ನ ಸ್ವಂತ ಕೈಯಿಂದ ಮಾಡುವವನೇ ಅದರ "ನಿಜಕರ್ತೃ"; ಪರಂತು ಆದನ್ನು ತನ್ನ ಸ್ವಂತ ಕೈಯಿಂದ ಮಾಡದೆ ಎರಡನೆಯವನಿಂದ ಮಾಡಿಸುವವನೇ "ಪರಕರ್ತೃ" ಎಂದು ವ್ಯವಹಾರವುಂಟು. ಹೀಗಿರಲಾಗಿ ಕೆಲವರು ಕ್ರಿಯಾಪದಗಳಲ್ಲಿ ನಿಜಕರ್ತೃವುಳ್ಳ "ಸ್ವಕರ್ತೃಕಕ್ರಿಯೆ" ಮತ್ತು ಅನ್ಯ ಕರ್ತೃವುಳ್ಳ "ಪರಕರ್ತೃಕಕ್ರಿಯೆ" ಎಂದು ವಿಶೇಷಿಸುತ್ತಾರೆ.

ಉದಾ:

ಸ್ವಕರ್ತೃಕಕ್ರಿಯೆಗೆ	ಅಕರ್ಮಕಧಾತು—ಮನುಷ್ಯರು ಸಾಯುತ್ತಾರೆ.
	ಸಕರ್ಮಕಧಾತು—ಅರಸನು [ರಾಜ್ಯ] ಆಳುತ್ತಾನೆ.
ಪರಕರ್ತೃಕಕ್ರಿಯೆಗೆ	ಸಕರ್ಮಕಧಾತು—ತಾಯಿ ಕೂಸನ್ನು ನಡಿಸುತ್ತಾಳೆ.
	ಪ್ರಯೋಜಕಧಾತು—ಗುರು [ಶಿಷ್ಯನಿಂದ] ಶಾಸ್ತ್ರ ಓದಿಸುತ್ತಾನೆ.

69. ಧಾತುಗಳ ಸ್ವರೂಪವು ಎಷ್ಟು ವಿಧವು?

ಧಾತುಗಳ ರೂಪಗಳನ್ನು ನೋಡಿದರೆ, ಅವುಗಳಲ್ಲಿ "ಸಿದ್ಧಧಾತು, ವ್ಯುತ್ಪನ್ನಧಾತು, ಸಮಾಸಧಾತು" ಎಂಬ ಮೂರು ವಿಶೇಷಗಳನ್ನು ಮಾಡತಕ್ಕದ್ದು. ಹ್ಯಾಗಂದರೆ ಕೃತ್ಪ್ರತ್ಯಯವಿಲ್ಲದೆ ತಮ್ಮಲ್ಲಿ ತಾವೇ ಸಿದ್ಧವಾಗಿರುವ ದೇಶ್ಯಧಾತುಗಳು "ಸಿದ್ಧಧಾತು"ಗಳೆಂದೂ, "ಇಸು" ಮುಂತಾದ ಕೃತ್ಪ್ರತ್ಯಯದ ಅನುಬಂಧನೆಯಿಂದ ಹುಟ್ಟಿದ ಧಾತುಗಳು "ವ್ಯುತ್ಪನ್ನಧಾತು"ಗಳು ಅಥವಾ "ಕೃದಂತಧಾತು"

ಗಳೆಂದೂ, ಸಂಸ್ಕೃತ ಅಥವಾ ಕನ್ನಡ ನಾಮವಾಚಕ ಗುಣವಾಚಕಗಳಿಗೆ ಮಾಡು, ಪಡು, ಆಗು, ಕೊಳ್ಳು ಎಂಬ ದೇಶ್ಯಧಾತುಗಳನ್ನು ಕೂಡಿಸುವದರಿಂದ ಉಂಟಾದ ಧಾತುಗಳು "ಸಮಾಸಧಾತು"ಗಳೆಂದೂ ವರ್ತಿಸುವವು. ಉದಾ:

ಸಿದ್ಧಧಾತುವಿಗೆ—ಮಾಡು, ಹೇಳು, ನಡಿ, ಇಳಿ.
ಕೃದಂತಧಾತುವಿಗೆ—ಮಾಡಿಸು, ನಡಿಸು, ಭೋಗಿಸು.
ಸಮಾಸಧಾತುವಿಗೆ—ದುಃಖಪಡು, ಆಶೆಮಾಡು, ಸರಿಯಾಗು, ಹೆಸರ್ಗೊಳ್ಳು.

70. "ಇಸು" ಪ್ರತ್ಯಯದ ಪ್ರಯೋಗವು ಎಷ್ಟು ವಿಧವು?

"ಇಸು" ಎಂಬ ಕೃತ್ಪ್ರತ್ಯಯವು ಮೂರು ವಿಧದ ಪ್ರಯೋಗದಲ್ಲಿ ವ್ಯವಹರಿಸುವದು, ಹ್ಯಾಗಂದರೆ—

1. ಅಕರ್ಮಕ ಸಿದ್ಧಧಾತುವಿಗೆ "ಇಸು" ಪ್ರತ್ಯಯ ಹತ್ತಿಸುವದರಿಂದ ಸಕರ್ಮಕಧಾತುವಾಗುವದು. ಉದಾ: [ಇಳಿ] ಇಳಿಸು, [ನಡಿ] ನಡಿಸು.

2. ಸಕರ್ಮಕ ಸಿದ್ಧಧಾತುವಿಗೆ "ಇಸು" ಪ್ರತ್ಯಯ ಸೇರಿಸುವದರಿಂದ ಪ್ರಯೋಜಕಧಾತುವಾಗುವದು. ಉದಾ: [ಮಾಡು] ಮಾಡಿಸು, [ನುಡಿ] ನುಡಿಸು, ನುಡಿಯಿಸು.

   ಇಕಾರಾಂತ ಧಾತುಗಳಿಗೆ "ಇಸು" ಪ್ರತ್ಯಯವನ್ನು ಕೂಡಿಸುವಾಗ ಧಾತುವಿನ ಅಂತಸ್ವರವು ಇದ್ದಂತೆ ಇರಬಹುದು, ಅಥವಾ ಅದಕ್ಕೆ ಯಕಾರಾಗಮ ಸೇರಿಸಬಹುದು. ಉದಾ: ನುಡಿಸು, ನುಡಿಯಿಸು, ಕುಡಿಸು, ಕುಡಿಯಿಸು.

   ಎಕಾರಾಂತ ಧಾತುಗಳಿಗೆ "ಇಸು" ಪ್ರತ್ಯಯ ಬರುವಾಗ ಇಕಾರಾಂತದ ರೂಪ ಬರಬಹುದು, ಉದಾ: ನಡಿಸು; ಅಥವಾ ಯಕಾರಾಗಮ ಬರಬಹುದು, ಉದಾ: ನಡೆಯಿಸು; ಅಥವಾ ಎಕಾರಕ್ಕೆ ಪ್ರತಿಯಾಗಿ ಅಕಾರ ಮಾಡಿ ಸುಕಾರ ಮಾತ್ರವೆ ಕೂಡಿಸಬಹುದು, ಉದಾ: ಬರಸು,

ನಡಸು, ಹೊಡಸು; ಯಾಕಂದರೆ ಎಕಾರಾಂತವು ಅಕಾರಾಂತಕ್ಕೆ ಸಮಾನ. ಈ ಕಾರಣದಿಂದ ಬರಹ (ಬರೆಹ ಅಲ್ಲ), ನಡತೆ (ನಡೆತೆ ಅಲ್ಲ), ಹೊಡತ (ಹೊಡೆತ ಅಲ್ಲ).

3. ಸಂಸ್ಕೃತದ ಅಥವಾ ಕನ್ನಡದ ನಾಮಪದಗಳಿಗಾಗಲಿ ಗುಣವಾಚಕಗಳಿಗಾಗಲಿ "ಇಸು" ಪ್ರತ್ಯಯವನ್ನು ಅನುಬಂಧಿಸುವದರಿಂದ ಹೊಸ ಧಾತುಗಳು ಆಗುವವು. ಇವುಗಳಲ್ಲಿ ಅದು ಆ ನಾಮಪದ ಗುಣವಾಚಕಗಳಿಗೆ (1) "ಮಾಡು", (2) ಇಲ್ಲವೆ "ಪಡು", (3) ಅಥವಾ "ಆಗು" ಎಂಬ ಕ್ರಿಯಾರ್ಥವನ್ನು ಕೊಡುವದು. ಉದಾ:

1. ಭೋಗಿಸು, ಸ್ತುತಿಸು, ಕನ್ನಡಿಸು, ಅರ್ಥಿಸು.
2. ದುಃಖಿಸು, ಸಮ್ಮತಿಸು, ಸಂತೋಷಿಸು.
3. ಸಮೀಪಿಸು, ಲೋಪಿಸು, ವಿಸ್ತರಿಸು.

ಈ ಪ್ರತ್ಯಯಾನುಬಂಧನೆಯಲ್ಲಿ ಪ್ರಯೋಗಿಸುವ ಸಂಧಿವಿಧಿಗಳು ಮುಂದಿನ ಉದಾಹರಣೆಗಳಿಂದ ತಿಳುಕೊಳ್ಳತಕ್ಕದ್ದು.

ಬೆರಸು + ಇಸು = ಬೆರಸಿಸು, ಬಡಿಸಿಸು, [ಅನುಕರಣ] ಅನುಕರಿಸು, [ಬೋಧನೆ] ಬೋಧಿಸು, [ಜನನ] ಜನಿಸು, [ಶಾಪ] ಶಪಿಸು, [ವಿಸ್ತಾರ] ವಿಸ್ತರಿಸು, [ಅನುವು] ಅನುವಿಸು, [ಬಿನ್ನಹ] ಬಿನ್ನವಿಸು, ಬಿನ್ನಯಿಸು (ಬಿನ್ನೈಸು). [ಪೂರ] ಪೂರಯಿಸು (ಪೂರೈಸು), [ಆಶ್ರಯ] ಆಶ್ರಯಿಸು (ಆಶ್ರೈಸು).

ಕ್ರಿಯಾಪದರೂಪಗಳು (Verbal forms).

71. ಕ್ರಿಯಾಪದಗಳ ರೂಪತ್ರಯಗಳು ಯಾವವು?

ಧಾತುಗಳ ಮೇಲೆ ಬೇರೆಬೇರೆ ಪ್ರತ್ಯಯಗಳನ್ನು ಹತ್ತಿಸುವದರಿಂದ ಕ್ರಿಯಾಪದಗಳ ರೂಪಗಳು ಆಗುವವು: ಆದರೆ ಆ ಪ್ರತ್ಯಯಗಳೊಳಗೆ "ಪುರುಷಪ್ರತ್ಯಯ, ನಾಮಪ್ರತ್ಯಯ, ಅವ್ಯಯಪ್ರತ್ಯಯ" ವೆಂಬ ಮೂರು ವಿಧವು ಇರಲಾಗಿ, ಅವುಗಳ ಅನುಬಂಧನೆಯಿಂದ

ಉಂಟಾಗುವ ಕ್ರಿಯಾಪದರೂಪಗಳೊಳಗೆ "ಪುರುಷಾತ್ಮಕ, ನಾಮಾತ್ಮಕ, ಅವ್ಯಯಾತ್ಮಕ"ವೆಂಬ ಮೂರು ವಿಧ ಉಂಟು:

72. ಕಾಲತ್ರಯಗಳು (Tenses) ಯಾವವು?

"ವರ್ತಮಾನಕಾಲ" (Present tense), "ಭೂತಕಾಲ" (Past tense), "ಭವಿಷ್ಯತ್ಕಾಲ" (Future tense) ಎಂಬೀ ಮೂರು. ವರ್ತಮಾನಕಾಲವಂದರೆ ವರ್ತಿಸುವ ಕಾಲ; ಭೂತಕಾಲವಂದರೆ ಹೋದ ಕಾಲ; ಭವಿಷ್ಯತ್ಕಾಲವಂದರೆ ಬರುವ ಕಾಲ.

73. ಅರ್ಥವಿಶೇಷತ್ರಯಗಳು (Moods) ಯಾವವು?

"ಸಂಭವಾರ್ಥ" (Indicative), "ಅಭಾವಾರ್ಥ" (Negative), "ವಿಧ್ಯರ್ಥ" (Imperative) ಎಂಬಿವು. ಸಂಭವಾರ್ಥಕ ಕ್ರಿಯಾಪದಗಳು ಮೂರು ಕಾಲಗಳಲ್ಲಿ ಸಂಭವಿಸುವಂಥ ಕ್ರಿಯೆಗಳನ್ನು ಹೇಳುವವು. ಸಾಧಾರಣವಾಗಿ "ನಿಷೇಧ"ವೆಂದೆನ್ನಿಸುವ ಅಭಾವಾರ್ಥಕ ಕ್ರಿಯಾಪದಗಳು ಮೂರು ಕಾಲಗಳಲ್ಲಿ ಸಂಭವಿಸದಂಥ ಕ್ರಿಯೆಗಳನ್ನು ಹೇಳುವವು. ವಿಧ್ಯರ್ಥಕ ಕ್ರಿಯಾಪದಗಳು ಸಂಭವಿಸತಕ್ಕಂಥ ಕ್ರಿಯೆಗಳನ್ನು ಆಜ್ಞಾಪನೆ, ವಿಜ್ಞಾಪನೆ, ಅನುಮತಿ ಮುಂತಾದ ಅರ್ಥಗಳಿಂದ ಹೇಳುವವು.

74. ಪುರುಷಾತ್ಮಕ ಕ್ರಿಯಾಪದಗಳು ಯಾವವು?

ಪುರುಷಾರ್ಥಕ ಕ್ರಿಯಾವಿಭಕ್ತಿಗಳೆಂದೆನ್ನಿಸುವ ಆಖ್ಯಾತಪ್ರತ್ಯಯಗಳನ್ನು ಹೊಂದುವ "ಆಖ್ಯಾತರೂಪಗಳು" (Inflected forms) ಇವೆಲ್ಲಾ ಪುರುಷಾತ್ಮಕ ಕ್ರಿಯಾಪದರೂಪಗಳೇ; ಯಾಕಂದರೆ ಅವೆಕ್ಕೆ ಹತ್ತುವ ಆಖ್ಯಾತಪ್ರತ್ಯಯಗಳು ಪುರುಷಾರ್ಥಕಸರ್ವನಾಮಗಳಿಂದ ಹುಟ್ಟಿ, ಆ ಆಖ್ಯಾತಕ್ರಿಯಾಪದಗಳಿಗೆ ತಮ್ಮ ತಮ್ಮ ಪುರುಷಾರ್ಥ ಕೊಡುತ್ತವೆ. ಅವು "ವರ್ತಮಾನ, ಭೂತ, ಭವಿಷ್ಯತ್ತು, ಭಾವಿ ಅಥವಾ ಸಂಶಯ (Second future), ವಿಧಿ, ನಿಷೇಧ" ಎಂಬೀ ಆರು ವಿಧವು.

75. ಇವುಗಳಿಗೆ ಬರುವ ಪುರುಷತ್ರಯ, ಲಿಂಗತ್ರಯ ವಚನದ್ವಯಗಳು ಯಾವವು?

ಇವು ಹಿಂದೆ (೫೮ನೆ ಉತ್ತರದಲ್ಲಿ) ವಿವರಿಸಿದ ಉತ್ತಮ, ಮ

ಧ್ಯಮ, ಪ್ರಥಮಪುರುಷಗಳೇ. ಪ್ರಥಮಪುರುಷಕ್ಕೆ ಪುಂಸ್ತ್ರೀನಪುಂಸಕವೆಂಬ ಲಿಂಗತ್ರಯಗಳೂ, ಮತ್ತು ಮೂರು ಪುರುಷಗಳಿಗೆ "ಏಕವಚನ, ಬಹುವಚನ"ವೆಂಬ ವಚನದ್ವಯಗಳೂ ಬರುವವು.

ಆಖ್ಯಾತ ಪ್ರತ್ಯಯಗಳು ಯಾವವಂದರೆ—

	ಪುರುಷ.	ಸರ್ವನಾಮ.	ವರ್ತಮಾನ.	ಭೂತ.	ಭವಿಷ್ಯತ್ತು.	ಭಾವಿ.	ವಿಧಿ.	ನಿಷೇಧ.
ಏಕವಚನ.	ಉತ್ತಮ.	ನಾನು	ಏನೆ	ಎನು	ಎನು	ಏನು	ಉವೆ	ಎನು
	ಮಧ್ಯಮ.	ನೀನು	ಈ	ಇ [ಎ]	ಇ	ಈಯೆ		ಎ
	ಪ್ರಥ. ಪು.	ಅವನು	ಆನೆ	ಅನು	ಅನು	ಆನು		ಅನು
	ಸ್ತ್ರೀ.	ಅವಳು	ಆಳೆ	ಅಳು	ಅಳು	ಆಳು	ಅಲಿ	ಅಳು
	ನಪುಂ.	ಅದು	ಅದೆ	ಇತು	ಅದು	ಈತು		ಅದು
ಬಹುವಚನ.	ಉತ್ತಮ.	ನಾವು	ಏವೆ	ಎವು	ಎವು	ಏವು	ಉವ, ಓಣ	ಎವು
	ಮಧ್ಯಮ.	ನೀವು	ಈರಿ	ಇರಿ	ಇರಿ	ಈರಿ	ಇರಿ	ಅರಿ
	ಪ್ರಥ. ಪು. ಸ್ತ್ರೀ.	ಅವರು	ಆರೆ	ಅರು	ಅರು	ಆರು	ಅಲಿ	ಅರು
	ನಪುಂ.	ಅವು	ಅವೆ	ಅವು	ಅವು	ಆವು		ಅವು

76. ಈ ಆಖ್ಯಾತಪ್ರತ್ಯಯಗಳ ಅನುಬಂಧನೆ ಹ್ಯಾಗೆ?

ಈ ವಿಷಯಕ್ಕೆ ತಿಳಿಯತಕ್ಕ ಮುಖ್ಯ ವಿಧಿಗಳು ಯಾವವಂದರೆ—

1. ಧಾತುವಿಗೆ ವರ್ತಮಾನ ಪ್ರತ್ಯಯ ಪರವಾದಾಗ ಧಾತುವಿಗೂ ಪ್ರತ್ಯಯಕ್ಕೂ ಮಧ್ಯದಲ್ಲಿ "ಉತ್ತ" ಎಂಬ ಆಗಮ ಬರುತ್ತದೆ.
2. ಭೂತಪ್ರತ್ಯಯ ಪರವಾದಾಗ "ದ"ಕಾರಾಗಮ ಬರುತ್ತದೆ. ಉಕಾರಾಂತ ಧಾತುವಿಗೆ ದಕಾರಾಗಮ ಬಂದಾಗ ಧಾತುವಿನ ಉಕಾರಕ್ಕೆ "ಇ"ಕಾರಾದೇಶ ಬರುತ್ತದೆ.

3. ಭವಿಷ್ಯತ್ಪ್ರತ್ಯಯು ಪರವಾದಾಗ "ಉವ" ಎಂಬ ಆಗಮ ಬರುತ್ತದೆ.
4. ಭಾವಿ, ವಿಧಿ, ನಿಷೇಧ ಪ್ರತ್ಯಯಗಳು ಧಾತುವಿಗೆ ಹತ್ತುವಾಗ ಕನ್ನಡಸಂಧಿವಿಧಿಗಳನ್ನನುಸರಿಸಿ ಸೇರುವವು. ವಿಧಿರೂಪದಲ್ಲಿ ಮಧ್ಯಮಪುರುಷದ ಏಕವಚನದಲ್ಲಿ ಮಾತ್ರ ಧಾತುಸ್ವರೂಪವೇ ಪ್ರಯೋಗಿಸುತ್ತದೆ.

(ಈ ವಿವಿಧ ಆಖ್ಯಾತಕ್ರಿಯಾಪದಗಳ ಪ್ರಯೋಗದ ವಿವರವನ್ನು ಮುಂದೆ 109-113ನೇ ಉತ್ತರಗಳಲ್ಲಿ ನೋಡು.)

77. ಮೇಲಿನ ವಿಧಿಗಳಿಗೆ ಉದಾಹರಣೆಗಳು ಯಾವವು?

ಮೇಲೆ ವಿವರಿಸಿದ ಕ್ರಿಯಾಪದರೂಪಗಳನ್ನೆಲ್ಲಾ ಮುಂದಿರುವ "ಕ್ರಿಯಾಮಾಲೆ" (Conjugation) ಎಂಬ ಎರಡು ಪಟ್ಟಿಗಳು ಕ್ರಮದಿಂದ ತೋರಿಸುತ್ತವೆ. ಮೊದಲನೇ ಕ್ರಿಯಾಮಾಲೆ ಉಕಾರಾಂತ ಧಾತುಗಳ ಉದಾಹರಣೆಗಳನ್ನೂ, ಎರಡನೇ ಕ್ರಿಯಾಮಾಲೆ ಇಕಾರಾಂತ ಧಾತುಗಳ ಉದಾಹರಣೆಗಳನ್ನೂ ತೋರಿಸುವವು.

78. ನಾಮಮಾತ್ಮಕಕ್ರಿಯಾಪದರೂಪಗಳು (Nominalized Verbal forms) ಯಾವವು?

"ಕೃದ್ವಾಚಿ" (Verbal Adjective or Participle), "ಕೃನ್ನಾಮ" (Participial Noun), "ಕ್ರಿಯಾನಾಮ" (Verbal Noun or Gerund) ಎಂಬೀ ಮೂರು. ಅವು ಹ್ಯಾಗಂದರೆ—

1. "ಕೃದ್ವಾಚಿಗಳು" ಇವನ್ನು ರೂಪಿಸುವದಕ್ಕೆ ವರ್ತಮಾನ ಭವಿಷ್ಯತ್ಕಾಲಾರ್ಥದಲ್ಲಿ "ಉವ" ಭೂತಕಾಲಾರ್ಥದಲ್ಲಿ "ಇದ, ದ", ನಿಷೇಧಾರ್ಥದಲ್ಲಿ "ಅದ" ಎಂಬ ವಿಕರಣ ಪ್ರತ್ಯಯಗಳು ಧಾತುಗಳಿಗೆ ಹತ್ತುವವು.

ಕೃದ್ವಾಚಿ:	ವರ್ತಮಾನ ಭವಿಷ್ಯತ್ಕಾಲ	ಉವ	ಮಾಡುವ	ನುಡಿಯುವ
	ಭೂತಕಾಲ	ಇದ, ದ	ಮಾಡಿದ	ನುಡಿದ
	ನಿಷೇಧ	ಅದ	ಮಾಡದ	ನುಡಿಯದ

(ಇವುಗಳ ಪ್ರಯೋಗದ ವಿವರವನ್ನು ಮುಂದೆ 144, 152ನೇ ಉತ್ತರಗಳಲ್ಲಿ ನೋಡು.)

2. "ಕೃನ್ನಾಮಗಳು" ಕೃದ್ವಾಚಿಗಳಿಗೆ ಪ್ರಥಮಪುರುಷದ ಸರ್ವನಾಮಗಳನ್ನು ಸಮಾಸ ಮಾಡುವದರಿಂದ ಉಂಟಾಗುವವು. ಉದಾ:

ಕೃನ್ನಾಮ: ವರ್ತಮಾನ, ಭವಿಷ್ಯತ್ಕಾಲಿಕ } ಮಾಡುವವನು, ನುಡಿಯುವವನು—ಇತ್ಯಾದಿ.

ಭೂತಕಾಲಿಕ—ಮಾಡಿದವನು, ನುಡಿದವನು—ಇತ್ಯಾದಿ.

ನಿಷೇಧ—ಮಾಡದವನು, ನುಡಿಯದವನು—ಇತ್ಯಾದಿ.

(ಇವುಗಳ ಪ್ರಯೋಗದ ವಿವರ ಮುಂದೆ 145ನೇ ಉತ್ತರದಲ್ಲಿ ನೋಡು.)

3. "ಕ್ರಿಯಾನಾಮಗಳು" ಕ್ರಿಯೆಯನ್ನು ಭಾವಾರ್ಥಕ ನಾಮಪದಗಳಾಗಿ ಹೇಳುವವು. ಇವನ್ನು ರೂಪಿಸುವದಕ್ಕೆ ಕೃದ್ವಾಚಿಗಳಿಗೆ "ದು" ಎಂಬ ನಪುಂಸಕ ಪ್ರತ್ಯಯ ಹತ್ತುವದು.

ಕ್ರಿಯಾನಾಮ:		
ವರ್ತಮಾನ, ಭವಿಷ್ಯತ್ಕಾಲ	ಮಾಡುವದು	ನುಡಿಯುವದು
ಭೂತಕಾಲ	ಮಾಡಿದ್ದು	ನುಡಿದದ್ದು
ನಿಷೇಧ	ಮಾಡದ್ದು	ನುಡಿಯದ್ದು

(ಹಳಗನ್ನಡದಲ್ಲಿ "ಅತು, ಅತ್ತು, ಇತು, ಇತ್ತು" ಎಂಬ ಪ್ರತ್ಯಯಗಳು ಬರುವದೆಂದು ಶಬ್ದಮಣಿದರ್ಪಣ 226ನೇ ಸೂತ್ರದಲ್ಲಿ ಹೇಳಿರುವ ಪ್ರಕಾರ ನುಡಿದತ್ತು=ನುಡಿದದ್ದು, ಮಾಡಿತ್ತು=ಮಾಡಿದ್ದು ಎಂದು ಹೊಸಗನ್ನಡಕ್ಕೆ ಬಂದಿರುತ್ತದೆ.)

(ಇವುಗಳ ಪ್ರಯೋಗದ ವಿವರ ಮುಂದೆ 146ನೇ ಉತ್ತರದಲ್ಲಿ ನೋಡು.)

79. ಅವ್ಯಯಾತ್ಮಕ ಕ್ರಿಯಾಪದರೂಪಗಳು (Uninflected Verbal forms) ಯಾವವು?

"ಭಾವರೂಪ" (Infinitive) "ನ್ಯೂನರೂಪ" Conjunctive Participle) ಎಂಬಿವು.

1. "ಭಾವರೂಪಗಳು" ಕ್ರಿಯೆಯನ್ನು ಭಾವಾರ್ಥವಾಗಿ ಹೇಳುವವು.

ಅವು ಮೂರು ವಿಧವು. ಇವನ್ನು ರೂಪಿಸುವದಕ್ಕೆ ಧಾತುವಿನ ಮೇಲೆ "ಅ, ಅಲು, ಅಲಿಕ್ಕೆ" ಎಂಬ ವಿಕರಣಪ್ರತ್ಯಯಗಳು ಹತ್ತುವವು.

		ವಿಕರಣ.	ಉಕಾರಾಂತ.	ಇಕಾರಾಂತ.
ಭಾವರೂಪಗಳು:	1ನೆ	ಅ	ಮಾಡ	ನುಡಿಯ
	2ನೆ	ಅಲು	ಮಾಡಲು	ನುಡಿಯಲು
	3ನೆ	ಅಲಿಕ್ಕೆ	ಮಾಡಲಿಕ್ಕೆ	ನುಡಿಯಲಿಕ್ಕೆ

(ಇವುಗಳ ಪ್ರಯೋಗದ ವಿವರವನ್ನು ಮುಂದೆ 142ನೇ ಉತ್ತರದಲ್ಲಿ ನೋಡು.)

2. "ನ್ಯೂನರೂಪಗಳು" ಹೇಳುವ ಕ್ರಿಯೆ ಸಂಪೂರ್ಣವಲ್ಲ, ಅಸಮಾಪ್ತವಾಗಿದೆ; ಅದು ಸಮಾಪ್ತವಾಗುವದಕ್ಕೆ ವಾಕ್ಯವನ್ನು ಮುಗಿಸುವ ಇನ್ನೊಂದು ಆಖ್ಯಾತಕ್ರಿಯಾಪದವು ಅಗತ್ಯ. ಆದ ಕಾರಣ ಕೆಲವರು ಅವಕ್ಕೆ "ಕ್ರಿಯಾನ್ಯೂನ"ಗಳೆಂಬ ಹೆಸರನ್ನಿಟ್ಟರು. ಅವು "ವರ್ತಮಾನ, ಭೂತ, ನಿಷೇಧ"ವೆಂಬ ಮೂರು ವಿಧವು. ಇವನ್ನು ರೂಪಿಸುವದಕ್ಕೆ ವರ್ತಮಾನಕಾಲಾರ್ಥದಲ್ಲಿ "[ಉತ್ತ] ಉತ್ತಾ",—ಭೂತಕಾಲಾರ್ಥದಲ್ಲಿ "ಇ, ದು",—ನಿಷೇಧಾರ್ಥದಲ್ಲಿ "ಅದೆ" ಎಂಬ ವಿಕರಣಪ್ರತ್ಯಯಗಳು ಧಾತುಗಳಿಗೆ ಹತ್ತುವವು.

ಉದಾ:

ನ್ಯೂನಗಳು:	ವರ್ತಮಾನ	ಉತ್ತಾ	ಮಾಡುತ್ತಾ	ನುಡಿಯುತ್ತಾ
	ಭೂತಕಾಲ	ಇ, ದು	ಮಾಡಿ	ನುಡಿದು
	ನಿಷೇಧ	ಅದೆ	ಮಾಡದೆ	ನುಡಿಯದೆ

(ಈ ನ್ಯೂನರೂಪಗಳ ಪ್ರಯೋಗದ ವಿವರ ಮುಂದೆ 143ನೇ ಉತ್ತರದಲ್ಲಿ ನೋಡು.)

ಉಕಾರಾಂತ ಧಾತುಗಳ ಉದಾಹರಣೆ—“ಮಾಡು”.

1. ಪುರುಷಾತ್ಮಕ ಆಖ್ಯಾತರೂಪಗಳು:

	ಸರ್ವನಾಮ.		1. ವರ್ತಮಾನ.	2. ಭೂತ.	3. ಭವಿಷ್ಯತ್ತು.	4. ಭಾವಿ.	5. ವಿಧಿ.	6. ನಿಷೇಧ.
ಏಕವಚನ.	ಉತ್ತಮ..	ನಾನು	ಮಾಡುತ್ತೇನೆ	ಮಾಡಿದೆನು	ಮಾಡುವೆನು	ಮಾಡೇನು	ಮಾಡುವೆ	ಮಾಡೆನು
	ಮಧ್ಯಮ..	ನೀನು	ಮಾಡುತ್ತೀ	ಮಾಡಿದಿ,—ದೆ	ಮಾಡುವಿ,—ವೆ	ಮಾಡೀಯೆ	ಮಾಡು	ಮಾಡೆ
	ಪ್ರಥ. ಪು..	ಅವನು	ಮಾಡುತ್ತಾನೆ	ಮಾಡಿದನು	ಮಾಡುವನು	ಮಾಡ್ಯಾನು		ಮಾಡನು
	ಸ್ತ್ರೀ..	ಅವಳು	ಮಾಡುತ್ತಾಳೆ	ಮಾಡಿದಳು	ಮಾಡುವಳು	ಮಾಡ್ಯಾಳು	ಮಾಡಲಿ	ಮಾಡಳು
	ನಪುಂ..	ಅದು	ಮಾಡುತ್ತದೆ	ಮಾಡಿತು	ಮಾಡುವದು	ಮಾಡೀತು		ಮಾಡದು
ಬಹುವಚನ.	ಉತ್ತಮ..	ನಾವು	ಮಾಡುತ್ತೇವೆ	ಮಾಡಿದೆವು	ಮಾಡುವೆವು	ಮಾಡೇವು	ಮಾಡುವಾ, ಮಾಡೋ	ಮಾಡೆವು
	ಮಧ್ಯಮ..	ನೀವು	ಮಾಡುತ್ತೀರಿ	ಮಾಡಿದಿರಿ	ಮಾಡುವಿರಿ	ಮಾಡೀರಿ	ಮಾಡಿರಿ (ಮಾಡಿ) [ಣ	ಮಾಡರಿ
	ಪ್ರ.ಪು.ಸ್ತ್ರೀ.	ಅವರು	ಮಾಡುತ್ತಾರೆ	ಮಾಡಿದರು	ಮಾಡುವರು	ಮಾಡ್ಯಾರು		ಮಾಡರು
	ನಪುಂ.	ಅವು	ಮಾಡುತ್ತವೆ	ಮಾಡಿದವು	ಮಾಡುವವು	ಮಾಡ್ಯಾವು	ಮಾಡಲಿ	ಮಾಡವು

2. ನಾಮಾತ್ಮಕರೂಪಗಳು:

	ವರ್ತಮಾನ, ಭವಿಷ್ಯತ್ತು.	ಭೂತ.	ನಿಷೇಧ.
1. ಕೃದ್ವಾಚಿಗಳು—	ಮಾಡುವ	ಮಾಡಿದ	ಮಾಡದ
2. ಕೃನ್ನಾಮಗಳು—	ಮಾಡುವವನು	ಮಾಡಿದವನು	ಮಾಡದವನು
3. ಕ್ರಿಯಾನಾಮಗಳು—	ಮಾಡುವದು	ಮಾಡಿದ್ದು	ಮಾಡದ್ದು

3. ಅವ್ಯಯಾತ್ಮಕರೂಪಗಳು:

1. ಭಾವರೂಪಗಳು— ಮಾಡ ಮಾಡಲು ಮಾಡಲಿಕ್ಕೆ
2. ನ್ಯೂನರೂಪಗಳು— (ವರ್ತ): ಮಾಡುತ್ತಾ (ಭೂತ): ಮಾಡಿ (ನಿಷೇ): ಮಾಡದೆ

ಇಕಾರಾಂತ ಧಾತುಗಳ ಉದಾಹರಣೆ—"ನುಡಿ".

1. ಪುರುಷಾತ್ಮಕ ಆಖ್ಯಾತರೂಪಗಳು:

	ಸರ್ವನಾಮ.		1. ವರ್ತಮಾನ.	2. ಭೂತ.	3. ಭವಿಷ್ಯತ್ತು.	4. ಭಾವಿ.	5. ವಿಧಿ.	6. ನಿಷೇಧ.
ಏಕವಚನ	ಉತ್ತಮ..	ನಾನು	ನುಡಿಯುತ್ತೇನೆ	ನುಡಿದೆನು	ನುಡಿಯುವೆನು.	ನುಡಿದೇನು	ನುಡಿಯುವೆ	ನುಡಿಯೆನು
	ಮಧ್ಯಮ..	ನೀನು	ನುಡಿಯುತ್ತೀ	ನುಡಿದಿ,—ದೆ	ನುಡಿಯುವಿ	ನುಡಿದೀಯೆ	ನುಡಿ	ನುಡಿಯೆ
	ಪ್ರಥ. ಪು..	ಅವನು	ನುಡಿಯುತ್ತಾನೆ	ನುಡಿದನು	ನುಡಿಯುವನು	ನುಡಿದಾನು	ನುಡಿಯಲಿ	ನುಡಿಯನು
	ಸ್ತ್ರೀ.	ಅವಳು	ನುಡಿಯುತ್ತಾಳೆ	ನುಡಿದಳು	ನುಡಿಯುವಳು	ನುಡಿದಾಳು		ನುಡಿಯಳು
	ನಪುಂ.	ಅದು	ನುಡಿಯುತ್ತದೆ	ನುಡಿಯಿತು	ನುಡಿಯುವದು	ನುಡಿದೀತು		ನುಡಿಯದು
ಬಹುವಚನ	ಉತ್ತಮ..	ನಾವು	ನುಡಿಯುತ್ತೇವೆ	ನುಡಿದೆವು	ನುಡಿಯುವೆವು	ನುಡಿದೇವು	ನುಡಿಯುವಾ, ನುಡಿ[ಯೋಣ	ನುಡಿಯೆವು
	ಮಧ್ಯಮ..	ನೀವು	ನುಡಿಯುತ್ತೀರಿ	ನುಡಿದಿರಿ	ನುಡಿಯುವಿರಿ	ನುಡಿದೀರಿ	ನುಡಿಯಿರಿ	ನುಡಿಯರಿ
	ಪ್ರ. ಪು. ಸ್ತ್ರೀ.	ಅವರು	ನುಡಿಯುತ್ತಾರೆ	ನುಡಿದರು	ನುಡಿಯುವರು	ನುಡಿದಾರು	ನುಡಿಯಲಿ	ನುಡಿಯರು
	ನಪುಂ.	ಅವು	ನುಡಿಯುತ್ತವೆ	ನುಡಿದವು	ನುಡಿಯುವವು	ನುಡಿದಾವು		ನುಡಿಯವು

2. ನಾಮಾತ್ಮಕರೂಪಗಳು:	ವರ್ತಮಾನ, ಭವಿಷ್ಯತ್ತು.	ಭೂತ.	ನಿಷೇಧ.
1. ಕೃದ್ವಾಚಿಗಳು—	ನುಡಿಯು	ನುಡಿದ	ನುಡಿಯದ
2. ಕೃನ್ನಾಮಗಳು—	ನುಡಿಯುವವನು	ನುಡಿದವನು	ನುಡಿಯದವನು
3. ಕ್ರಿಯಾನಾಮಗಳು.	ನುಡಿಯುವದು	ನುಡಿದದ್ದು	ನುಡಿದದ್ದು

3. ಅವ್ಯಯಾತ್ಮಕರೂಪಗಳು:

1. ಭಾವರೂಪಗಳು—	ನುಡಿಯ	ನುಡಿಯಲು	ನುಡಿಯಲಿಕ್ಕೆ
2. ನ್ಯೂನರೂಪಗಳು—	(ವರ್ತ): ನುಡಿಯುತ್ತಾ	(ಭೂತ): ನುಡಿದು	(ನಿಷೇ): ನುಡಿಯದೆ

(ಎಕಾರಾಂತ ಧಾತುಗಳಿಗೂ ಹೀಗೆಯೇ ರೂಪವಾಗುವವು.)

ವಿಕೃತಕ್ರಿಯಾಪದಗಳು (Irregular Verbs).

80. ಎಲ್ಲಾ ಧಾತುಗಳ ರೂಪಗಳು ಮೇಲಿನ ಉದಾಹರಣೆಗಳಿಗೆ ಅನುಸಾರವಾಗಿವೆಯೋ?

ಇಲ್ಲಾ, ಹಲವು ಧಾತುಗಳ ರೂಪಗಳು ಹಿಂದೆ ವಿವರಿಸಿದ ವಿಧಿಗಳನ್ನು ಬಿಟ್ಟು ಬೇರೆಬೇರೆ ವಿಕೃತಿಗಳನ್ನು ಹೊಂದಿ ಅವೆ. ಅನೇಕ ಧಾತುಗಳ ಭೂತರೂಪಗಳಿಗೂ ಕೆಲವು ಧಾತುಗಳ ಭವಿಷ್ಯದ್ರೂಪಗಳಿಗೂ ವಿಕೃತಿ ಬಂದದೆ. ಇನ್ನು ಕೆಲವು ಧಾತುಗಳ ವಿಧಿ ನಿಷೇಧರೂಪಗಳೂ ವಿಕಾರವಾಗಿವೆ. ಇಂಥಾ ಕ್ರಿಯಾಪದಗಳಿಗೆ "ವಿಕೃತಕ್ರಿಯಾಪದಗಳು" ಎಂಬ ಹೆಸರು.

81. ವಿಕೃತಭೂತರೂಪಗಳು ಯಾವವು?

ಅವುಗಳನ್ನು ಮುಂದಿನ ಪಟ್ಟಿಯಲ್ಲಿ ನೋಡಿ ತಿಳುಕೊಳ್ಳತಕ್ಕದ್ದು. ಅದರಲ್ಲಿ ಭೂತನ್ಯೂನ ಭೂತಕೃದ್ವಾಚಿ ರೂಪಗಳು ಕಾಣಿಸಿ ಅವೆ. ಇವುಗಳಿಗೆ (76ನೇ ಉತ್ತರದಲ್ಲಿ ವಿವರಿಸಿದ ವಿಧಿಗಳ ಪ್ರಕಾರ) ಪುರುಷಪ್ರತ್ಯಯಗಳನ್ನು ಹತ್ತಿಸುವದರಿಂದ ವಿಕಾರವಾದ ಭೂತ ಭವಿಷ್ಯತ್ ಆಖ್ಯಾತರೂಪಗಳು ಆಗುವವು. ಭೂತಕಾಲದ ನಪುಂಸಕೈಕವಚನದ ಆಖ್ಯಾತರೂಪವು ಮಾತ್ರ ವಿಧಿ ಬಿಟ್ಟ ಕಾರಣ, ಪಟ್ಟಿಯಲ್ಲಿ ಪ್ರತ್ಯೇಕವಾಗಿ ಕಾಣಿಸಿ ಅದೆ. ವಿಕೃತ ಕೃದ್ವಾಚಿಗಳ ಮೇಲೆ "ದ್ದು" ಪ್ರತ್ಯಯ ಹತ್ತಿಸುವದರಿಂದ ವಿಕೃತ ಕ್ರಿಯಾನಾಮಗಳು ಆಗುವವು.

82. ವಿಕಾರವಾದ ಭವಿಷ್ಯದ್ರೂಪಗಳು ಯಾವವು?

ಈಗಿನ ಪ್ರಯೋಗದಲ್ಲಿ ಆರು ವಿಕೃತಭವಿಷ್ಯದ್‌ಕೃದ್ವಾಚಿಗಳು ವರ್ತಿಸುತ್ತವೆ. ಇವುಗಳ ಮೇಲೆ ಭವಿಷ್ಯತ್ಪ್ರತ್ಯಯಗಳನ್ನು ಹತ್ತಿಸುವದರಿಂದ ವಿಕೃತಭವಿಷ್ಯತ್ ಆಖ್ಯಾತರೂಪಗಳು ಆಗುವವು.

(ಅನ್ನು) ಅಂಬ = ಅಂಬುವ	(ಉಣ್ಣು) ಉಂಬ = ಉಂಬುವ.
(ಎನ್ನು) ಎಂಬ = ಎಂಬುವ.	(ಕೊಳ್ಳು) ಕೊಂಬ = ಕೊಂಬುವ.
(ತಿನ್ನು) ತಿಂಬ = ತಿಂಬುವ	(ಕಾಣು) ಕಾಂಬ = ಕಾಂಬುವ.

83. ವಿಕೃತಭೂತರೂಪಗಳ ಪಟ್ಟಿ.

ಧಾತು.	ಭೂತನ್ಯೂನ.	ಭೂತ ಕೃದ್ವಾಚಿ.	ಭೂತ ಆಖ್ಯಾತ ನಪುಂಸಕೈಕವಚನ.	ಉದಾಹರಣೆಗೆ ಅನುಸಾರವಾದ ಧಾತುಗಳು.
1. ಬಿರಿ	ಬಿರಿದು ಬಿರಿತು	ಬಿರಿದ ಬಿರಿತ	ಬಿರಿದಿತು ಬಿರಿಯಿತು	ಬಿರಿ, ಬಲಿ, ಅಲೆ, ಮುನಿ, ಅಸೆ, ಎಸೆ, ಕಿಸಿ, ಕುಸಿ, ನುಸಿ, ಬಸಿ, ಬೆಸೆ, ಮಸೆ, ಹಸಿ, ಹಿಸಿ, ಹುಸಿ, ಹೊಸೆ, ದುಡಿ, ಪಡೆ.
2. ಅರಿ	ಅರಿತು	ಅರಿತ	ಅರಿತಿತು ಅರಿಯಿತು	ಅರಿ, ಕುರಿ, ಮರೆ, ಸೆಡರು; ಅವಿ, ಕಲಿ, ಬಲಿ, ಮಲೆ, ಕಳೆ, ಕೊಳೆ, ಚಳಿ, ಮೊಳೆ.
3. ಬಾ	ಬಾತು	ಬಾತ	ಬಾತಿತು	ಬಾ, ಬೀ, ಕೀ, ಹೂ.
4. ಬೆವರು	ಬೆವರ್ತು	ಬೆವರ್ತ	ಬೆವರ್ತಿತು	ಬೆವರು, ಕೊಸರು, ಚಿಗುರು, ತಳಿರು, ಮಿಳಿರು, ಕವಲು, ಮಡಲು.
5. ಒದೆ	ಒದ್ದು	ಒದ್ದ	ಒದ್ದಿತು	ಒದೆ, ಕದಿ, ಹೊದಿ.
6. ಮಿದಿ	ಮಿತ್ತು	ಮಿತ್ತ	ಮಿತ್ತಿತು	ಮಿದಿ.
7. ಅನ್ನು	ಅಂದು	ಅಂದ	ಅಂದಿತು	ಅನ್ನು, ಎನ್ನು, ತಿನ್ನು.
8. ಉಣ್ಣು	ಉಂಡು	ಉಂಡ	ಉಂಡಿತು	ಉಣ್ಣು.

9. ಕಾಣು	ಕಂಡು	ಕಂಡ	ಕಂಡಿತು	ಕಾಣು.
10. ಕೊಳ್ಳು	ಕೊಂಡು	ಕೊಂಡ	ಕೊಂಡಿತು	ಕೊಳ್ಳು.
11. ಕೊಲ್ಲು	ಕೊಂದು	ಕೊಂದ	ಕೊಂದಿತು	ಕೊಲ್ಲು, ಸಲ್ಲು*, ತರು*, ಬರು*.
12. ನಿಲ್ಲು	ನಿಂತು	ನಿಂತ	ನಿಂತಿತು	ನಿಲ್ಲು.
13. ಗೆಲ್ಲು	ಗೆದ್ದು	ಗೆದ್ದ	ಗೆದ್ದಿತು	ಗೆಲ್ಲು, ಮೆಲ್ಲು, ಕಳು, ಇರು*.
14. ಹೊರು	ಹೊತ್ತು	ಹೊತ್ತ	ಹೊತ್ತಿತು	ಹೊರು, ಆಸರು, ಎಚ್ಚರು, ತೆರು, ಬೇಸರು, ಹೆರು, ಅಳು, ಉಳು.
15. ಏಳು	ಎದ್ದು	ಎದ್ದ	ಎದ್ದಿತು	ಏಳು, ಬೀಳು*.
16. ಕೀಳು	ಕಿತ್ತು	ಕಿತ್ತ	ಕಿತ್ತಿತು	ಕೀಳು.
17. ಇಡು	ಇಟ್ಟು	ಇಟ್ಟ	ಇಟ್ಟಿತು	ಅಡು, ಇಡು, ಉಡು, ಕೆಡು, ಕೊಡು, ತೊಡು, ನೆಡು, ಪಡು, ಬಿಡು, ಮಡು, ಸುಡು, ಹಡು.

*„ಸಲ್ಲು, ತರು, ಬರು, ಇರು, ಬೀಳು" ಎಂಬ ಧಾತುಗಳಿಗೆ ಭೂತ ಆಖ್ಯಾತನಪುಂಸಕೈಕವಚನವಲ್ಲಿ ಸಂಕ್ಷಿಪ್ತರೂಪವು ಬರುವದು, ಹ್ಯಾಗಂದರೆ:—„ಸಂತು, ತಂತು, ಬಂತು, ಇತ್ತು, ಬಿತ್ತು".

ಧಾತು.	ಭೂತ ನ್ಯೂನ.	ಭೂತ ಕೃದ್ವಾಚಿ.	ಭೂತ ಆಖ್ಯಾತ ನಪುಂಸಕೈಕವಚನ.	ಉದಾಹರಣೆಗೆ ಅನುಸಾರವಾದ ಧಾತುಗಳು.
18. ನಗು.	ನಕ್ಕು	ನಕ್ಕ	ನಕ್ಕಿತು	ನಗು, ಉಗು, ಬಿಗು, ಮಿಗು, ಹೊಗು.
19. ಬಿಸಾಡು	ಬಿಸಾಟು	ಬಿಸಾಟ	ಬಿಸಾಟಿತು	ಬಿಸಾಡು, ಬಿಸುಡು, ಹೊರಡು.
20. ಈನು	ಈದು	ಈದ	ಈಯಿತು ಈದಿತು	ಈನು.
21. ಸೀನು	ಸೀತು	ಸೀತ	ಸೀತಿತು	ಸೀನು, ಆನು, ನೋನು, ಕೂರು, ಜೋಲು, ನೂಲು, ನೇಲು, ಸಾಲು, ಸೋಲು, ಹೇಲು.
22. ನೋ	ನೊಂದು	ನೊಂದ	ನೊಂದಿತು	ನೋ, ಬೇ, ಮಾ.
23. ಈ	ಇತ್ತು	ಇತ್ತ	ಇತ್ತಿತು	ಈ, ಸಾ.
24. ಆಗು	ಆಗಿ	ಆದ	ಆಯಿತು	ಆಗು, ಹೋಗು.

84. ವಿಕೃತನಿಷೇಧರೂಪಗಳು ಯಾವವು?

ಧಾತು:	ನಿಷೇಧನ್ಯೂನ:	ನಿ. ಕೃದ್ವಾಚಿ:	ನಿ. ಆಖ್ಯಾತ:
(ತರು)	ತಾರದೆ	ತಾರದ	ತಾರೆನು
(ಬರು)	ಬಾರದೆ	ಬಾರದ	ಬಾರೆನು

85. ವಿಕೃತಮಧ್ಯಮಪುರುಷ ವಿಧಿರೂಪಗಳು ಯಾವವು?

ಧಾತು:	ವಿಧಿ ಏಕವಚನ:	ವಿಧಿ ಬಹುವಚನ:
(ತರು)	ತಾ=ತಾರೋ	ತನ್ನಿ, ತನ್ನಿರಿ (ತರ್ರಿ).
(ಬರು)	ಬಾ=ಬಾರೋ	ಬನ್ನಿ, ಬನ್ನಿರಿ (ಬರ್ರಿ).

86. "ಇರು" ಧಾತುವಿನ ಕ್ರಿಯಾಮಾಲೆಯು ಹ್ಯಾಗೆ?

ಬಹಳವಾಗಿ ಪ್ರಯೋಗಿಸುವ ಇರು ಧಾತುವಿನ ಆಖ್ಯಾತ ರೂಪಗಳಿಗೆ ಮೇಲಿನ ಪಟ್ಟಿಯಲ್ಲಿ ತೋರಿಸಿದ ವಿಕೃತಿಗಳು ಅಲ್ಲದೆ ಇನ್ನು ಕೆಲವು ಬೇರೆ ವಿಕೃತಿಗಳು ಬರುವ ಕಾರಣ, ಅದರ ಕ್ರಿಯಾಮಾಲೆ ಕೆಳಗೆ ತೋರಿಸಿ ಅದೆ. ಹ್ಯಾಗಂದರೆ—

1. ಅವ್ಯಯಾತ್ಮಕರೂಪಗಳು:

1. ಭಾವರೂಪಗಳು:—ಇರ, ಇರಲು, ಇರಲಿಕ್ಕೆ.

	ವರ್ತಮಾನ, ಭವಿಷ್ಯತ್ತು.	ಭೂತ.	ನಿಷೇಧ.
2. ನ್ಯೂನರೂಪಗಳು . . .	ಇರುತ್ತಾ	ಇದ್ದು	ಇರದೆ
2. ನಾಮಾತ್ಮಕರೂಪಗಳು:			
1. ಕೃದ್ವಾಚಿಗಳು	ಇರುವ	ಇದ್ದ	ಇರದ
2. ಕೃನ್ನಾಮಗಳು	ಇರುವವನು	ಇದ್ದವನು	ಇರದವನು
3. ಕ್ರಿಯಾನಾಮಗಳು . .	ಇರುವದು	ಇದ್ದದ್ದು	ಇರದ್ದು

3. ಪುರುಷಾತ್ಮಕ ಆಖ್ಯಾತರೂಪಗಳು ಮುಂದಿನ ಪಟ್ಟಿಯಲ್ಲಿ ತೋರಿಸಿ ಅವೆ.

“ಇರು” ಧಾತುವಿನ ಆಖ್ಯಾತರೂಪಗಳು.

	ಪುರುಷಾರ್ಥಕಸರ್ವನಾಮಗಳು.	ವರ್ತಮಾನಕಾಲದ ಸಂಪೂರ್ಣರೂಪಗಳು.	ವರ್ತಮಾನಕಾಲದ ಸಂಯುಕ್ತರೂಪಗಳು.*	ಭೂತಕಾಲದ ರೂಪಗಳು.	ಭವಿಷ್ಯತ್ಕಾಲದ ಭವಿಷ್ಯದ್ರೂಪಗಳು.	ಭವಿಷ್ಯತ್ಕಾಲದ ಭಾವಿರೂಪಗಳು.	ವಿಧಿರೂಪಗಳು.	ನಿಷೇಧರೂಪಗಳು.
ಏಕವಚನ.	ನಾನು	ಇರುತ್ತೇನೆ	ಇದ್ಧೇನೆ	ಇದ್ದೆನು	ಇರುವೆನು	ಇದ್ದೇನು	ಇರುವೆ	ಇರೆನು
	ನೀನು	ಇರುತ್ತೀ	ಇದ್ಧೀ	ಇದ್ದಿ	ಇರುವಿ,-ವೆ	ಇದ್ದೀಯೆ	ಇರು	ಇರೆ
	ಅವನು	ಇರುತ್ತಾನೆ	ಇದ್ಧಾನೆ	ಇದ್ದನು	ಇರುವನು	ಇದ್ದಾನು	ಇರಲಿ	ಇರನು
	ಅವಳು	ಇರುತ್ತಾಳೆ	ಇದ್ಧಾಳೆ	ಇದ್ದಳು	ಇರುವಳು	ಇದ್ದಾಳು		ಇರಳು
	ಅದು	ಇರುತ್ತದೆ	ಇಧೆ, ಇದೆ, ಅದೆ	ಇತ್ತು	ಇರುವದು	ಇದ್ದೀತು		ಇರದು
ಬಹುವಚನ.	ನಾವು	ಇರುತ್ತೇವೆ	ಇದ್ಧೇವೆ	ಇದ್ದೆವು	ಇರುವೆವು	ಇದ್ದೇವು	ಇರುವಾ / ಇರೋಣ	ಇರೆವು
	ನೀವು	ಇರುತ್ತೀರಿ	ಇದ್ಧೀರಿ	ಇದ್ದಿರಿ	ಇರುವಿರಿ	ಇದ್ದೀರಿ	ಇರಿ, (ಇರ್ರಿ)	ಇರರಿ
	ಅವರು	ಇರುತ್ತಾರೆ	ಇದ್ಧಾರೆ	ಇದ್ದರು	ಇರುವರು	ಇದ್ದಾರು	ಇರಲಿ	ಇರರು
	ಅವು	ಇರುತ್ತವೆ	ಇದ್ಧಾವೆ, ಇವೆ, ಅವೆ	ಇದ್ದವು	ಇರುವವು	ಇದ್ದಾವು		ಇರವು

*ಈ ಸಂಯುಕ್ತರೂಪಗಳನ್ನು ಕೆಲವರು ಇದ್ದೇನೆ, ಇದ್ದೀ, ಇದ್ದಾನೆ, ಇದ್ದಾಳೆ, ಇದೆ; ಇದ್ದೇವೆ, ಇದ್ದೀರಿ, ಇದ್ದಾರೆ, ಇದ್ದಾವೆ ಎಂದೂ ಬರೆಯುವದುಂಟು.

ಊನಕ್ರಿಯಾಪದಗಳು (Defective Verbs).

87. ಪೂರ್ಣ ಕ್ರಿಯಾಮಾಲೆ ಇಲ್ಲದ ಕ್ರಿಯಾಪದಗಳು ಯಾವವು?

ಕೆಲವು ಕ್ರಿಯಾಪದಗಳಿಗೆ ಧಾತು ಇಲ್ಲ, ಸಂಪೂರ್ಣವಾದ ಕ್ರಿಯಾಮಾಲೆ ಇಲ್ಲ. ಆದದರಿಂದ ಅವುಗಳಿಗೆ "ಊನಕ್ರಿಯಾಪದ"ಗಳೆಂಬ ಹೆಸರು ತಕ್ಕದ್ದು. ಅವುಗಳಲ್ಲಿ ಕೆಲವಕ್ಕೆ ಆಖ್ಯಾತ ಪ್ರತ್ಯಯವಿಲ್ಲದ ಕಾರಣ "ಅವ್ಯಯಕ್ರಿಯಾಪದ"ಗಳೆಂದು ವರ್ತಿಸುವವು. ಅವು ಯಾವವಂದರೆ—

ಬೇಕು, ಬೇಡ, ಬೇಡಿರಿ; ಉಂಟು, ಉಳ್ಳ.
ಬಹುದು, ಬಾರದು, ಬಾರದ, ಬಾರದೆ; ಅಹುದು=ಹೌದು.
ಅಲ್ಲ, ಅಲ್ಲದ, ಅಲ್ಲದೆ; ಇಲ್ಲ, ಇಲ್ಲದ, ಇಲ್ಲದೆ.
ಸಾಕು, ಸಾಲದು, ಸಾಲದ, ಸಾಲದೆ, ತಕ್ಕ; ಇಕೊ, ಇಗೋ= ಇಗೊಳ್ಳಿರಿ; ಅಕೊ, ಅಗೋ=ಅಗೊಳ್ಳಿರಿ.

ಊನಕ್ರಿಯಾಪದಗಳ ಪಟ್ಟಿ.

ಏಕವಚನ.	ಉತ್ತಮ . . .	ಆಪೆನು	ಆರೆನು	ಒಲ್ಲೆನು	ಬಲ್ಲೆನು
	ಮಧ್ಯಮ . . .	ಆಪಿ, ಆಪೆ	ಆರಿ, ಆರೆ	ಒಲ್ಲಿ, ಒಲ್ಲೆ	ಬಲ್ಲಿ, ಬಲ್ಲೆ
	ಪ್ರಥಮ. ಪು . .	ಆಪನು	ಆರನು	ಒಲ್ಲನು	ಬಲ್ಲನು
	ಸ್ತ್ರೀ.	ಆಪಳು	ಆರಳು	ಒಲ್ಲಳು	ಬಲ್ಲಳು
	ನಪುಂ.	ಆಪದು	ಆರದು	ಒಲ್ಲದು	ಬಲ್ಲದು
ಬಹುವಚನ.	ಉತ್ತಮ . . .	ಆಪೆವು	ಆರೆವು	ಒಲ್ಲೆವು	ಬಲ್ಲೆವು
	ಮಧ್ಯಮ . . .	ಆಪಿರಿ	ಆರರಿ	ಒಲ್ಲಿರಿ	ಬಲ್ಲಿರಿ
	ಪ್ರಥಮ. ಪು. ಸ್ತ್ರೀ.	ಆಪರು	ಆರರು	ಒಲ್ಲರು	ಬಲ್ಲರು
	ನಪು.	ಆಪವು	ಆರವು	ಒಲ್ಲವು	ಬಲ್ಲವು
ನ್ಯೂನರೂಪ. .		ಆಪದೆ	ಆರದೆ	ಒಲ್ಲದೆ	
ಕೃದ್ವಾಚಿ. . .		ಆಪ, ಆಪುವ	ಆರದ	ಒಲ್ಲದ	ಬಲ್ಲ
ಕ್ರಿಯಾನಾಮ.		ಆಪದ್ದು	ಆರದ್ದು	ಒಲ್ಲದ್ದು	ಬಲ್ಲದ್ದು

ಸಂಯುಕ್ತಕ್ರಿಯಾಪದಗಳು (Compound verbal forms).

88. ಇನ್ನೊಂದು ವಿಧದ ಕ್ರಿಯಾಪದಗಳು ಯಾವವು?

"ಸಂಯುಕ್ತಕ್ರಿಯಾಪದಗಳು" ಇವುಗಳ ವಿವರವು ಹ್ಯಾಗಂದರೆ—

1. ಧಾತುವಿನ ವರ್ತಮಾನನ್ಯೂನರೂಪಗಳಿಗೆ ಇರು ಧಾತುವಿನ ರೂಪಗಳನ್ನು ಕೂಡಿಸುವದರಿಂದ ಕ್ರಿಯೆಯು ಸಂಪೂರ್ಣವಾಗಿ ನಡೆಯಲಿಲ್ಲವೆಂಬ ಅರ್ಥ ಕೊಡುವ ಅಪೂರ್ಣರೂಪಗಳಾಗುವವು. ಉಧಾ:

ವರ್ತಮಾನ:	ಭೂತ:	ಭವಿಷ್ಯದ್:
ಮಾಡುತ್ತಿದ್ಧೇನೆ	ಮಾಡುತ್ತಿದ್ದೆನು	ಮಾಡುತ್ತಿರುವೆನು

(ಹೀಗೆಯೇ ಉಳಿದ ರೂಪಗಳನ್ನು ಊಹಿಸಬಹುದು.)

2. ಧಾತುವಿನ ಭೂತನ್ಯೂನರೂಪಗಳಿಗೆ ಮೇಲೆ ಹೇಳಿದ ಇರು ಧಾತುವಿನ ರೂಪಗಳನ್ನು ಕೂಡಿಸಲು ಕ್ರಿಯೆ ಸಂಪೂರ್ಣವಾಯಿತೆಂಬ ಅರ್ಥ ಕೊಡುವ ಪೂರ್ಣರೂಪಗಳಾಗುವವು. ಉದಾ:

ವರ್ತಮಾನ:	ಭೂತ:	ಭವಿಷ್ಯದ್:
ಮಾಡಿದ್ಧೇನೆ	ಮಾಡಿದ್ದೆನು	ಮಾಡಿರುವೆನು.

(ಹೀಗೆಯೇ ಉಳಿದ ರೂಪಗಳನ್ನು ಊಹಿಸಬಹುದು.)

3. ಧಾತುವಿನ ಭಾವರೂಪವಾಗಿರುವ "ಮಾಡಲು" ಎಂಬದಕ್ಕೆ "ಪಡು" ಧಾತುವನ್ನು ಕೂಡಿಸಿ ಅದನ್ನೇ ಧಾತುವೆಂದು ನೆನಸಿ ಆದರ ಮೇಲೆ ಎಲ್ಲಾ ವಿಧವಾದ ಕ್ರಿಯಾಪ್ರತ್ಯಯಗಳನ್ನು ಹತ್ತಿಸಲಾಗಿ "ಕರ್ಮಣ್ಯರ್ಥಕ" ಸಂಯುಕ್ತಕ್ರಿಯಾಪದಗಳಾಗುವವು. ಈ ಕ್ರಿಯೆಯನ್ನು ಪ್ರಯೋಗಿಸುವಾಗ ಕರ್ಮಪದವನ್ನು ಕರ್ತೃಪದದಂತೆ ಪ್ರಥಮಾವಿಭಕ್ತಿಯಲ್ಲಿ ಪ್ರಯೋಗಿಸುವರು. ಉದಾ:

ರಾಮನು ಹುಲಿಯನ್ನು ಕೊಂದನು.

ಕರ್ಮಣ್ಯರ್ಥಕ್ಕೆ: ಹುಲಿಯು ರಾಮನಿಂದ ಕೊಲ್ಲಲ್ಪಟ್ಟಿತು.

5. ಅವ್ಯಯಪ್ರಕರಣ. Indeclinables.

89. ಅವ್ಯಯಗಳು ಯಾವವು?

ಕಾರಕವಿಭಕ್ತಿರೂಪಮಾಲೆಗೂ ಕ್ರಿಯಾಮಾಲೆಗೂ ಹೊರಗಾದ ಶಬ್ದಗಳೆಲ್ಲಾ "ಅವ್ಯಯ"ಗಳೆಂದೆನ್ನಿಸಿಕೊಳ್ಳುವವು. ಅವುಗಳೊಳಗೆ ಕೆಲವಕ್ಕೆ ವಿಕಲ್ಪವಾಗಿ ಬೇರೆಬೇರೆ ಅವ್ಯಯಪ್ರತ್ಯಯಗಳು ಹತ್ತುವವು, ಬೇರೆ ಕೆಲವು ವಿಕಲ್ಪದಿಂದ ವಿಭಕ್ತಿರೂಪಗಳನ್ನು ಸಹ ಹೊಂದುವವು; ಆದಾಗ್ಯೂ ಆ ವಿಭಕ್ತಿರೂಪಗಳು ಕ್ರಮವಾದ ವಿಭಕ್ತಿರೂಪಮಾಲೆಗೆ ಮುಟ್ಟದ ಕಾರಣ, ಅವನ್ನು ಧರಿಸುವ ಶಬ್ದಗಳು ತಮ್ಮ ಅವ್ಯಯೀಭಾವ ಕಳೆಯವು.

90. ಅವ್ಯಯಗಳು ಎಷ್ಟು ವಿಧವು?

ಅವ್ಯಯಗಳ ಪ್ರಯೋಗ ನೋಡಿದರೆ, ಅವುಗಳಲ್ಲಿ "ಕ್ರಿಯಾವಿಶೇಷಣಾವ್ಯಯ" (Adverb), "ಉಪಸರ್ಗಗಳೆಂಬ ವಿಭಕ್ತ್ಯರ್ಥಕಾವ್ಯಯ" (Postposition), "ಸಮುಚ್ಚಾಯಕಾವ್ಯಯ" (Conjunction), "ಅನುಕರಣಶಬ್ದ" (Imitative sound), "ಭಾವಬೋಧಕನಿಪಾತ" (Interjection) ಎಂಬ ಐದು ವಿಶೇಷಗಳನ್ನು ಮಾಡತಕ್ಕದ್ದು. ಆದರೆ ಅವುಗಳ ರೂಪ ನೋಡಿದರೆ, ಅವು ಭಾಗವಾಗಿ ಸ್ವಂತ ವಾಚ್ಯಾರ್ಥವುಳ್ಳ ನಿಜ ಅವ್ಯಯಗಳೆಂದೂ, ಭಾಗವಾಗಿ ಸಮುಚ್ಚಾಯಕಾರ್ಥದಲ್ಲಿ ಪ್ರಯೋಗಿಸುವ ಸಂಕ್ಷಿಪ್ತ ಉಪವಾಕ್ಯರೂಪಗಳೆಂದೂ, ಭಾಗವಾಗಿ ತಮ್ಮಲ್ಲಿ ತಾವೇ ಸ್ವಂತ ವಾಚ್ಯಾರ್ಥವಿಲ್ಲದೆ ಸಂಧಾನದಿಂದ ಮಾತ್ರ ತಮ್ಮ ದ್ಯೋತಕಾರ್ಥ ಹೊಂದುವ ನಿಪಾತಗಳೆಂದೂ ಕಾಣಿಸುತ್ತವೆ.

ಕ್ರಿಯಾವಿಶೇಷಣಾವ್ಯಯಗಳು (Adverbs).

91. ಕ್ರಿಯಾವಿಶೇಷಣಾವ್ಯಯಗಳು ಯಾವವು?

ಕ್ರಿಯಾಪದಗಳು ಹೇಳುವ ಕ್ರಿಯೆಗಳು ಸಂಭವಿಸಿದ ಸ್ಥಾನ, ಕಾಲ, ರೀತಿಗಳನ್ನು ವಿಶೇಷಿಸಿ ಹೇಳುವ ಅವ್ಯಯಗಳು "ಕ್ರಿಯಾವಿಶೇಷಣಾವ್ಯಯ"ಗಳೆಂದು ವರ್ತಿಸುವವು. ಅವು "ಸ್ಥಾನ

ವಾಚಕ, ಕಾಲವಾಚಕ, ರೀತಿವಾಚಕ" ಎಂಬ ಮೂರು ವಿಧವು; ಹ್ಯಾಗಂದರೆ—

1. ಸ್ಥಾನವಾಚಕಗಳು (Adverbs of Place).

"ಎಲ್ಲಿ, ಇಲ್ಲಿ, ಅಲ್ಲಿ, ಎತ್ತ=ಎತ್ತಲು=ಎತ್ತಲಾಗಿ, ಇತ್ತ, ಅತ್ತ, ಈಚೆ=ಈಚೇಲಿ, ಆಚೆ=ಆಚೇಲಿ, ಸುತ್ತ=ಸುತ್ತಲು=ಸುತ್ತಮುತ್ತ, ಮೇಲೆ, ಕೆಳಗೆ, ಒಳಗೆ, ಹೊರಗೆ, ಮುಂದೆ=ಮುಂದು=ಮುಂತು=ಮುಂಚು, ಹಿಂದೆ=ಹಿಂದು=ಹಿಂತು=ಹಿಂಚು, ಸಮಕ್ಷ"—ಇತ್ಯಾದಿ.

2. ಕಾಲವಾಚಕಗಳು (Adverbs of Time).

"ಎಂದು, ಇಂದು, ಅಂದು, ಯಾವಾಗ=ಯಾವಾಗಲು, ಈಗ=ಈಗಲು, ಆಗ=ಆಗಲು, ಆಗ್ಯೆ, ಆವಾಗ=ಆವಾಗಲು, ಇನ್ನು, ಈಹೊತ್ತು, ನಿನ್ನೆ, ಮೊನ್ನೆ, ನಾಳೆ, ನಾಡದು, ಬೆಳಿಗ್ಯೆ, ಹೊತ್ತಾರೆ, ಬೆಳಗಾತ, ಮುಂಜಾನೆ, ಸಂಜೆ, ಬೈಗು, ಮುಂಚೆ=ಮುಂಚಿಗೆ=ಮುಂಚಿತಾಗಿ=ಮುಂದಾಗಿ, ಮೊದಲು, ಚೂಣೆ, ಮೇಲೆ, ತರುವಾಯು, ಅನಂತರ, ತತ್ಕಾಲ, ತಕ್ಷಣ, ಸಾಂಪ್ರತ, ಸರ್ವದಾ, ನಿತ್ಯ, ಅನುದಿನ, ದಿನಾಲು, ಸದ್ಯಾ"—ಇತ್ಯಾದಿ.

3. ರೀತಿವಾಚಕಗಳು (Adverbs of Mode).

"ಹ್ಯಾಗೆ=ಹ್ಯಾಗೂ, ಹೀಗೆ=ಹೀಗೂ, ಹಾಗೆ=ಹಾಗೂ, ಎಂತು, ಇಂತು, ಅಂತು, ಅಂತಿಂತು, ಓಲು, ಸರಾಸರಿ, ಮಾತ್ರ, ಪುಕ್ಕಸಟೆ=ಪುಕ್ಸಾಟೆ=ಪುಕ್ಕಟೆ, ಆಕಸ್ಮಿಕ, ವೃಥಾ, ಬೇಗ=ಬೇಗನೆ, ಮೆಲ್ಲಗೆ=ಮೆಲ್ಲನೆ, ಸುಮ್ಮಗೆ=ಸುಮ್ಮನೆ, ನೆಟ್ಟಗೆ=ನೆಟ್ಟನೆ, ತಣ್ಣಗೆ=ತಣ್ಣನೆ, ಭಗ್ಗನೆ, ಜರ್ರನೆ"—ಇತ್ಯಾದಿ.

ಮತ್ತು ಸಂಸ್ಕೃತ ಅಥವಾ ಕನ್ನಡ ನಾಮವಾಚಕ ಗುಣವಾಚಕಗಳಿಗೆ "ಆಗಿ" ಎಂಬ ಭೂತನ್ಯೂನರೂಪವನ್ನಾ

ಗಲಿ "ಗೆ" ಪ್ರತ್ಯಯವನ್ನಾಗಲಿ ಕೂಡಿಸುವದರಿಂದ ಹೊಸ ರೀತಿವಾಚಕಗಳನ್ನು ಮಾಡುತ್ತಾರೆ. ಉದಾ: ಪ್ರೀತಿ, ಪ್ರೀತಿಯಾಗಿ, ಗುಣ, ಗುಣವಾಗಿ; ಕೆಂಪು, ಕೆಂಪಾಗಿ; ಚಿಕ್ಕ, ಚಿಕ್ಕದಾಗಿ; ಕೆಂಪಗೆ, ಬೆಳ್ಳಗೆ, ಕಪ್ಪಗೆ.

ಇವುಗಳೊಳಗೆ ಸ್ಥಾನಕಾಲವಾಚಕಗಳಿಗೆ ಬರುವ ವಿಭಕ್ತಿರೂಪಗಳು ಹಿಂದೆ(65ನೇ ಉತ್ತರದಲ್ಲಿ) ತೋರಿಸಿ ಅವೆ.

ಉಪಸರ್ಗಗಳು (Postpositions).

92. ಉಪಸರ್ಗಗಳು ಯಾವವು?

ವಿಭಕ್ತಿ ಪ್ರತ್ಯಯಗಳ ಸ್ಥಳದಲ್ಲಿ ನಾಮಪದಗಳ ಮೇಲೆ ಹತ್ತುವ ಶಬ್ದಗಳು ವಿಭಕ್ತ್ಯರ್ಥಕಾವ್ಯಯಗಳೆಂದೂ, ಉಪಸರ್ಗಗಳೆಂದೂ ವರ್ತಿಸುವವು. ಅವು "ಪೂರ್ಣ ಉಪಸರ್ಗ, ಅರೆ ಉಪಸರ್ಗ" ಗಳೆಂಬ ಎರಡು ವಿಧವು. ಹ್ಯಾಗಂದರೆ: ಉಪಸರ್ಗಪ್ರಯೋಗದಲ್ಲಿ ಹೊರ್ತು ಬೇರೆ ಪ್ರಯೋಗದಲ್ಲಿ ವ್ಯವಹರಿಸದ ಅವ್ಯಯಗಳೇ "ಪೂರ್ಣ ಉಪಸರ್ಗ"ಗಳೆಂದೂ, ಉಪಸರ್ಗಗಳಾಗಿ ಪ್ರಯೋಗಿಸುವ ನಾಮಪದಗಳೇ "ಅರೆ ಉಪಸರ್ಗ"ಗಳೆಂದೂ ತಿಳಿಯತಕ್ಕದ್ದು. ಅವು ಯಾವವಂದರೆ: ಉದಾ:

ಪೂರ್ಣ ಉಪಸರ್ಗಗಳು—"ಓಸ್ಕರ=ಓಸುಗ, ತುಸುಕು=ತುಸುಕಾಗಿ, ಸಲುವಾಗಿ, ಹತ್ತರ, ತನಕ, ಅನಕ, ಅಂತನಕ, ವರೆಗೆ, ವರಿಗೆ, ಮಟ್ಟಿಗೆ, ಹಾಗೆ, ಅಂತೆ, ಓಲು, ಬಗ್ಗೆ, ಅಪ್ಪಂದ, ಸಂಗಡ=ಸಂಗಾತ, ಒಡನೆ, ಒಂದಿಗೆ, ಕೂಡ=ಕೂಡೆ, ಒಡಗೂಡಿ, ಹೊರ್ತು, ಕುರಿತು"—ಇತ್ಯಾದಿ.

ಅರೆ ಉಪಸರ್ಗಗಳು—"ಬಳಿಕ, ವಿಷಯ=ವಿಷಯಕ್ಕೆ, ಕಾರಣ=ಕಾರಣದಿಂದ, ನಿಮಿತ್ತ, ಮೂಲ, ಉದ್ದಿಶ್ಯ, ಪ್ರಕಾರ, ರೀತಿ=ರೀತಿಯಿಂದ, ಮೇರೆ=ಮೇರೆಗೆ=ಮೇರಿಗೆ, ಪರಿ=ಪರ್ಯಂತ, ಪರ್ಯಂತಕ್ಕೆ, ಪರ್ಯಂತದಲ್ಲಿ, ತರುವಾಯ=ತರುವಾಯದಲ್ಲಿ, ಕೈಯಿಂದ, ಮುಖದಿಂದ, ಮುಖಾಂತರ, ದೆಸೆಯಿಂದ, ಕಡೆಯಿಂದ, ಕಡೆಗೆ, ಕಡೆಯಲ್ಲಿ, ಬಳಿಯ, ಬಳಿಯಿಂದ, ಬಳಿಗೆ, ಬಳಿಯಲ್ಲಿ, ಹತ್ತೀಲಿ, ಬದೀಲಿ, ಓಪಾದಿಯಲ್ಲಿ"—ಇತ್ಯಾದಿ.

93. ಉಪಸರ್ಗಗಳ ಪ್ರಯೋಗವು ಹ್ಯಾಗೆ?

"ಓಸ್ಕರ" ಎಂಬದು ನಾಮಪದಗಳ ಚತುರ್ಥೀವಿಭಕ್ತಿಗೆ ಪರವಾಗುವದು; ಕಡಿಮೆ ಉಪಸರ್ಗಗಳೆಲ್ಲಾ ಸಂಬಂಧವಿಭಕ್ತಿಗೆ ಮುಂದಾಗುವವು; ಕೆಲವು ವಿಕಲ್ಪವಾಗಿ ನಾಮಪದಗಳ ಪ್ರಕೃತಿಗೆ ಮುಂದಾಗುವವು. ಇದಲ್ಲದೆ ಅವುಗಳಲ್ಲಿ ಕೆಲವು ಕೃದ್ವಾಚಿಗಳಿಗೂ ಮತ್ತು ಕೆಲವು ಸರ್ವನಾಮವಿಶೇಷಣಗಳಿಗೂ ಪರವಾಗುವವು.

(ಇದರ ವಿವರ ಮುಂದೆ 139ನೇ ಉತ್ತರದಲ್ಲಿ ನೋಡು.)

ಸಮುಚ್ಚಾಯಕಾವ್ಯಯುಗಳು (Conjunctions).

94. ಸಮುಚ್ಚಾಯಕಾವ್ಯಗಳು ಯಾವವು?

ಎರಡು ಪದಗಳನ್ನಾಗಲಿ, ಎರಡು ವಾಕ್ಯಗಳನ್ನಾಗಲಿ ಒಂದಕ್ಕೊಂದನ್ನು ಕೂಡಿಸುವದಕ್ಕೆ ಪ್ರಯೋಗಿಸುವ ಅವ್ಯಯುಗಳು "ಸಮುಚ್ಚಾಯಕಾವ್ಯಯು"ಗಳೆಂದು ವ್ಯವಹರಿಸುವವು. ಅವು ಯಾವವಂದರೆ:

1. ಸಮುಚ್ಚಯಾರ್ಥಕ "ಊ=ಉ"ಕಾರದ ನಿಪಾತವು.
2. "ಮತ್ತು, ಹಾಂಗೂ, ಸುದಾ, ಸಹ, ಅಥವಾ ಪರಂತು" ಮೊದಲಾದ ಸಮುಚ್ಚಯಾರ್ಥಕ ಶಬ್ದಗಳು.
3. ಸಮುಚ್ಚಯಾರ್ಥದಲ್ಲಿ ಪ್ರಯೋಗಿಸುವ "ಆಗಲಿ, ಅಲ್ಲದೆ, ಇಲ್ಲದೆ, ಇದಲ್ಲದೆ, ಇಲ್ಲವೆ" ಮುಂತಾದ ಕ್ರಿಯಾಪದ ರೂಪಗಳು.
4. ಸಮುಚ್ಚಾಯಕಾವ್ಯಯುಗಳಾಗಿ ಪ್ರಯೋಗಿಸುವ "ಆದರೆ, ಆದಾಗ್ಯೂ, ಅಂದರೆ" ಇತ್ಯಾದಿ ಸಂಕ್ಷಿಪ್ತ ಉಪವಾಕ್ಯದ ಕೊನೆಯಲ್ಲಿ ಸೇರುವ ಕ್ರಿಯಾರೂಪಗಳು.

(ಇವುಗಳ ಪ್ರಯೋಗದ ವಿವರ ಮುಂದೆ 164ನೇ ಉತ್ತರದಲ್ಲಿ ನೋಡು.)

ಅನುಕರಣ ಶಬ್ದಗಳು (Imitative sounds).

95. ಅನುಕರಣ ಅವ್ಯಯಗಳು ಯಾವವು?

ಪಶುಮೃಗಾದಿಗಳ ಕೂಗುಗಳನ್ನೂ, ಘಂಟೆ ತುಬಾಕಿ ಮುಂತಾದ ಸಾಮಾನುಗಳ ನಾದಗಳನ್ನೂ, ಬೇರೆಬೇರೆ ಸಪ್ಪಳಗಳನ್ನೂ ಅನುಕರಿಸುವದಕ್ಕೆ ಕನ್ನಡ ಜನರು ಬಹಳವಾಗಿ ಪ್ರಯೋಗಿಸುವ ಅವ್ಯಯಶಬ್ದಗಳು "ಅನುಕರಣ"ಶಬ್ದಗಳೆಂದು ವ್ಯವಹರಿಸುವವು.

ಉದಾ:

ಕೂಗುಗಳು—ಅಂಬಾ, ಒಮ್ಮಿ, ಮ್ಯಾ, ಮ್ಯಾಂವು, ಕೋಕೋ.

ನಾದಗಳು— ಘಣಘಣನೆ, ಭೌಂಭೌಂ, ಕಿಣಿಕಿಣಿ.

ಸಪ್ಪಳಗಳು—ಪರಪರನೆ, ಲೊಟಲೊಟನೆ, ಧಡಧಡಲ್ಲನೆ, ಚರಚರನೆ, ಘುಲ್ಲಘುಲ್ಲನೆ.

ಸಂಬುದ್ಧ ಭಾವಬೋಧಕ ಅವ್ಯಯಗಳು (Interjections).

96. ಈ ವಿಧದ ಅವ್ಯಯಗಳು ಯಾವವು?

ಬೇರೆಯವರನ್ನು ಕರೆಯುವದರಲ್ಲಿ ಪ್ರಯೋಗಿಸುವ ಅವ್ಯಯ ಶಬ್ದಗಳು "ಸಂಬುದ್ಧಾವ್ಯಯ"ಗಳೆಂದೆನ್ನಿಸಿಕೊಳ್ಳುವವು.

ಉದಾ: ಎಲಾ, ಎಲೇ, ಅಣಾ, ಎನೇ, ಹೋ, ಓ.

ಮನಸ್ಸಿನ ಭಾವಗಳನ್ನು ಉಚ್ಚರಿಸುವದಕ್ಕೆ ಪ್ರಯೋಗಿಸುವ ಅವ್ಯಯಶಬ್ದಗಳು "ಭಾವಬೋಧಕಾವ್ಯಯ"ಗಳೆಂದು ವರ್ತಿಸುವವು.

ವ್ಯಾಕುಲ—ಅಯ್ಯೋ, ಅಯ್ಯಯ್ಯೋ, ಅಹಹ, ಅಕಟ, ಓಯೆನೆ, ಕುಯ್ಯೋ, ಮರ್ರೊ.

ಸಂಭ್ರಮ—ಅಃ, ಅಬ್ಬಾ, ಅಮಮ, ಅಲಲಾ, ಓಹೋಹೋ, ಅಹಹ.

ಮೆಚ್ಚಿಕೆ—ಶಹಬಾಸ, ಐಶಬಾಸ, ಭಲಾ, ಅಝಾ, ಅರೆಜಾಣಾ, ಭಾಪುರೆ, ಭಲರೆ.

ಹೇಸಿಕೆ—ಚೀ, ಛೀಛೀ, ಇಸಿ, ಇಸಿಸಿ, ಅಖ್, ಧೂತ್, ಉಹುಹು, ಉಹೂಹು.

6. ಶಬ್ದರೂಪಭೇದಗಳು. Distinctions of Words according to their Form.

97. ರೂಪಭೇದದಿಂದ ಶಬ್ದಗಳು ಎಷ್ಟು ವಿಧವು?

"ಸಿದ್ಧಶಬ್ದ" (Primitive word), "ವ್ಯುತ್ಪನ್ನಶಬ್ದ" (Derivative word), "ಸಮಾಸಶಬ್ದ" (Compound word) ಎಂಬೀ ಮೂರು ವಿಧವು. ಹ್ಯಾಗಂದರೆ: ಎರಡನೆ ಶಬ್ದದಿಂದ ಹುಟ್ಟದೆ ತಮ್ಮಲ್ಲಿ ತಾವೇ ಸಿದ್ಧವಾದ ಶಬ್ದಗಳು "ಸಿದ್ಧಶಬ್ದ"ಗಳೆಂದು ವರ್ತಿಸುವವು. ಆದರೆ ಸಿದ್ಧಶಬ್ದಗಳ ಅಂತಾಕ್ಷರಕ್ಕೆ ಬೇರೆಬೇರೆ ಪ್ರತ್ಯಯಗಳನ್ನು ಹತ್ತಿಸಿದ್ದರಿಂದ ಹುಟ್ಟಿದ ಶಬ್ದಗಳು "ವ್ಯುತ್ಪನ್ನಶಬ್ದ"ಗಳೆಂದು ವ್ಯವಹರಿಸುವವು. ಮತ್ತು ಎರಡು ಭಿನ್ನಪದಗಳನ್ನು ಒಂದಕ್ಕೊಂದು ಸೇರಿಸಿ ಏಕ ಅರ್ಥವುಳ್ಳ ಏಕಪದ ಮಾಡಿದ್ದರಿಂದ ಹುಟ್ಟಿದ ಶಬ್ದಗಳು "ಸಮಾಸಶಬ್ದ"ಗಳೆಂದು ವ್ಯವಹರಿಸುವವು.

ವ್ಯುತ್ಪನ್ನಶಬ್ದಗಳು (Derivatives).

98. ವ್ಯುತ್ಪನ್ನಶಬ್ದಗಳು ಎಷ್ಟು ವಿಧವು?

"ಕೃದಂತ" (Verbal Derivatives), "ತದ್ಧಿತಾಂತ" (Other Derivatives) ಎಂಬೀ ಎರಡು ವಿಧವು.

99. ಕೃದಂತಗಳು ಯಾವವು?

"ಕೃತ್" ಎಂಬ ಕ್ರಿಯಾಪದಗಳ ಮೇಲೆ ಕೃತ್ಪ್ರತ್ಯಯಗಳನ್ನು ಹತ್ತಿಸುವದರಿಂದ ಹುಟ್ಟುವ ಶಬ್ದಗಳೆಲ್ಲಾ "ಕೃದಂತ"ಗಳೆಂದು ವರ್ತಿಸುವವು. ಇವುಗಳ ವಿವರ ಹ್ಯಾಗಂದರೆ—

1. ಧಾತುಗಳ ಮೇಲೆ "ಕುಳಿ, ಇ, ಇಗ, ಅ, ಉಕ, ಪುರುಕಿ" ಎಂಬ ಪ್ರತ್ಯಯಗಳು ಸೇರುವದರಿಂದ ಕರ್ತೃಸೂಚಕ ನಾಮಪದಗಳಾಗುತ್ತವೆ. ಉದಾ:

"ಕುಳಿ"—ಅಂಜು = ಅಂಜುಕುಳಿ, ಆಡು = ಆಡುಕುಳಿ, ಓಡು = ಓಡುಕುಳಿ.

"ಇ"—ಕೊಲ್ಲು = ಕುಲಿ (=ಕೊಲ್ಲುವವ), ಮೀನುಗುಲಿ, ಆನೆಗುಲಿ.

"ಇಗ"—ಕುಟ್ಟು=ಕುಟಿಗ (=ಕುಟ್ಟುವವ), ಕಲ್ಲುಕುಟಿಗ, ಮರ ಕುಟಿಗ.

"ಅ"—ಒಡ್ಡು=ಒಡ್ಡ, ತುರುಕು=ತುರುಕ, ಕುಂಟು=ಕುಂಟ.

"ಉಕ"—ತಿರಿ=ತಿರುಕ, ಬಡಿ=ಬಡುಕ=(ಬಾಯಿಬಡುಕ).

"ಪುರುಕಿ"—ಸೋಲು=ಸೋತಪುರುಕಿ, ಅಂಜು=ಅಂಜುಪುರುಕಿ.

2. ಧಾತುಗಳ ಮೇಲೆ "ತ, ತೆ, ಇಕೆ, ಟ, ಗೆ, ಇಗೆ, ಮೆ, ಎ, ವಿಕೆ, ಅವು, ವು, ಪು, ಸು, ಪಡಿ, ಣ, ಹ, ಕು, ಹು, ವಿ, ವೆ, ವಣಿಗೆ, ವಳಿತ, ಗುಳು, ಇತ" ಎಂಬ ಪ್ರತ್ಯಯಗಳು ಸೇರುವದರಿಂದ ಕ್ರಿಯಾನಾಮಗಳು ಉಂಟಾಗುತ್ತವೆ.

ಉದಾ:

"ತ"—ಮಣಿ=ಮಣಿತ, ಕುಣಿ=ಕುಣಿತ, ಕಡಿ=ಕಡಿತ.

"ತೆ"—ಅಳೆ=ಅಳತೆ.

"ಟ"—ಓಡು=ಓಟ, ಆಡು=ಆಟ.

"ಇಗೆ"—ನೆಡು=ನೆಡಿಗೆ.

"ಎ"—ಹರಟು=ಹರಟೆ.

"ಅವು"—ತೆರೆ=ತೆರವು.

"ಪು"—ನೆನೆ=ನೆನಪು.

"ಪಡಿ"—ತಿದ್ದು=ತಿದ್ದುಪಡಿ, ಒಣಪಡಿ.

"ಹ"—ವಿಾ=ವಿಾಹ.

"ಹು"—ಉಳಿ=ಉಳಹು.

"ವೆ"—ಬಾಳು=ಬಾಳ್ವೆ.

"ವಳಿತ"—ನಡೆ=ನಡವಳಿತ.

"ಇತ"—ಒಪ್ಪು=ಒಪ್ಪಿತ, ತಪ್ಪು=ತಪ್ಪಿತ, ಅಪ್ಪು=ಅಪ್ಪಿತ.

"ಇಕೆ"—ಬಾಳು=ಬಾಳಿಕೆ, ಕೂಡು=ಕೂಡಿಕೆ.

"ಗೆ"—ಹೊಮಿ=ಹೊಮಿಗೆ.

"ಮೆ"—ಒಲಿ=ಒಲ್ಮೆ=ಒಲುಮೆ.

"ವಿಕೆ"—ತರು=ತರುವಿಕೆ.

"ವು"—ಅರಿ=ಅರಿವು, ತಿಳಿವು.

"ಸು"—ಬೆಳೆ=ಬೆಳಸು.

"ಣ"—ವಿಾ=ವಿಾಣ.

"ಕು"—ಬಿರಿ=ಬಿರಕು, ಹರಕು.

"ವಿ"—ಗೆಲ್ಲು=ಗೆಲ್ಲುವಿ.

"ವಣಿಗೆ"—ಬೆಳೆ=ಬೆಳೆವಣಿಗೆ.

"ಗುಳು"—ಬಯು=ಬಯ್ಗುಳು.

3. ಕೆಲವು ಧಾತುಗಳು ಕ್ರಿಯಾನಾಮದಲ್ಲಿಯೂ, ಧಾತು ರೂಪದಲ್ಲಿಯೂ ಏಕಪ್ರಕಾರವಾಗಿರುತ್ತವೆ. ಉದಾ:

ಕ್ರಿಯಾನಾಮ:	ಧಾತುರೂಪ:
ಬದುಕು.	ಬದುಕು.
ಬಾಳು.	ಬಾಳು.
ಅರಲು.	ಅರಲು.

100. ತದ್ಧಿತಾಂತಗಳು ಯಾವವು?

ಧಾತುಗಳನ್ನು ಕಳದು ಉಳಿದ ಶಬ್ದಗಳ ಮೇಲೆ ತದ್ಧಿತಪ್ರತ್ಯಯಗಳನ್ನು ಹತ್ತಿಸುವದರಿಂದ ಹುಟ್ಟುವ ಶಬ್ದಗಳೆಲ್ಲಾ "ತದ್ಧಿತಾಂತ" ವೆಂದು ವ್ಯವಹರಿಸುವವು. ಆ ತದ್ಧಿತಪ್ರತ್ಯಯಗಳು ಮೂರು ವಿಧವು ಹ್ಯಾಗಂದರೆ:

1. ಭಾವಪ್ರತ್ಯಯಗಳು:—"ತನ, ಪು" ಇವು ಭಾವಾರ್ಥವನ್ನು ಹೇಳುವವು.

ಉದಾ:

"ತನ"—ಧೊರೆತನ, ಕೆಟ್ಟತನ, ಕಳ್ಳತನ, ಜಾಣತನ.
"ಪು"—ಕಪ್ಪು, ಕೆಂಪು, ನುಣ್ಪು, ಹೊಳಪು, ಥಳಪು.

2. ಅನ್ವರ್ಥಪ್ರತ್ಯಯಗಳು ಮನುಷ್ಯರ ಉದ್ಯೋಗಗುಣಾದಿಗಳನ್ನು ಅನುರೂಪಿಸುವವು. ಅವು ಯಾವವಂದರೆ—"ಕಾರ, ಗಾರ, ಆರ, ಇಗ, ವಂತ, ಆಳಿ, ವಣಿಗ, ಅಡಿಗ". ಉದಾ: ಓಲೆಕಾರ, ಬಣ್ಣಗಾರ, ಕುಂಬಾರ, ಗಾಣಿಗ, ಹಣವಂತ, ಮಾತಾಳಿ, ಲಂಚವಣಿಗ, ದೇವಡಿಗ.

3. ಸ್ತ್ರೀಪ್ರತ್ಯಯಗಳು ಪುರುಷವಾಚಕಗಳ ಮೇಲೆ ಬರುವದರಿಂದ ಸ್ತ್ರೀವಾಚಕಗಳು ಆಗುವವು. ಅವು ಯಾವವಂದರೆ—"ಳು, ಇ, ಎ, ತಿ, ಇತಿ, ಗಿತಿ". ಉದಾ: ಮಗ= ಮಗಳು, ಹುಡುಗ=ಹುಡಿಗಿ, ಹಣವಂತ=ಹಣವಂತೆ, ಬೀಗ= ಬೀಗತಿ, ಅರಸ=ಅರಸಿತಿ, ಗಾಣಿಗಿತಿ=ಗಾಣಿಗಿತ್ತಿ.

ಸಮಾಸಶಬ್ದಗಳು (Compound Words).

101. ಶಬ್ದಸಮಾಸ ಅಂದರೇನು?

ಎರಡು ಭಿನ್ನಪದಗಳು ಒಂದಕ್ಕೊಂದು ಸೇರಿಕೊಂಡು ಏಕ ಅರ್ಥವನ್ನು ಹೇಳುವ ಏಕಪದವಾದರೆ, "ಸಮಾಸಪದ"ವೆನ್ನಿಸುವದು. ಈ ಪ್ರಕಾರ ಸಮಾಸವಾದ ಎರಡು ಪದಗಳೊಳಗೆ ಹಿಂದಲದು "ಪೂರ್ವಪದ"ವೆಂದೂ, ಮುಂದಲದು "ಪರಪದ"ವೆಂದೂ ವರ್ತಿಸುವದು.

102. ಸಮಾಸವೆಷ್ಟು ವಿಧವು?

"ಸಂಸ್ಕೃತಸಮಾಸ", "ಕನ್ನಡಸಮಾಸ", "ಅರಿಸಮಾಸ" ಎಂದು ಮೂರು ವಿಧವು. ಇವುಗಳ ವಿವರ ಹ್ಯಾಗಂದರೆ—

I. ಸಂಸ್ಕೃತಸಮಾಸದಲ್ಲಿ "ತತ್ಪುರುಷ, ಕರ್ಮಧಾರಯ, ದ್ವಿಗು, ಬಹುವ್ರೀಹಿ, ದ್ವಂದ್ವ, ಅವ್ಯಯೀಭಾವ"ವೆಂದು ಆರು ವಿಧಗಳುಂಟು.

1. "ತತ್ಪುರುಷ"ಸಮಾಸದಲ್ಲಿ ಪೂರ್ವಪದವು ವಿಭಕ್ತ್ಯರ್ಥಕ ವಿಶೇಷಣವಾಗಿ ಪರಪದಕ್ಕೆ ಅಧೀನವಾಗಿರುತ್ತದೆ. ಉದಾ:

ದ್ವಿ. ತ. ಗ್ರಾಮಂ + ಗತಃ = ಗ್ರಾಮಗತಃ.
ತೃ. ತ. ಮನಸಾ + ನಮಸ್ಕಾರಃ = ಮನೋನಮಸ್ಕಾರಃ.
ಚ. ತ. ಯಕ್ಷಾಯ + ಬಲಿಃ = ಯಕ್ಷಬಲಿಃ.
ಪಂ. ತ. ವ್ಯಾಘ್ರಾತ್ + ಭಯಂ = ವ್ಯಾಘ್ರಭಯಂ.
ಷ. ತ. ವೀರಸೇನಸ್ಯ + ಪುತ್ರಃ = ವೀರಸೇನಪುತ್ರಃ.
ಸ. ತ. ರಣೇ + ವಿಕ್ರಮಃ = ರಣವಿಕ್ರಮಃ.

2. "ಕರ್ಮಧಾರಯ"ಸಮಾಸದಲ್ಲಿ ಪೂರ್ವಪದವು ಪರಪದವನ್ನು ವರ್ಣಿಸುವ ವಿಶೇಷಣ, ಅಥವಾ ಉಪವಿಶೇಷಣವಾಗಿರುತ್ತದೆ. ಉದಾ:

ವಿ. ಪೂ. ಕ. ನೀಲೋತ್ಪಲ, ಅಧಿಕಮಾರುತ.
ವಿ. ಉ. ಕ. ರಾಜಶ್ರೇಷ್ಠ, ಭೂಮಂಡಲ.
ಉಪಮಾನ ಪೂ. ಮೇಘಶ್ಯಾಮ.

ಉಪಮಾನೋತ್ತರ. ಪುರುಷಸಿಂಹ, ನರರಾಕ್ಷಸ.
ಸಂಭಾವನಾಪೂರ್ವ. ಮುಖಪದ್ಮ, ವಿಂಧ್ಯಪರ್ವತ.
ಅವಧಾರಣಾಪೂರ್ವ. ತಪೋನಿಧಿ, ಪರ್ಣಾಹಾರ.

3. "ದ್ವಿಗು"ಸಮಾಸದಲ್ಲಿ ಪೂರ್ವಪದವು ಸಂಖ್ಯಾವಾಚಕ ವಿಶೇಷಣವಾಗಿಯೂ ಪರಪದವು ನಾಮಪದವಾಗಿಯೂ ಇರುತ್ತದೆ. ಉದಾ: ಶತಮುಖ, ದಶಶಿರ, ಅಷ್ಟದಿಕ್ಕು, ಚತುರ್ಯುಗ, ಷಡಂಗ, ಪಂಚಪಲ್ಲವ.

4. "ಬಹುವ್ರೀಹಿ"ಸಮಾಸದಲ್ಲಿ ಎರಡು ಅಥವಾ ಹೆಚ್ಚು ಪದಗಳು ಕೂಡಿಸಲ್ಪಟ್ಟು "ಉಳ್ಳ" ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಡುತ್ತವೆ. ಉದಾ:
ದ್ವಿಪದ ಬ. ಪ್ರಾಪ್ತಾನಂದ, ಮಹಾಬಲ.
ಬಹುಪದ ಬ. ದಿವ್ಯಸುಂದರಶರೀರ.
ಸಃಪೂರ್ವಪದ ಬ. ಸಕುಟುಂಬ, ಸಕಲತ್ರ.
ವ್ಯತೀಹಾರ ಬ. ಕೇಶಾಕೇಶೀ, ಖಡ್ಗಾಖಡ್ಗೀ.

5. "ದ್ವಂದ್ವ"ಸಮಾಸದಲ್ಲಿ ಸಮಾನಾರ್ಥಕವಾದ ಎರಡು ಅಥವಾ ಹೆಚ್ಚು ಪದಗಳು ಕೂಡಿ ಪರಪದಾಂತದಲ್ಲಿ ಬಹು ವಚನ ಪ್ರತ್ಯಯ ಸೇರಿ ಇರುತ್ತದೆ. ಉದಾ:
ದ್ವಿಪದೇತರದ್ವಂ. ರಾಮಲಕ್ಷ್ಮಣರು, ಮಾತಾಪಿತೃಗಳು.
ಬಹುಪದೇತರದ್ವಂ. ರಾಮರಾವಣವಾಲಿಸುಗ್ರೀವರು.

6. "ಅವ್ಯಯೀಭಾವ"ಸಮಾಸದಲ್ಲಿ ಪೂರ್ವ ಅಥವಾ ಪರ ಪದವು ಅವ್ಯಯವೇ ಆಗಿರುತ್ತದೆ. ಉದಾ:
ಅವ್ಯಯಪೂರ್ವ. ಪ್ರತ್ಯಕ್ಷ, ನಿರಂತರ.
ನಾಮಪೂರ್ವ. ವರ್ಷಂಪ್ರತಿ, ದಿನಂಪ್ರತಿ.

II. ಕನ್ನಡಶಬ್ದ ಸಮಾಸದಲ್ಲಿ ಮೇಲೆ ಹೇಳಿದ ಆರು ವಿಧಗಳಲ್ಲದೆ "ಗಮಕಸಮಾಸ, ಕ್ರಿಯಾಸಮಾಸ, ವೀಪ್ಸಾಸಮಾಸ"ಗಳೆಂದು ಮೂರು ಭೇದಗಳುಂಟು. ಇವುಗಳ ವಿವರ ಹ್ಯಾಗಂದರೆ—

1. ತತ್ಪುರುಷಸಮಾಸ—ತೇರುಮರ, ಹುಲಿಯುಳ್ಳು, ಮರಗೊಂಬು, ಕೆಲಸಜಾಣ.
2. ಕರ್ಮಧಾರಯಸಮಾಸ—ಕರೀಕುದುರೆ, ಕೆಂದಾವರೆ, ಬೆಳ್ದಾವರೆ.
3. ದ್ವಿಗುಸಮಾಸ— ಆರುಕೈಗಳು, ಮೂರುತಿಂಗಳು, ನಾಲ್ಕುಕಾಲು, ಹತ್ತುಬೆರಳು.
4. ಬಹುವ್ರೀಹಿ—ಕೆಂಗೂದಲನು, ಎಸಳುಗಣ್ಣನು, ಹೊಸಮನೆಯನು, ಮುಕ್ಕಣ್ಣನು, ಜುಟ್ಟಾಜುಟ್ಟೀ, ಕೋಲಾಕೋಲೀ.
5. ದ್ವಂದ್ವ—ಆನೆಕುದುರೆಗಳು, ದನಕರುಕುರಿಮೇಕೆಗಳು.
6. ಅವ್ಯಯೀಭಾವ—ಅಂಗಾಲು, ಮುಂಗಾಲು, ಮೇಗೈ, ತುದಿಗೈ.
7. ಗಮಕಸಮಾಸದಲ್ಲಿ ಪೂರ್ವಪದವು ಸರ್ವನಾಮಕ, ಸಂಖ್ಯಾವಾಚಕ, ದಿಗ್ವಾಚಕ, ಕೃದ್ವಾಚಕ ವಿಶೇಷಣಗಳಲ್ಲಿ ಒಂದು, ಮತ್ತು ಪರಪದವು ನಾಮಪದವಾದ ಅಥವಾ ಪ್ರಥಮಪುರುಷಾರ್ಥಕ ಸರ್ವನಾಮವಾದ ವಿಶೇಷ್ಯವೇ.

ಉದಾ:

ಸರ್ವನಾಮಕ್ಕೆ: ಯಾವ ಮನುಷ್ಯ? ಈ ಮರ, ಅಂಥವ.
ಸಂಖ್ಯಾವಾಚಕಕ್ಕೆ: ಇಪ್ಪತ್ತಮೂರು, ನಾಲ್ವತ್ತೈದು.
ದಿಗ್ವಾಚಕಕ್ಕೆ: ತೆಂಕಣದಿಕ್ಕು, ಮೇಗಣಪೇಟೆ, ಮೂಡಣವ.
ಕೃದ್ವಾಚಕಕ್ಕೆ: { ಅಳುವಕೂಸು, ಹೋದವರುಷ, ಕಾಣದ ಆತ್ಮ, ಮಾಡುವವ, ಮಾಡಿದವ, ಮಾಡದವ.

8. ಕ್ರಿಯಾಸಮಾಸದಲ್ಲಿ ಪೂರ್ವಪದವು ಕರ್ಮಪದವಾಗಿದ್ದು ಪರಪದವಾದ ಕನ್ನಡ ಕ್ರಿಯೆಗೆ ಅರ್ಥವ್ಯಕ್ತಿ ಕೊಡುವದು. ಉದಾ: ಕೆಲಸಮಾಡು, ಜಗಳವಾಡು, ಮನೆಗಟ್ಟು, ದಾರಿದಪ್ಪು, ಶೋಕಪಡು, ಮರಕಡಿ.
9. ವೀಪ್ಸಾಸಮಾಸ— ಅತಿಶಯತರಾರ್ಥವನ್ನು ಹೇಳುವಲ್ಲಿ ಒಂದೇ ಶಬ್ದವನ್ನು ಎರಡು ಅಥವಾ ಹೆಚ್ಚು ಸಾರಿ ಸೇರಿಸಿ ನುಡಿಯುವದೇ ವೀಪ್ಸಾಸಮಾಸವು. ಇದು ಎಂಟು ವಿಧವಾಗಿದೆ, ಹ್ಯಾಗಂದರೆ:—

1. ದೂರ—ಅಗೋಅಗೋ, ಮೇಲ್ಮೇಲೆ, ಅದೆಅದೆ.
2. ಸಮೀಪ—ಕಳಕೆಳಗೆ, ಇದೆಇದೆ, ಇಗೋಇಗೋ.
3. ಆಭೀಕ್ಷ್ಣ (ಬಾರಿಬಾರಿಗೂ)—ಓದಿಯೋದಿ, ಆಡಿಯಾಡಿ, ಉಂಡುಂಡು.
4. ವೀಪ್ಸೆ (ಇಚ್ಛೆ)—ಊರೂರಿಗೆ, ಮನೆಮನೆಗೆ, ಕೇರಿಕೇರಿಗೆ.
5. ಅನುಕರಣ—ಘುಲ್ಘುಲ್ಲೆಂದು, ಭೋರ್ಭೋರೆಂದು
6. ಕ್ರಿಯಾಸಮಭಿಹಾರ (ಕ್ರಿಯೆಯನ್ನು ಅಭಿಮುಖ ಮಾಡಿಕೊಳ್ಳುವದು)—ನಡೆನಡೆ, ಇದಿರ್ಚಿದಿರ್ಚು, ಕೊಡುಕೊಡು, ಹೊಡಿಹೊಡಿ.

ಈ ಕ್ರಿಯಾಸಮಭಿಹಾರ ಮಾಡುವದರಲ್ಲಿ, ಧಾತುವಿನ ಭೂತನ್ಯೂನರೂಪಗಳಿಗೆ ಅವಧಾರಣಾರ್ಥಕ ಏಕಾರವನ್ನು ಸೇರಿಸಿ ಅದರ ಮೇಲೆ ಆದೇ ಧಾತುವಿನ ಆಖ್ಯಾತರೂಪವನ್ನು ಕೂಡಿಸಿ ನಿಶ್ಚಯಾರ್ಥಕ್ರಿಯೆಯಾಗಿ ನುಡಿಯುವ ವಾಡಿಕೆಯುಂಟು. ಉದಾ: ಬಂದೇಬರುತ್ತಾನೆ, ಹೋಗಿಯೇಹೋದನು, ಕೊಂದೇಕೊಲ್ಲುವನು, ಬಂದೇಬಂದಾನು, ಕೊಟ್ಟೇಕೊಡುವನು.

7. ಚಪಲತೆ—ಒಪ್ಪಿಸೊಪ್ಪಿಸು, ಬೇಗಬೇಗನೆ.
8. ಆಧಿಕ್ಯ (ಹೆಚ್ಚು)—ದೊಡ್ಡದೊಡ್ಡ, ಬಹಳಬಹಳ.

103. ಶಬ್ದಸಮಾಸದಲ್ಲಿ ಪ್ರಯೋಗಿಸುವ ಸಂಧಿವಿಧಿಗಳು ಯಾವವು?

ಈ ವಿಷಯಕ್ಕೆ ತಿಳಿಯತಕ್ಕಂಥ ಮುಖ್ಯವಾದ ವಿಧಿಗಳು ಯಾವವಂದರೆ:

1. ಸಮಾಸದಲ್ಲಿ ಪೂರ್ವಪದವೂ ಪರಪದವೂ ಎರಡೂ ತತ್ಸಮಶಬ್ದಗಳು ಅಥವಾ ಎರಡೂ ದೇಶ್ಯಶಬ್ದಗಳು ಆಗಿದ್ದರೆ, "ಪೂರ್ಣಸಮಾಸ"ವೆಂದೆನ್ನಿಸುವದು; ಆದರೆ ಎರಡರಲ್ಲಿ ಒಂದು ತತ್ಸಮ ಮತ್ತೊಂದು ದೇಶ್ಯ ಅಥವಾ ತದ್ಭವವಾಗಿದ್ದರೆ, "ಅರಿಸಮಾಸ"ವೆಂದು ವ್ಯವಹರಿಸುವದು. ಕ್ರಿಯಾ

ಸಮಾಸದಲ್ಲಿಯೂ ಗಮಕಸಮಾಸದಲ್ಲಿಯೂ ಅರಿಸಮಾಸಕ್ಕೆ ದೋಷವಿಲ್ಲ; ಆದರೆ ಪುರಾತನಕವಿಗಳು ಮುಂತಾದ ಬಲ್ಲವರ ಪ್ರಯೋಗದಿಂದ ಸಂದುವಳಿಯಾದ ಅರಿಸಮಾಸಗಳನ್ನು ಅಲ್ಲದೆ ಬೇರೆ ಮಾಡಲಾಗದು. ಉದಾ:

ಪೂರ್ಣಸಮಾಸಕ್ಕೆ— { ಗುರುವಾಕ್ಯ, ದೇಶಸಂಚಾರ, ಮೋಕ್ಷಮಾರ್ಗ; ಬಾಯಿಮಾತು, ಕೈಕೆಲಸ, ನೆಲಮನೆ, ಕಣ್ಣುಬೇನೆ.

ಅರಿಸಮಾಸಕ್ಕೆ— { ಅರಸುಕುಮಾರ, ಕಲ್ಲುಮಂಟಪ, ಕೈವಶ; ತಾಮ್ರಕೊಡ, ಮುಖತಾವರೆ, ಕುಲಗೇಡಿ.

2\. ತತ್ಸಮಶಬ್ದಗಳ ಪೂರ್ಣಸಮಾಸದಲ್ಲಿ ಸಂಸ್ಕೃತಸಂಧಿವಿಧಿಗಳು ಪ್ರಯೋಗಿಸುವವು. ಅವುಗಳನ್ನು ಹಿಂದೆ 26—30ನೇ ಉತ್ತರಗಳಲ್ಲಿ ನೋಡು. ದೇಶೀಸಮಾಸದಲ್ಲಿ ದೇಶೀಸಂಧಿವಿಧಿಗಳು ಪ್ರಯೋಗಿಸುವವು. ಅವುಗಳಲ್ಲಿ ಸಾಮಾನ್ಯವಾದವುಗಳನ್ನು ಹಿಂದೆ 32—34ನೇ ಉತ್ತರಗಳಲ್ಲಿ ನೋಡು. ಅವುಗಳಲ್ಲದೆ ಸಮಾಸದಲ್ಲಿ ಮಾತ್ರ ಪ್ರಯೋಗಿಸುವ ವಿಶೇಷವಾದ ದೇಶೀಸಂಧಿವಿಧಿಗಳು ಯಾವವಂದರೆ—

3\. ಪೂರ್ವಪದವು ಸಂಖ್ಯಾವಾಚಕವಾಗಿದ್ದರೆ, ಒಂದಕ್ಕೆ ಒರ್, ಓರ್; ಎರಡಕ್ಕೆ ಇರ್, ಈರ್; ಹತ್ತಕ್ಕೆ ಸಂಯುಕ್ತನಕಾರವೂ ಬರುತ್ತದೆ. ಉದಾ: ಒಂದು + ತಲೆ = ಒರ್ತಲೆ, ಒಂದು + ಆನೆ = ಓರಾನೆ, ಎರಡು + ಐದು = ಈರೈದು, ಎರಡು + ತಂಡ = ಇರ್ತಂಡ (ಇತ್ತಂಡ), ಹತ್ತು + ಒಂದು = ಹನ್ನೊಂದು.

4\. ಇ, ಎಕಾರಾಂತ ಪೂರ್ವಪದಗಳ "ಇ, ಎ" ಸ್ವರಗಳಿಗೆ ವಿಕಲ್ಪವಾಗಿ ದೀರ್ಘ ಬರುವದು. ಉಕಾರಾಂತಗಳ ಅನಿತ್ಯ "ಉ" ಸ್ವರಕ್ಕೆ ವಿಕಲ್ಪವಾಗಿ "ಅ" ಸ್ವರಾದೇಶ

ಬರುವದು. ಉದಾ: ಕುರೀಹಾಲು=ಕುರಿಯ ಹಾಲು, ಮಳೇನೀರು=ಮಳೆಯ ನೀರು, ಬಾಳೇಗಿಡ. ಊರಬಾವಿ=ಊರಿನ ಬಾವಿ, ಹಾಲಮರ=ಹಾಲಿನ ಮರ, ನೀರನೆಲೆ.

5. ಹಳಗನ್ನಡದಿಂದ ಬಂದ ಹಲವು ಗಮಕಸಮಾಸಗಳಲ್ಲಿ ಪೂರ್ವಪದದ ಅಂತಾಕ್ಷರ ಲುಪ್ತವಾಗಿದೆ. ಉದಾ: ಬೀಸುವ-ಕಲ್ಲು=ಬೀಸುಗಲ್ಲು, ಒರೆವ-ಕಲ್ಲು=ಒರೆಗಲ್ಲು, ಒಳಗು-ಕೋಟೆ=ಒಳಗೋಟೆ, ಹೊರಗು-ಮಗ್ಗಲು=ಹೊರಮಗ್ಗಲು, ತೆಂಕು-ಗಾಳಿ=ತೆಂಗಾಳಿ.

ಇದಲ್ಲದೆ ಈ ಪ್ರಕಾರ ಅಂತಾಕ್ಷರ ಲುಪ್ತವಾದ ಬಳಿಕ ಅದರ ಹಿಂದೆ ಉಳಿದ ಉಪಾಂತಾಕ್ಷರಕ್ಕೂ ಪರಪದದ ಆದಿ ವ್ಯಂಜನಕ್ಕೂ ಪರಸವರ್ಣಾದೇಶ ಬಂದದೆ. ಅದರಿಂದ ಸ್ವರಾದಿಪರಪದಗಳ ಹಿಂದೆ ಪೂರ್ವಪದಾದಿಸ್ವರಕ್ಕೆ ದೀರ್ಘವೂ, ಮತ್ತು ವ್ಯಂಜನಾದಿಪರಪದಗಳೊಂದಿಗೆ ಪರಪದಾದಿ ವ್ಯಂಜನಕ್ಕೆ ದ್ವಿತ್ವವೂ ಬಂದವೆ. ಇವು ಮೊದಲಾದ ಹಳಗನ್ನಡದ ಸಂಧಿವಿಧಿಗಳ ವಿವರವನ್ನು ಮುಂದೆ ತೋರಿಸಿರುವ ಉದಾಹರಣೆಗಳ ಮೂಲಕ ತಿಳುಕೊಳ್ಳತಕ್ಕದ್ದು.

ಉದಾ:

ಮುಂದು=ಮುಂಗಡೆ, ಮುಂಗಟ್ಟು=ಮುಕ್ಕಟ್ಟು, ಮುಂಗಾಲು, ಮುಂಗೈ, ಮುಂದಲೆ; ಹಿಂದು=ಹಿಂಗಡೆ, ಹಿಂಗಟ್ಟು=ಹಿಕ್ಕಟ್ಟು, ಹಿಂಗಾಲು, ಹಿಂಭಾಗ; ಒಂದು=ಓರ್, ಓರಾನೆ, ಒಕ್ಕಣ್ಣು, ಒತ್ತಟ್ಟು, ಒಪ್ಪೊತ್ತು ಒಬ್ಬ; ಎರಡು=ಇರ್, ಈರಾರು, ಇಕ್ಕಣ್ಣು, ಇನ್ನೂರು, ಇಪ್ಪತ್ತು, ಇಬ್ಬರು; ಮೂರು=ಮುರ್, ಮುಕ್ಕುಪ್ಪಿ, ಮುಚ್ಚೋಟು, ಮುಪ್ಪಾವು, ಮುವ್ವತ್ತು; ನಾಲ್ಕು=ನಾಲ್, ನಾಲ್ವತ್ತು, ನಾಲ್ನೂರು, ನಾಲ್ಮೊಗ, ನಾಲ್ವಡಿ, ನಾಲ್ವರು; ಐದು=ಐ, ಐನೂರು, ಐಕಟ್ಟು, ಐಮೂಲೆ, ಐವರು; ಒಂಭತ್ತು=(ಒಂದು-ಕಡಿಮೆ-ಹತ್ತು); ಹನ್ನೊಂದು=ಹತ್ತು-ಒಂದು; ಅಡಿ-ಕೈ=ಅಂಗೈ, ಅಂಗಾಲು.

6. ಗಮಕಸಮಾಸದಲ್ಲಿ ಪೂರ್ವಪದವಾದ ಸರ್ವನಾಮಕ, ಸಂಖ್ಯಾವಾಚಕ, ದಿಗ್ವಾಚಕ, ಕೃದ್ವಾಚಕ ವಿಶೇಷಣಗಳಿಗೆ (149—152ನೇ ಉತ್ತರಗಳಲ್ಲಿ ನೋಡು.) ಹಳಗನ್ನಡ ಪ್ರಯೋಗದ ಪ್ರಕಾರ "ಅನು, ಅಳು, ಅದು; ಅರು, ಅವು" ಎಂಬ ಅಚ್ಪ್ರತ್ಯಯಗಳನ್ನಾಗಲಿ, ಅಥವಾ ಹೊಸಗನ್ನಡ ಪ್ರಯೋಗದ ಪ್ರಕಾರ "ಅವನು, ಅವಳು, ಅದು; ಅವರು, ಅವುಗಳು" ಎಂಬ ಪ್ರಥಮಪುರುಷಾರ್ಥಕ ಸರ್ವನಾಮಗಳನ್ನಾಗಲಿ ಅನುಬಂಧಿಸುವದರಿಂದ, ಉತ್ತರವಿಶೇಷಣಗಳಾಗಿ ಪ್ರಯೋಗಿಸುವ ವಿಶೇಷಣಾರ್ಥಕ ನಾಮಪದಗಳು ಆಗುವವು.

ಅದರಂತೆ ಕನ್ನಡ ಬಹುವ್ರೀಹಿಗಳಲ್ಲಿ ಅಚ್ಪ್ರತ್ಯಯಗಳು ಅನುಬಂಧಿತವಾಗುತ್ತವೆ. ಉದಾ:

ಸರ್ವನಾಮಕ್ಕೆ: ಯಾವನು, ಯಾವಳು, ಯಾವದು; ಯಾವರು (=ಯಾರು), ಯಾವವು[ಗಳು]; ಎಂಥವನು, ಎಂಥವಳು, ಎಂಥಾದ್ದು; ಎಂಥವರು, ಎಂಥಾವು[ಗಳು].

ಸಂಖ್ಯಾವಾಚಕಕ್ಕೆ: ಮೂರನೆಯವನು, ಮೂರನೆಯವಳು, ಮೂರನೇದು; ಮೂರನೆಯವರು, ಮೂರನೆಯವು[ಗಳು].

ದಿಗ್ವಾಚಕಕ್ಕೆ: ತೆಂಕಣವನು, ತೆಂಕಣವಳು, ತೆಂಕಣದು.

ಕೃದ್ವಾಚಕಕ್ಕೆ: ಮಾಡುವವನು, ಮಾಡುವವಳು, ಮಾಡುವದು; ಮಾಡುವವರು, ಮಾಡುವವುಗಳು, ಮಾಡಿದವನು, ಮಾಡಿದವಳು, ಮಾಡಿದ್ದು; ಮಾಡದವನು, ಮಾಡದವಳು, ಮಾಡದ್ದು.

ಬಹುವ್ರೀಹಿಗೆ: ಒಕ್ಕಣ್ಣನು, ಒಕ್ಕಣ್ಣಳು, ಒಕ್ಕಣ್ಣದು.

ಮೇಲಿನ ವಿಧಿಗೆ ಕೆಲವು ಹಳಗನ್ನಡ ಪ್ರಯೋಗಗಳು ಅಪವಾದಗಳಾಗಿವೆ. ಅವುಗಳೊಳಗೆ ಮುಖ್ಯವಾಗಿ ತಿಳಿಯತಕ್ಕಂಥವುಗಳು ಯಾವವಂದರೆ— ಉದಾ: ಒಳ್ಳೆ= ಒಳ್ಳೇದು, ಒಳ್ಳೇತು, ಒಳ್ಳಿದು, ಒಳ್ಳಿತು; ಕಿರಿ=ಕಿರಿದು; ಹಿರಿ=ಹಿರಿಯದು, ಹಿರಿದು; ಕರಿ=ಕರಿಯದು, ಕರಿದು; ಬಿಳಿ= ಬಿಳಿದು, ಬಿಳದು, ಬಿಳುಪು; ಎಳೆ=ಎಳದು; ಹಳೆ=ಹಳಬನು, ಹಳಬರು, ಹಳದು, ಹಳೇದು, ಹಳತು; ಹೊಸ=ಹೊಸಬನು, ಹೊಸಬರು, ಹೊಸದು, ಹೊಸತು, ಹೊಸ್ತು.

7. ದೇಶೀಗುಣವಾಚಕಗಳಲ್ಲಿ ಅನೇಕವು ಅವ್ಯಯೀಭಾವಿಗಳಾಗಿ ಪ್ರಯೋಗಿಸುವವು. ಇಂಥವುಗಳಿಂದ ವಿಶೇಷಣಾರ್ಥಕ ನಾಮಪದಗಳನ್ನು ಹುಟ್ಟಿಸಬೇಕಾದರೆ, ಅವಕ್ಕೆ ಮೊದಲು "ಆದ" ಎಂಬ ಸಹಾಯಕೃದ್ವಾಚಿ ಅನುಬಂಧಿಸಿದ ಮೇಲೆ ಪ್ರಥಮಪುರುಷಾರ್ಥಕ ಸರ್ವನಾಮಗಳನ್ನು ಸಮಾಸ ಮಾಡುವ ಪದ್ಧತಿ ಉಂಟು. ಉದಾ: ಗಟ್ಟಿ= ಗಟ್ಟಿಯಾದವನು; ಹೆಚ್ಚು=ಹೆಚ್ಚಾದವನು, ಹೆಚ್ಚಿನವನು; ಕೆಂಪು=ಕೆಂಪಾದವನು, ಕೆಂಪಿನವನು.

III. Part: Syntax.
ಮೂರನೆ ಭಾಗ.
ವಾಕ್ಯಖಂಡ.

---

1. ಆಖ್ಯಾತಪ್ರಕರಣ. Of the Predicative Parts of Speech.

ಆಖ್ಯೆ ಆಖ್ಯಾತಗಳು (Subject and Predicate).

104. ವಾಕ್ಯವಂದರೇನು?

ಒಂದು ಸಂಪೂರ್ಣ ಆಲೋಚನೆಯನ್ನು ಹೇಳುವ ಮಾತು "ವಾಕ್ಯ" (Sentence) ಎಂದು ವ್ಯವಹರಿಸುವದು. ವಾಕ್ಯದಲ್ಲಿ "ಆಖ್ಯೆ" (Subject), "ಆಖ್ಯಾತ" (Predicate) ಎಂಬ ಎರಡು ಪದಗಳು ಮುಖ್ಯವು. ಆಖ್ಯೆಪದವು ವಾಕ್ಯದ ಆಲೋಚನೆಗೆ ಉದ್ದೇಶವಾದ ವಸ್ತುವನ್ನು ಹೇಳುವ ಕಾರಣ ಸಂಸ್ಕೃತಪಂಡಿತರು ಅದಕ್ಕೆ "ಉದ್ದೇಶಪದ" ಅನ್ನುವರು; ಮತ್ತು ಆಖ್ಯಾತಪದದ ಪುರುಷ ಲಿಂಗ ವಚನಗಳು ಉದ್ದೇಶಪದದ ಪುರುಷ ಲಿಂಗ ವಚನಗಳಿಗೆ ವಿಧೇಯುವಾಗಿರುವ ಕಾರಣ, ಅವರು ಆಖ್ಯಾತಕ್ಕೆ "ವಿಧೇಯಪದ" ಅನ್ನುವರು. ಉದಾ: ಅರಸನು ಆಳುತ್ತಾನೆ; ಲೋಕವು ದೊಡ್ಡದಾಗಿದೆ. ಇವೆರಡು ವಾಕ್ಯಗಳಲ್ಲಿ "ಅರಸನು, ಲೋಕವು" ಎಂಬಿವು ಆಖ್ಯೆಗಳೆಂದೆನ್ನಿಸುವ ಉದ್ದೇಶಪದಗಳೂ, "ಆಳುತ್ತಾನೆ, ದೊಡ್ಡದಾಗಿದೆ" ಎಂಬಿವು ತಮ್ಮ ತಮ್ಮ ಉದ್ದೇಶಕ್ಕೆ ವಿಧೇಯವಾದ ಆಖ್ಯಾತಪದಗಳೂ ಆಗಿರುತ್ತವೆ.

105. ಆಖ್ಯಾತಗಳು ಎಷ್ಟು ವಿಧವು?

"ಕ್ರಿಯಾವಾಚಕ ಆಖ್ಯಾತ, ಲಕ್ಷಣವಾಚಕ ಆಖ್ಯಾತ"ಗಳೆಂದು ಎರಡು ವಿಧವು. ಹ್ಯಾಗಂದರೆ—ವಾಕ್ಯಕ್ಕೆ ಉದ್ದೇಶವಾದ ವಸ್ತುವು

ಮಾಡುವಂಥ, ಪಡುವಂಥ ಕ್ರಿಯೆ ಹೇಳುವ ಆಖ್ಯಾತಕ್ರಿಯಾಪದಗಳೆಲ್ಲಾ ಕ್ರಿಯಾವಾಚಕ ಆಖ್ಯಾತಗಳೇ. ಉದಾ:

ಅರಸನು ಆಳುತ್ತಾನೆ; ಪ್ರಜೆಗಳು ಆಳಲ್ಪಡುತ್ತಾರೆ.

ಮತ್ತು ಆಖ್ಯೆಯ ಯಾವದೊಂದು ಲಕ್ಷಣವನ್ನು ಹೇಳುವದಕ್ಕೆ ಕೂಡಿಸುವ ರೂಪಗಳೆಲ್ಲಾ (ಅಂದರೆ ಕರ್ತೃವಿಭಕ್ತಿ ಹೊಂದಿದ ಪದಗಳೆಲ್ಲ) ಲಕ್ಷಣವಾಚಕ ಆಖ್ಯಾತಗಳೇ. ಉದಾ:

ಲೋಕವು ದೊಡ್ಡದು; ನಾವು ಮನುಷ್ಯರು; ಬಂದವನು ನಾನು.

ಲಕ್ಷಣಪದವನ್ನು "ಇರು" ಧಾತುವಿನ ಆಖ್ಯಾತಕ್ರಿಯಾಪದಗಳ ಸಹಾಯದಿಂದ ಉದ್ದೇಶಪದಕ್ಕೆ ಕೂಡಿಸುವದೂ ಉಂಟು; ಮತ್ತು ಇಂಥ ಸಹಾಯಕ್ರಿಯಾಪದವಿಲ್ಲದೆ ಅನ್ವಯಿಸುವದೂ ಉಂಟು; ಸಹಾಯಕ್ರಿಯಾಪದವಿಲ್ಲದೆ ಉದ್ದೇಶಪದಕ್ಕೆ ಅನ್ವಯಿಸಿದ ಲಕ್ಷಣವಾಚಕ ಆಖ್ಯಾತಗಳು "ವಿಧೇಯವಿಶೇಷಣ"ಗಳೆಂದು ವರ್ತಿಸುವವು. ಅವುಗಳ ಪ್ರಯೋಗದಿಂದ ವಾಕ್ಯಗಳು ಸಂಕ್ಷೇಪವಾಗುವದರ ನಿಮಿತ್ತ ಅದು ಕನ್ನಡದಲ್ಲಿ ಬಹಳವಾಗಿ ವರ್ತಿಸುವದು.

ಉದಾ: ಅರಸನು ರಾಜ್ಯದ ಒಡೆಯನು [ಆಗಿದ್ದಾನೆ]; ನಾವು ಮನುಷ್ಯರು [ಆಗಿದ್ದೇವೆ]; ಎಲ್ಲಾ ಮನುಷ್ಯರು ಮರ್ತ್ಯರೇ [ಆಗಿದ್ದಾರೆ].

106. (ಆಖ್ಯೆ ಎಂಬ) ಉದ್ದೇಶಪದಕ್ಕೆ ಆಖ್ಯಾತವು ವಿಧೇಯವಾಗಿರುವದು ಹ್ಯಾಗೆ?

ವಾಕ್ಯದ ಉದ್ದೇಶಕ್ಕೆ ಯಾವ ಪುರುಷ ಲಿಂಗ ವಚನವಿರುವದೊ, ಅದೇ ಪುರುಷ ಲಿಂಗ ವಚನವು ಆಖ್ಯಾತಕ್ಕೂ ಬರುವದು.

ಉದಾ:

ಉತ್ತಮಪುರುಷ—	ನಾನು ಮಾಡಿದೆನು,	ನಾವು ಮಾಡಿದೆವು.
ಮಧ್ಯಮಪುರುಷ—	ನೀನು ಮಾಡಿದಿ,	ನೀವು ಮಾಡಿದಿರಿ.
ಪ್ರಥಮ ಪು. ಪು.—	ಹುಡುಗನು ಮಾಡಿದನು.	ಹುಡುಗರು ಮಾಡಿದರು.
ಸ್ತ್ರೀ.—	ಹಿರಿಯಳು ಮಾಡಿದಳು,	ಹಿರಿಯರು ಮಾಡಿದರು.
ನಪುಂ.—	ಕೈ ಮಾಡಿತು,	ಕೈಗಳು ಮಾಡಿದವು.

ಈ ವಿಧಿಗೆ ಮುಖ್ಯವಾದ ಅಪವಾದಗಳು ಯಾವವೆಂದರೆ—

1. ಒಬ್ಬ ದೊಡ್ಡ ಮನುಷ್ಯನಿಗೆ ಮಾನ ಕೊಡುವ ಹಾಗೆ ಪೂಜ್ಯಾರ್ಥದಲ್ಲಿ ಬಹುವಚನ ಪ್ರಯೋಗಿಸುವದು ಕನ್ನಡದಲ್ಲಿ ಬಹಳ ಉಂಟು. ಆದರೆ ವಿಕಲ್ಪವಾಗಿ ಇಂಥ ಪೂಜ್ಯಾರ್ಥದ ಬಹುವಚನದ ಮುಂದೆ ಆಖ್ಯಾತಕ್ಕೆ ಏಕವಚನ ಬರುವದು. ಉದಾ: ಅರಸನು ಇನ್ನು ಬಹಳ ದಿವಸ ಬದುಕಲಾರನು ಎಂದು ಜೋಯಿಸನು ಸುಳ್ಳು ಹೇಳಿದನು.

ಈ ಪ್ರಕಾರ "ದೇವರು" ಎಂಬ ಬಹುವಚನದ ನಾಮದ ಮುಂದೆಯೂ ಆಖ್ಯಾತಕ್ಕೆ ಏಕವಚನ ಬರುವದು. ಉದಾ: ಮಹೋನ್ನತನಾದ ನಿಜ ದೇವರು ಒಬ್ಬನೇ.

2. ಜ್ಞಾನವಿಲ್ಲದ ವಸ್ತುಗಳನ್ನು ಹೇಳುವ ನಾಮಪದಗಳಿಗೆ ಬಹುವಚನದ ಅರ್ಥವಲ್ಲಿಯೂ ಏಕವಚನದ ಸ್ವರೂಪವನ್ನು ಕೊಡುವದು ಕನ್ನಡದಲ್ಲಿ ಬಹಳ ಪ್ರಯೋಗ ಉಂಟು. ಸಂಖ್ಯಾವಿಶೇಷಣಗಳಿಂದ ವಿಶೇಷಿತ ನಪುಂಸಕ ನಾಮಗಳೊಡನೆ ಈ ಪ್ರಯೋಗವು ನಿತ್ಯವಾದದ್ದು. ಉದಾ: ನಾಲ್ಕು ಎತ್ತು ಸತ್ತವು; ಕೈಗೆ ಐದು ಬೆರಳು ಅವೆ; ಹತ್ತು ವರುಷ ಆದವು.

3. ಪೂಜ್ಯಾರ್ಥದಲ್ಲಿ ಮಧ್ಯಮಪುರುಷಕ್ಕೆ "ತಾವು" ಎಂಬ ಆತ್ಮಾರ್ಥಕಸರ್ವನಾಮವನ್ನು ಹೇಳುವ ಪದ್ಧತಿ ಉಂಟು. ಉದಾ: ತಾವು ಧನಿಯುವರು, ಬಡವನನ್ನು ಉದ್ಧಾರ ಮಾಡಿರಿ, ಎಂದು ಭಿಕ್ಷುಕನು ಸಾವುಕಾರನನ್ನು ಬೇಡಿಕೊಂಡನು.

107. ಒಂದು ವಾಕ್ಯದಲ್ಲಿ ಅನೇಕ ಉದ್ದೇಶಪದಗಳ ಮುಂದೆ ಒಂದೇ ಆಖ್ಯಾತಪದ ಬಂದರೆ, ಅದರ ಪುರುಷ ಲಿಂಗ ವಚನವು ಹ್ಯಾಗೆ?

ಈ ವಿಷಯಕ್ಕೆ ಪ್ರಯೋಗಿಸುವ ವಿಧಿಗಳು ಯಾವವಂದರೆ—

1ನೇದು—ಏಕವಚನರೂಪವಾದ ಅನೇಕ ಉದ್ದೇಶಗಳ ಮುಂದೆ ಆಖ್ಯಾತಕ್ಕೆ ಬಹುವಚನರೂಪ ಬರುವದು. ಉದಾ: ತಂದೆಯೂ ಮಗನೂ ಬಂದರು; ಆಕಳೂ ಕರುವೂ ಸತ್ತವು; ತಂದೆಯೂ ಮಗನೂ ಜಾಣರು; ಆಕಳೂ ಕರುವೂ ಪಶುಗಳೇ.

2ನೇದು—ಭಿನ್ನಲಿಂಗವಾದ ಅನೇಕ ಉದ್ದೇಶಗಳ ಮುಂದೆ ಆಖ್ಯಾತಕ್ಕೆ ಕಡೇ ಉದ್ದೇಶಪದದ ಲಿಂಗವು ಬರುವದು. ಉದಾ: ಪಟ್ಟದಾನೆಯೂ ರಾಜನೂ ರಾಣಿಯೂ ಬಂದರು; ರಾಜನೂ ರಾಣಿಯೂ ಪಟ್ಟದಾನೆಯೂ ಬಂದವು.

3ನೇದು—ಭಿನ್ನಪುರುಷವಾದ ಅನೇಕ ಉದ್ದೇಶಗಳ ಮುಂದೆ ಆಖ್ಯಾತಕ್ಕೆ ಅಧಿಕಪುರುಷ ಬರುವದು. ಅಧಿಕಪುರುಷ ಯಾವದಂದರೆ: ಪ್ರಥಮಪುರುಷಕ್ಕಿಂತ ಮಧ್ಯಮಪುರುಷವೇ ಅಧಿಕ, ಮಧ್ಯಮಪುರುಷಕ್ಕಿಂತ ಉತ್ತಮಪುರುಷವೇ ಅಧಿಕ. ಉದಾ: ನೀನೂ ಅವನೂ ಬಂದಿರಿ; ನಾನೂ ನೀನೂ ಬಂದೆವು.

108. ಪದಲೋಪ ಹೊಂದಿದ ವಾಕ್ಯಗಳುಂಟೋ?

ಉಂಟು; ಅರ್ಥದಲ್ಲಿ ಒಂದಕ್ಕೊಂದು ಅನ್ವಿತವಾದ ಪದಗಳಿಗೆ ತಮ್ಮೊಳಗೆ ಇರುವ ಸಂಧಾನವು "ಸಮಭಿವ್ಯಾಹಾರ" (context) ಎಂದು ವ್ಯವಹರಿಸುವದು. ಆದರೆ ಸಮಭಿವ್ಯಾಹಾರದಿಂದಾಗಲಿ ಆಖ್ಯಾತಕ್ರಿಯಾಪದದ ಪುರುಷಪ್ರತ್ಯಯದ ಮೇಲಿನಿಂದಾಗಲಿ ವಾಕ್ಯದ ಉದ್ದೇಶವು ಸುಲಭವಾಗಿ ಅನುವರ್ತಿಸುವಲ್ಲಿ ಅದಕ್ಕೆ ವಿಕಲ್ಪವಾಗಿ ಲೋಪ ಬರುವದು. ಉದಾ: [ನಾನು] ಹೋಗುತ್ತೇನೆ; [ನೀನು] ಮಾಡು; [ಆಕಾಶವು] ಬೆಳಗಿತು.

ಅದೇ ಪ್ರಕಾರ ವಾಕ್ಯಗಳು ಸಂಕ್ಷೇಪವಾಗುವ ಹಾಗೆ ಆಖ್ಯಾತದ ಕ್ರಿಯಾಪದಕ್ಕೆ ವಿಕಲ್ಪವಾಗಿ ಲೋಪ ಬರುವದು. "ಇರು" ಧಾತುವಿನ ಆಖ್ಯಾತರೂಪಗಳನ್ನು ಲೋಪಿಸುವ ಪ್ರಯೋಗವು ಕನ್ನಡದಲ್ಲಿ ಬಹಳವಾಗಿ ವರ್ತಿಸುವದು. ಉದಾ: ಮನುಷ್ಯರಿಗೆ ಆತ್ಮ [ಇರುತ್ತದೆ]; ಪಕ್ಷಿಗಳಿಗೆ ರೆಕ್ಕೆಗಳು [ಅವೆ]; ಬಾವಿಯಲ್ಲಿ ನೀರು [ಇದೆ]; ವಿಷದಿಂದ ರೋಗ [ಬರುವದು]; ದುಷ್ಟರಿಗೆ ಶಿಕ್ಷೆ, ಉತ್ತಮರಿಗೆ ಮಾನ [ದೊರಕುವದು].

ವಾಕ್ಯಗಳ ಸಮಭಿವ್ಯಾಹಾರದಿಂದ ಅನುವರ್ತಿಸಿ ನಿಶ್ಚಯಿಸ

ತಕ್ಕ ಲುಪ್ತಪದವು "ಅಧ್ಯಾಹಾರ" (inference) ಎಂದು ವರ್ತಿಸುವದು.

ಆಖ್ಯಾತಕ್ರಿಯಾಪದಗಳ ಪ್ರಯೋಗ
(Uses of the Inflected Verbal forms).

109. ವರ್ತಮಾನಕ್ರಿಯಾಪದಗಳ ಪ್ರಯೋಗವು ಹ್ಯಾಗೆ?

ವಾಕ್ಯವನ್ನು ಹೇಳಿದವನು ಮಾತನಾಡುವ ಸಮಯದಲ್ಲಿ ಇನ್ನು ನಡಿಯುತ್ತಾ ಇರುವ ಕ್ರಿಯೆಯನ್ನು ಹೇಳುವದಕ್ಕೆ ವರ್ತಮಾನ ಕ್ರಿಯಾಪದಗಳು ಪ್ರಯೋಗಿಸುವವು.

ಉದಾ: ನಾನು ಓದುತ್ತೇನೆ; ನಾವು ಬದುಕುತ್ತೇವೆ; ಅದು ಇರುತ್ತದೆ.

ಇದಲ್ಲದೆ ಮುಂದೆ ನಡಿಯ ತಕ್ಕ ಒಂದು ಕ್ರಿಯೆಯು ನಿಶ್ಚಯವಾಗಿ ನಡಿಯುವದೆಂಬ ಅರ್ಥವನ್ನು ಹೇಳುವದಕ್ಕೆ ವರ್ತಮಾನ ರೂಪಗಳು ವಿಕಲ್ಪವಾಗಿ ಭವಿಷ್ಯತ್ಕಾಲಾರ್ಥದಲ್ಲಿ ಪ್ರಯೋಗವಾಗುವವು.

ಉದಾ: ನಾಳೆ ಬರುತ್ತೇನೆ; ಯಾವಾಗ ಕಳುಹಿಸುತ್ತೀ?

110. ಭೂತಕ್ರಿಯಾಪದಗಳ ಪ್ರಯೋಗವು ಹ್ಯಾಗೆ?

ವಾಕ್ಯವನ್ನು ಹೇಳಿದವನು ಮಾತನಾಡುವದಕ್ಕಿಂತ ಹಿಂದೆ ನಡೆದ ಕ್ರಿಯೆಯನ್ನು ಹೇಳುವದಕ್ಕೆ ಭೂತರೂಪಗಳು ಪ್ರಯೋಗವಾಗುವವು.

ಉದಾ: ರಾತ್ರಿಯಲ್ಲಿ ನಿದ್ರೆ ಮಾಡಿದೆವು; ಬೆಳಿಗ್ಯೆ ಎದ್ದೆವು.

ಇದಲ್ಲದೆ ಅತಿ ತ್ವರೆಯನ್ನಾಗಲಿ, ನಿಶ್ಚಯಾರ್ಥವನ್ನಾಗಲಿ, ಹೇಳುವದಕ್ಕೆ ಭೂತರೂಪಗಳು ವಿಕಲ್ಪವಾಗಿ ಪ್ರಯೋಗವಾಗುವವು.

ಉದಾ: ಅತಿ ತ್ವರೆಗೆ—"ಬಾ" ಎಂದು ಕರೆದ ತಂದೆಗೆ, ಮಗನು "ಬಂದೆನು" ಅಂತ ಉತ್ತರ ಕೊಟ್ಟನು.

ಅತಿ ನಿಶ್ಚಯಕ್ಕೆ—ನೀನು ವಿಷ ತಿಂದರೆ, ಸತ್ತಿ.

111. ಭವಿಷ್ಯತ್ ಭಾವಿರೂಪಗಳ ಪ್ರಯೋಗವು ಹ್ಯಾಗೆ?

ಮಾತನಾಡುವ ಸಮಯದಲ್ಲಿ ಇನ್ನು ಮುಂದೆ ನಿಶ್ಚಯವಾಗಿ ಸಂಭವಿಸಲಿಕ್ಕಿರುವ ಕ್ರಿಯೆಯನ್ನು ಹೇಳುವದಕ್ಕೆ ಭವಿಷ್ಯತ್ ಕ್ರಿಯಾರೂಪಗಳೂ, ಸಂಶಯಾರ್ಥದಲ್ಲಿ ಭಾವಿ ಕ್ರಿಯಾರೂಪಗಳೂ ಪ್ರಯೋಗವಾಗುವವು.

ಉದಾ: ನಾವೆಲ್ಲರು ಸಾಯುವೆವು; ನಾವೆಲ್ಲರು ಹೋದೇವು.

112. ನಿಷೇಧ ಕ್ರಿಯಾರೂಪಗಳ ಪ್ರಯೋಗವು ಹ್ಯಾಗೆ?

ಮೂರು ಕಾಲಗಳಲ್ಲಿಯೂ ಸಂಭವಿಸದ ಕ್ರಿಯೆ ಹೇಳುವದಕ್ಕೆ ನಿಷೇಧರೂಪಗಳು ಪ್ರಯೋಗವಾಗುವವು. ಉದಾ: ಸುಳ್ಳುಗಾರನನ್ನು ಯಾರೂ ನಂಬರು; ತಂತಿಟಪಾಲು ಲೋಹಮಾರ್ಗಗಳನ್ನು ಪುರಾತನರು ಅರಿಯರು.

113. ವಿಧಿಕ್ರಿಯಾಪದಗಳ ಪ್ರಯೋಗವು ಹ್ಯಾಗೆ?

ಉತ್ತಮಪುರುಷದ ವಿಧಿರೂಪಗಳು ಒಬ್ಬನು ಮಾಡಲಿಕ್ಕೆ ತನ್ನ ಮನಸ್ಸಿನಲ್ಲಿ ಸಂಕಲ್ಪಿಸಿದ ಕ್ರಿಯೆ ಹೇಳುವವು. ಉದಾ:

ನಾನು ಆ ಕೆಲಸವನ್ನು ಮಾಡುವೆ; ನಾವು ಊರಿಗೆ ಹೋಗುವಾ; ಮನೆಗೆ ಸೇರೋಣ.

ಮಧ್ಯಮಪುರುಷದ ವಿಧಿರೂಪಗಳು ಒಬ್ಬನು ಮತ್ತೊಬ್ಬನಿಗೆ ಆಜ್ಞಾಪಿಸುವಂಥ, ಅಥವಾ ವಿಜ್ಞಾಪಿಸುವಂಥ ಕ್ರಿಯೆಯನ್ನು ಹೇಳುವವು. ಉದಾ: ಅಲ್ಲಿಗೆ ಹೋಗು; ದಯಮಾಡಿ ಬನ್ನಿರಿ; ದೇವರೇ ಸಲಹು.

ಅದೇ ಅರ್ಥದಲ್ಲಿ ಜನರು ವಿಕಲ್ಪದಿಂದ ಕ್ರಿಯಾನಾಮರೂಪವನ್ನು ಪ್ರಯೋಗಿಸುವರು. ಉದಾ: ನೀವೆಲ್ಲರೂ ಅವರ ಆಜ್ಞಾನುಸಾರವಾಗಿ ನಡೆಯುವದು.

ಪ್ರಥಮಪುರುಷದ ವಿಧಿರೂಪವು ಒಬ್ಬನು ಅನುಮತಿಸುವಂಥ ಅಥವಾ ಆಶಿಸುವಂಥ ಕ್ರಿಯೆಯನ್ನು ಹೇಳುವದು. ಆದದರಿಂದ ಕೆಲವರು ಇದಕ್ಕೆ "ಆಶಂಸಾರ್ಥ" (Optative) ಅನ್ನುವರು. ಉದಾ: ಹುಡುಗರು ವಿದ್ಯೆ ಕಲಿಯಲಿ; ಅವರಿಗೆ ಬುದ್ಧಿ ಬರಲಿ.

ಆಶಂಸಾರ್ಥಕಪ್ರಶ್ನಾವಾಕ್ಯಗಳಲ್ಲಿ ಈ ರೂಪವು ಉತ್ತಮ ಪುರುಷಕ್ಕೂ ಬರುವದು. ಉದಾ: ನಾನು ಏನು ಮಾಡಲಿ?

114. ಸಂಯುಕ್ತ ಕ್ರಿಯಾಪದಗಳ ಪ್ರಯೋಗವು ಹ್ಯಾಗೆ?

ಕ್ರಿಯಾಪದಗಳ ಸಂಯುಕ್ತರೂಪಗಳ ಉತ್ಪತ್ತಿ ಹಿಂದೆ (೮೮ನೇ ಉತ್ತರದಲ್ಲಿ) ವಿವರಿಸಿ ಅದೆ. ಅವುಗಳ ಪ್ರಯೋಗದ ಮುಖ್ಯ ವಿಧಿಗಳು ಯಾವವಂದರೆ—

1. ವರ್ತಮಾನನ್ಯೂನಕ್ಕೆ "ಇರು" ಧಾತುವಿನ ರೂಪಗಳನ್ನು ಅನುಬಂಧಿಸಿದ್ದರಿಂದ ಉಂಟಾದ ಸಂಯುಕ್ತಕ್ರಿಯಾಪದಗಳು, ಕ್ರಿಯೆಯ ಪ್ರವರ್ತನೆ ಅಲ್ಪಕಾಲಕ್ಕೆ ಮಾತ್ರವಲ್ಲಾ, ತಕ್ಕಷ್ಟು ಕಾಲ ನಡಿಯುವದೆಂದು ಸೂಚಿಸುತ್ತವೆ. ಉದಾ: ಮೀನುಗಳು ನೀರಿನಲ್ಲಿ ಬದುಕುತ್ತಿರುತ್ತವೆ; ವಿಕ್ರಮಾದಿತ್ಯನು ಪೂರ್ವಕಾಲದಲ್ಲಿ ಮಾಳವ ದೇಶ ಆಳುತ್ತಿದ್ದನು.

   ಇದಲ್ಲದೆ ಭೂತಕ್ರಿಯೆಯನ್ನು ಪಕ್ಷಾರ್ಥದಲ್ಲಿ (Conditional) ಹೇಳುವದಕ್ಕೆ ಜನರು ಸಾಧಾರಣವಾಗಿ ಈ ಸಂಯುಕ್ತಭೂತರೂಪವನ್ನು ಪ್ರಯೋಗಿಸುವರು. ಉದಾ: ನಾನು ನಿನ್ನೆ ಬರುತ್ತಿದ್ದೆನು; (ಆದರೆ ಮಳೆ ಆದ ಕಾರಣ ಬರಲಿಲ್ಲ).

   ಇದಕ್ಕೆ ಬದಲಾಗಿ ಕೆಲವರು ಪಕ್ಷಾರ್ಥದಲ್ಲಿ ಭವಿಷ್ಯತ್ ಆಖ್ಯಾತರೂಪಗಳನ್ನು, ಅಥವಾ ಭಾವರೂಪಕ್ಕೆ ಅನುಬಂಧಿಸಿದ ಭೂತ ಸಹಾಯಕ್ರಿಯೆಯನ್ನು ಪ್ರಯೋಗಿಸುವರು. ಉದಾ: ನಿನ್ನೆ ಬರುವೆನು, ಆದರೆ ಮಳೆ ಆದಕಾರಣ ಬರಲಿಲ್ಲ; ಅಥವಾ ನಿನ್ನೆ ಬರಲಿದ್ದೆನು—ಇತ್ಯಾದಿ.

2. ಭೂತನ್ಯೂನದಿಂದ ಹುಟ್ಟಿದ ಸಂಯುಕ್ತಕ್ರಿಯಾಪದಗಳು ಶುದ್ಧ ಭೂತಕ್ರಿಯಾಪದಕ್ಕೆ ಮೀರಿದ ಕಾಲವಿಶೇಷಗಳನ್ನು ಹೇಳುತ್ತವೆ. ಹ್ಯಾಗಂದರೆ: ಭೂತನ್ಯೂನಕ್ಕೆ ವರ್ತಮಾನ ಸಹಾಯಕ್ರಿಯಾಪದ ಅನುಬಂಧಿಸುವದರಿಂದ (1) "ಸಮಾಪ್ತ ಭೂತಕಾಲ" (Perfect) ಹೇಳುವ ರೂಪಗಳೂ,

(2) ಭೂತ ಸಹಾಯಕ್ರಿಯಾಪದ ಅನುಬಂಧಿಸುವದರಿಂದ "ಅತೀತಭೂತಕಾಲ" (Pluperfect) ಹೇಳುವ ರೂಪಗಳೂ, (3) ಭವಿಷ್ಯತ್ತಿನ ಸಹಾಯಕ್ರಿಯಾಪದಗಳನ್ನು ಅನುಬಂಧಿಸುವದರಿಂದ "ಅಪರೋಕ್ಷಭೂತಕಾಲ" (Past Future) ಹೇಳುವ ರೂಪಗಳೂ ಹುಟ್ಟುವವು. ಉದಾ:

1. ನಾನು ಆ ಕೆಲಸ ಮುಗಿಸಿದ್ಧೇನೆ; ಊಟ ಮಾಡಿದ್ಧೇನೆ.
2. ನಾನು ಅಲ್ಲಿಗೆ ಬಂದಾಗ ಅವನು ಹೋಗಿದ್ದನು.
3. ಮೊಮ್ಮಗನು ಹುಟ್ಟುವದಕ್ಕೆ ಮುಂಚೆ ಅಜ್ಜನು ಸತ್ತಿರುವನು.

3. ನಿಷೇಧನ್ಯೂನಕ್ಕೆ ಸಹಾಯಕ್ರಿಯಾಪದ ಅನುಬಂಧಿಸುವದರಿಂದ ಹುಟ್ಟಿದ ಸಂಯುಕ್ತರೂಪಗಳು ಸಾಧಾರಣ ನಿಷೇಧಕ್ರಿಯಾಪದಗಳಿಗೆ ಮೀರಿದ ಕಾಲವಿಶೇಷಗಳನ್ನು ಹೇಳುವವು. ಉದಾ: ಮಾಡದೆ ಇರುತ್ತಾನೆ, [ಮಾಡಧಿರುತ್ತಾನೆ]; ಹೋಗದೆ ಇದ್ದನು, [ಹೋಗದಿದ್ದನು]; ಬಾರದೆ ಇರುವನು [ಬಾರದಿರುವನು].

ಅನುಬಂಧಕ್ರಿಯಾಪದಗಳ ಪ್ರಯೋಗ (Uses of the Auxiliary Verbs).

115. ಅನುಬಂಧಕ್ರಿಯಾಪದಗಳು ಯಾವವು?

ಮೇಲೆ ವಿವರಿಸಿದ ಸಂಯುಕ್ತಕ್ರಿಯಾಪದಗಳಲ್ಲಿ ಸಹಾಯಕ್ರಿಯೆಗಳಾಗಿ ನ್ಯೂನಗಳಿಗೆ ಅನುಬಂಧಿತವಾಗುವ "ಇರು" ಧಾತುವಿನ ರೂಪಗಳು ಅಲ್ಲದೆ ಇನ್ನು ಬೇರೆ ಕೆಲವು ಧಾತುಗಳ ರೂಪಗಳು ಮತ್ತು ಕೆಲವು ಊನಕ್ರಿಯಾಪದಗಳು ಸಹಾಯಕ್ರಿಯಾಪದಗಳಾಗಿ ಪ್ರಯೋಗಿಸುವದರಲ್ಲಿ ಮುಖ್ಯವಾಗಿ ಧಾತುಗಳ ಭಾವರೂಪಗಳಿಗೆ ಅನುಬಂಧಿತವಾಗುವವು. ಅವು ಯಾವವಂದರೆ—

"ಇಲ್ಲ [ಇಲ್ಲವು, ಇಲ್ಲಾ]" ಎಂಬದು ಅಭಾವಾರ್ಥದಲ್ಲಿ ನಾಮ ಪದಗಳಿಗೆ ಅಲ್ಲದೆ ಧಾತುಗಳ ಭಾವರೂಪಕ್ಕೂ ಕ್ರಿಯಾನಾಮರೂಪಗಳಿಗೂ ಅನುಬಂಧವಾಗುವದು. ಉದಾ: ಮಾಡಲಿಲ್ಲ; ಮಾಡುವದಿಲ್ಲ; ಮಾಡಿದ್ದಿಲ್ಲ.

"ಆಪೆನು, ಬಲ್ಲೆನು" ಇತ್ಯಾದಿ ಮತ್ತು ಅವುಗಳ ನಿಷೇಧರೂಪಗಳಾದ "ಆರೆನು, ಅರಿಯೆನು" ಇತ್ಯಾದಿ ಶಕ್ಯಾರ್ಥದಲ್ಲಿ ಧಾತುಗಳ ಭಾವರೂಪಕ್ಕೆ ಅನುಬಂಧವಾಗುವವು. ಉದಾ: ಮಾಡಲಾಪೆನು [=ಮಾಡಲಿಕ್ಕೆ ಬೇಕಾದ ಶಕ್ತಿ ಉಂಟು]; ಮಾಡ ಬಲ್ಲೆನು [=ಮಾಡಲಿಕ್ಕೆ ಬೇಕಾದ ತಿಳುವಳಿಕೆ ಉಂಟು]; ಮಾಡಲಾರೆನು; ಮಾಡಲರಿಯೆನು.

"ಬಹುದು [=ಬರುವದು], ಆಗುವದು" ಇತ್ಯಾದಿ ಮತ್ತು ಅವುಗಳ ನಿಷೇಧರೂಪಗಳಾದ "ಬಾರದು, ಆಗದು, ಕೂಡದು" ಎಂಬಿವು ಮುಂದೆ(120ನೇ ಉತ್ತರದಲ್ಲಿ) ವಿವರವಾಗುವ ಭಾವಿ ಅನ್ವಯಪ್ರಯೋಗದಲ್ಲಿ ಶಕ್ಯಾರ್ಥ ಹೇಳುವವು. ಉದಾ: ಮಾಡ ಬಹುದು [=ಮಾಡಲಿಕ್ಕೆ ಏನೂ ಅಡ್ಡಿ ಇಲ್ಲ]; ಮಾಡ ಬಾರದು [=ಮಾಡಲಿಕ್ಕೆ ಅಡ್ಡಿ ಉಂಟು]; ಮಾಡ ಕೂಡದು [=ಮಾಡಲಿಕ್ಕೆ ಅನುವು ಇಲ್ಲ].

"ಒಲ್ಲೆನು" ಇತ್ಯಾದಿ ಆಶಂಸಾರ್ಥಕನಿಷೇಧರೂಪವಾಗಿ ಧಾತುಗಳ ಭಾವರೂಪಕ್ಕೆ ಅನುಬಂಧವಾಗುವದು. ಉದಾ: ಮಾಡಲೊಲ್ಲೆನು [=ಮಾಡಲಿಕ್ಕೆ ಮನಸ್ಸಿಲ್ಲ].

"ಬೇಕು" ಎಂಬದು ಮತ್ತು ಅದರ ನಿಷೇಧರೂಪವಾದ "ಬೇಡ" ಎಂಬದು ವಿಧ್ಯರ್ಥದಲ್ಲಿ ಸಹಾಯಕ್ರಿಯಾಪದಗಳಾಗಿ ಪ್ರಯೋಗವಾಗುವವು. ಉದಾ: ಮಾಡಬೇಕು [=ಮಾಡಲಿಕ್ಕೆ ಅಗತ್ಯ]; ಮಾಡಬೇಡ [=ಮಾಡದೆ ಇರು].

ಇದಕ್ಕೆ ಸಮಾನವಾದ ಅರ್ಥವನ್ನು ಭಾವಿ ಅನ್ವಯ ಪ್ರಯೋಗದಲ್ಲಿ "ತಕ್ಕದ್ದು" ಎಂಬ ಸಹಾಯಕ್ರಿಯಾ ಪದವು ಹೇಳುವದು. ಉದಾ: ಮಾಡತಕ್ಕದ್ದು.

"ಕೊಡು, ಗೊಡಿಸು, ಈಸು" ಎಂಬ ಧಾತುರೂಪಗಳು "ಅಪ್ಪಣೆ ಕೊಡು" ಎಂಬ ಅರ್ಥದಲ್ಲಿ ಸಹಾಯಕ್ರಿಯಾ ಪದಗಳಾಗಿ ಧಾತುಗಳ ಭಾವರೂಪಗಳಿಗೆ ಪರವಾಗುವವು. ಉದಾ: ಮಾಡಕೊಡು=ಮಾಡಗೊಡಿಸು=ಮಾಡಲೀಸು [=ಮಾಡಲಿಕ್ಕೆ ಅಪ್ಪಣೆ ಕೊಡು].

"ಮಾಡು" ಎಂಬ ಧಾತುರೂಪಗಳು ಪ್ರೇರಣಾರ್ಥದಲ್ಲಿ ಸಹಾಯಕ್ರಿಯಾಪದಗಳಾಗಿ ಪ್ರಯೋಗವಾಗುವವು. ಉದಾ: ಅವನನ್ನು ಹೋಗ ಮಾಡು [=ಅವನನ್ನು ಹೋಗುವ ಹಾಗೆ ಮಾಡು].

ಈ ಪ್ರಯೋಗವು ಹಿಂದೆ (68ನೇ ಉತ್ತರದ 3ರಲ್ಲಿ) ವಿವರಿಸಿದ "ಇಸು" ಪ್ರತ್ಯಯದ ಪರಕರ್ತೃಕ ಮತ್ತು ಪ್ರಯೋಜಕಾರ್ಥಕ ಅನುಬಂಧನೆಗೆ ಸಮಾನವಾಗುವದು. ಉದಾ: ಕೂಸನ್ನು ನಡಿಸು=ಕೂಸನ್ನು ನಡಿಯ ಮಾಡು; ಹುಡುಗನಿಂದ ಆ ಪುಸ್ತಕ ಓದಿಸು=ಹುಡುಗನಿಂದ ಆ ಪುಸ್ತಕ ಓದ ಮಾಡು

"ಬಹುಮಾನಾರ್ಥ"ದಲ್ಲಿ ಇಸು ಪ್ರತ್ಯಯವನ್ನು ಪ್ರಯೋಗಿಸುವ ರೂಢಿಯುಂಟು. ಉದಾ: ನಾಲ್ಕು ರೂಪಾಯಿಗಳನ್ನು ಕೊಡಿಸಿರಿ; ಇತ್ತಿತ್ತ ದಯ ಮಾಡಿಸಿ, (-ಸಿರಿ); ಕ್ಷೇಮಕ್ಕೆ ಬರಸಿಕೊಳ್ಳುಹಿಸಿರಿ.

"ಪಡು" ಎಂಬ ಧಾತುರೂಪಗಳು ಕರ್ಮಣಿ ಅನ್ವಯ ಪ್ರಯೋಗದಲ್ಲಿ ಸಹಾಯಕ್ರಿಯಾಪದಗಳಾಗಿ ವ್ಯವಹರಿಸುವವು.

(ಇದರ ವಿವರ ಮುಂದೆ 119ನೇ ಉತ್ತರದಲ್ಲಿ ನೋಡು.)

ಉಪಕ್ರಿಯಾಪದಗಳು (Supplemental Verbs).

116. ಸಹಾಯಕ್ರಿಯಾಪದಗಳಿಗೆ ಸಂಬಂಧವಾದ ಉಪಕ್ರಿಯಾಪದಗಳು ಯಾವವು?

ಅನುಬಂಧಕ್ರಿಯಾಪದಗಳು ಧಾತುಗಳ ಭಾವರೂಪಗಳ ಮೇಲೆ ಬಂದು ನಾನಾ ಅರ್ಥವಿಶೇಷಗಳನ್ನು ಹೇಳುವ ಪ್ರಕಾರ "ಕೊಳ್ಳು, ಕೊಡು, ಆಡು, ಬಿಡು, ಹಾಕು, ಇಡು, ಹೋಗು, ಬರು" ಮುಂತಾದ ಧಾತುರೂಪಗಳು ಬೇರೆ ಕ್ರಿಯಾಪದಗಳ ನ್ಯೂನರೂಪಗಳಿಗೆ ಉಪಕ್ರಿಯಾಪದಗಳಾಗಿ ಪ್ರಯುಕ್ತವಾಗುವವು. ಅವುಗಳು ಹೇಳುವ ಅರ್ಥವಿಶೇಷಗಳು ಯಾವವಂದರೆ—

"ಕೊಳ್ಳು" ಎಂಬ ಉಪಕ್ರಿಯಾಪದದಿಂದ ನ್ಯೂನಕ್ರಿಯೆಯನ್ನು ನಡಿಸಿದವನು ಅದನ್ನು ತನ್ನ ಸ್ವಂತ ಪ್ರಯೋಜನಕ್ಕೆ ನಡಿಸಿದನೆಂದು ಕಾಣಿಸುವದು. ಉದಾ: ಮಾಡಿಕೊಳ್ಳು; ಕಲಿತುಕೊಳ್ಳು; ನೋಡಿಕೊಳ್ಳು. ಈ ರೂಪವು ಸಂಸ್ಕೃತದಲ್ಲಿ ಆತ್ಮನೇಪದಕ್ಕೆ ಸರಿಬೀಳುತ್ತದೆ.

"ಕೊಡು" ಎಂಬ ಉಪಕ್ರಿಯಾಪದದಿಂದ ನ್ಯೂನಕ್ರಿಯೆಯನ್ನು ನಡಿಸಿದವನು ಅದನ್ನು ಮತ್ತೊಬ್ಬರ ಪ್ರಯೋಜನಕ್ಕೆ ನಡಿಸಿದನೆಂದು ಕಾಣಿಸುವದು. ಉದಾ: ಚಿತ್ರಗಾರನು ಅರಸನಿಗೆ ಗೊಂಬೆ ಬರೆದುಕೊಟ್ಟನು.

"ಆಡು" ಎಂಬ ಉಪಕ್ರಿಯಾಪದದಿಂದ ನ್ಯೂನಕ್ರಿಯೆಯು ಈ ಕಡೆಗೂ ಆ ಕಡೆಗೂ ನಡಿಯಿತೆಂದು ಕಾಣಿಸುವದು. ಉದಾ: ತಿರುಗಾಡು; ತೂಗ್ಯಾಡು; ಬತಿದಾಡು; ಬಯ್ದಾಡು; ಓಡ್ಯಾಡು.

"ಬಿಡು, ಹಾಕು, ಇಡು" ಎಂಬ ಉಪಕ್ರಿಯಾಪದಗಳಿಂದ ಸಕರ್ಮಕನ್ಯೂನಕ್ರಿಯೆಯನ್ನುಸಂಪೂರ್ಣಮಾಡಿ ನಡಿಸಲಾಯಿತೆಂದು ಕಾಣಿಸುವದು. ಉದಾ: ಮಾರಿಬಿಡು; ತೆಗದುಹಾಕು; ಬಚ್ಚಿಡು.

"ಹೋಗು" ಎಂಬ ಉಪಕ್ರಿಯಾಪದವು ನ್ಯೂನಕ್ರಿಯೆಗೆ ಪ್ರಯುಕ್ತವಾದಲ್ಲಿ ನ್ಯೂನಕ್ರಿಯೆಯು ಸಂಪೂರ್ಣವಾಯಿತೆಂದು ಕಾಣಿಸುವದು. ಉದಾ: ತಪ್ಪಿಹೋದನು; ಕೆಟ್ಟುಹೋದವು; ಪುಸ್ತಕವು ಕಳೆದುಹೋಯಿತು; ನಾಯಿಗಳೆಲ್ಲಾ ಕೊಂದುಹೋದವು; ಹಣ ಕೊಟ್ಟುಹೋಯಿತು.

"ಬರು, ಹೋಗು" ಎಂಬ ಉಪಕ್ರಿಯಾಪದಗಳು ಪ್ರಯುಕ್ತವಾದಲ್ಲಿ ನ್ಯೂನಕ್ರಿಯೆಯು ಬಹು ದಿವಸದಿಂದ ನಡದು ಬಂತೆಂದು ಅಥವಾ ಬಹು ದಿವಸಗಳ ಮಟ್ಟಿಗೂ ನಡಿಯುತ್ತಾ ಇತ್ತೆಂದು ಕಾಣಿಸುವದು. ಉದಾ: ಹೇಳುತ್ತಾಬಂದೆನು; ಮಾಡಿಬಂದನು; ಕೇಳದೆಹೋದಳು.

ಕ್ರಿಯಾಪದಗಳ ಅನ್ವಯಪ್ರಯೋಗಗಳು

(The Verbal Voices).

117. ವಾಕ್ಯಗಳಲ್ಲಿ ಕ್ರಿಯಾಪದವು ವಾಕ್ಯದ ಉದ್ದೇಶಪದಕ್ಕೆ ಅನ್ವಿತವಾಗುವ ಪ್ರಯೋಗಗಳು ಎಷ್ಟು?

"ಕರ್ತರಿಪ್ರಯೋಗ" (Active voice), "ಕರ್ಮಣಿಪ್ರಯೋಗ" (Passive voice), "ಭಾವಿಪ್ರಯೋಗ" (Impersonal voice), "ಆತ್ಮನೇಪದಪ್ರಯೋಗ" (Middle voice) ಎಂಬ ನಾಲ್ಕು ವಿಧದಿಂದ ಆಖ್ಯಾತಕ್ರಿಯಾಪದಗಳನ್ನು ತಮ್ಮ ಉದ್ದೇಶಪದಗಳಿಗೆ ಅನ್ವಯಿಸುವದು ಉಂಟು.

118. ಕರ್ತರಿಪ್ರಯೋಗವು ಹ್ಯಾಗೆ?

ಕ್ರಿಯೆಯನ್ನು ಮಾಡುವ ವಸ್ತು ಅದರ "ಕರ್ತೃ"ವೆಂದೆನ್ನಿಸುವದು. ಆ ಕರ್ತೃವನ್ನು ಹೇಳುವ ಪದವು "ಕರ್ತೃಪದ"ವೆಂದು ವರ್ತಿಸುವದು. ಆದರೆ ಕರ್ತೃಪದವನ್ನು ವಾಕ್ಯದಲ್ಲಿ ಉದ್ದೇಶ

ಮಾಡಿ, ಅದರ ಪುರುಷ ಲಿಂಗ ವಚನಕ್ಕೆ ಕ್ರಿಯಾಪದದ ಆಖ್ಯಾತ ಪ್ರತ್ಯಯವನ್ನು ವಿಧೇಯ ಮಾಡುವದೇ "ಕರ್ತರಿಪ್ರಯೋಗ"ವೆಂದು ವ್ಯವಹರಿಸುವದು. ಉದಾ: ಅರಸನು ಆಳುತ್ತಾನೆ.

119. ಕರ್ಮಣಿಪ್ರಯೋಗವು ಹ್ಯಾಗೆ?

ಕ್ರಿಯೆಯನ್ನು ಪಡುವ ವಸ್ತು "ಕರ್ಮ"ವೆಂದೆನ್ನಿಸುವದು, ಅದನ್ನು ಹೇಳುವ ಪದವೇ "ಕರ್ಮಪದವು". ಉದಾ: ಅರಸನು ರಾಜ್ಯವನ್ನು ಆಳುತ್ತಾನೆ.—ಈ ವಾಕ್ಯದಲ್ಲಿ "ರಾಜ್ಯವನ್ನು" ಎಂಬದು ಕರ್ಮಪದವು; ಯಾಕಂದರೆ ರಾಜ್ಯವು ಆಳುವದನ್ನು ಪಡುತ್ತದೆ, ಅಂದರೆ ಆಳುವದರ ಫಲವನ್ನು ಅನುಭವಿಸುತ್ತದೆ.

ಆದರೆ ಕರ್ಮಪದವನ್ನು ವಾಕ್ಯದ ಉದ್ದೇಶ ಮಾಡಿ, ಅದರ ಪುರುಷ ಲಿಂಗ ವಚನಕ್ಕೆ ಕ್ರಿಯಾಪದದ ಆಖ್ಯಾತಪ್ರತ್ಯಯವನ್ನು ವಿಧೇಯ ಮಾಡುವದೆ "ಕರ್ಮಣಿಪ್ರಯೋಗ"ವೆಂದು ವ್ಯವಹರಿಸುವದು. ಇದರಲ್ಲಿ ಕ್ರಿಯೆಯನ್ನು ಹೇಳುವ ಧಾತುವಿನ ಭಾವರೂಪಕ್ಕೆ "ಪಡು" ಎಂಬ ಸಹಾಯಕ್ರಿಯಾಪದವು ಅನುಬಂಧವಾಗಿದ್ದು ಉದ್ದೇಶಪದದ ಪುರುಷ ಲಿಂಗ ವಚನವನ್ನು ಅನುಸರಿಸುವ ಆಖ್ಯಾತಪ್ರತ್ಯಯವನ್ನು ಹೊಂದುವದು. ಉದಾ: ಅರಸನಿಂದ ರಾಜ್ಯವು ಆಳಲ್ಪಡುತ್ತದೆ.

ಮತ್ತು "ಹೋಗು" ಎಂಬ ಧಾತುವಿನ ನಪುಂಸಕ ಆಖ್ಯಾತರೂಪಗಳನ್ನು ಭೂತನ್ಯೂನ ರೂಪಗಳಿಗೆ ಜೋಡಿಸುವದರಿಂದ ಕರ್ಮಣ್ಯರ್ಥವಾಗಿ ಪ್ರಯೋಗಿಸುವ ವಾಡಿಕೆಯುಂಟು. ಉದಾ: ನಾಯಿಗಳೆಲ್ಲಾ ಕೊಂದುಹೋದವು; ಹಣ ಕೊಟ್ಟುಹೋಯಿತು.

ಕೆಲವು ಧಾತುಗಳ ಭೂತನ್ಯೂನರೂಪಗಳಿಗೆ "ಅದೆ" ಎಂಬ ಕ್ರಿಯೆಯನ್ನು ಕೂಡಿಸುವದರಿಂದ ಕರ್ಮಣ್ಯರ್ಥ ಕೊಡುತ್ತದೆ. ಉದಾ: ನನಗೆ ಅಧಿಕಾರ ಕೊಟ್ಟದೆ; ಪುಸ್ತಕ ಅವನಿಗೆ ತೋರಿಸಿಯದೆ.

120. ಭಾವಿಪ್ರಯೋಗವು ಹ್ಯಾಗೆ?

ಇದರಲ್ಲಿ ಕರ್ತೃಪದವೂ ಅಲ್ಲಾ, ಕರ್ಮಪದವೂ ಅಲ್ಲಾ, ಅವಕ್ಕೆ ಅನ್ವಿತವಾದ ಕ್ರಿಯೆಯನ್ನು ಹೇಳುವ ಧಾತುವಿನ ಭಾವರೂಪವು

ಅಥವಾ ಕ್ರಿಯಾನಾಮವು ವಾಕ್ಯದ ಉದ್ದೇಶವೇ. ಅದು ಕಾರಣ ಅದಕ್ಕೆ ಅನುಬಂಧವಾದ ಸಹಾಯಕ್ರಿಯಾಪದಕ್ಕೆ ಯಾವಾಗಲು ನಪುಂಸಕೈಕವಚನದ ಪ್ರತ್ಯಯ ಬರುವದು. ಉದಾ: ಜ್ಞಾನ ಅರಸನಿಂದ ರಾಜ್ಯವನ್ನು ಆಳಲಾಗುವದು; ದುಷ್ಟ ಅರಸನಿಂದ ರಾಜ್ಯವನ್ನು ಆಳುವದಾಗದು.

"ಆಗುವದು, ಆಯಿತು, ಆದೀತು, ಆಗದು, ಆಗುವದಿಲ್ಲ, ಆಗಲಿಲ್ಲ, ಬಹುದು, ಬಾರದು, ಕೂಡದು, ತಕ್ಕದ್ದು, ಇಲ್ಲ" ಮುಂತಾದ ನಪುಂಸಕೈಕವಚನರೂಪಗಳಾದ ಅನುಬಂಧಕ್ರಿಯಾಪದಗಳು ಧಾತುಗಳ ಭಾವರೂಪಕ್ಕೆ ಪರವಾದ ಎಲ್ಲಾ ವಾಕ್ಯಗಳಲ್ಲಿ ಭಾವಿಪ್ರಯೋಗವೆಂದು ತಿಳಿಯ ತಕ್ಕದ್ದು.

121. ಆತ್ಮನೇಪದಪ್ರಯೋಗವು ಹ್ಯಾಗೆ?

ಒಬ್ಬನು ಬೇರೆಯವನ ಕೈಯಿಂದ ಮಾಡಿಸಿದ ಕ್ರಿಯೆಯ ಫಲವನ್ನು ತಾನೇ ಅನುಭವಿಸುತ್ತಾನೆಂದು, ಅಥವಾ ಒಬ್ಬನು ಬೇರೆಯವನ ಕಡೆಯಿಂದ ಅನುಭವಿಸುವ ಕ್ರಿಯೆಗೆ ತಾನೇ ಅಪ್ಪಣೆ ಕೊಟ್ಟನೆಂದು ಹೇಳುವದಕ್ಕೆ ಧಾತುಗಳ ಭೂತನ್ಯಾಸಕ್ಕೆ "ಕೊಳ್ಳು" ಎಂಬ ಉಪಕ್ರಿಯೆಯನ್ನು ಜೋಡಿಸಿದರೆ, "ಆತ್ಮನೇಪದಪ್ರಯೋಗ"ವೆಂದು ವ್ಯವಹರಿಸುವದು. ಉದಾ: ಅರಸನಿಂದ ಪ್ರಜೆಗಳು ಆಳಿಸಿಕೊಳ್ಳುತ್ತಾರೆ; ಹುಡುಗನು ಉಪಾಧ್ಯನಿಂದ ವಿದ್ಯೆ ಕಲಿತುಕೊಳ್ಳುತ್ತಾನೆ.

---

2. ಕಾರಕಪ್ರಕರಣ. Of the Complemental Parts of Speech.

ಕಾರಕನಿರ್ಣಯ (Definition of Complements).

122. ಕಾರಕವಂದರೇನು?

ವಾಕ್ಯದಲ್ಲಿ ಆಖ್ಯಾತಪದದ ಅರ್ಥವನ್ನು ಸಂಪೂರ್ಣ ಮಾಡುವ ಪದಗಳು "ಕಾರಕಪದ"ಗಳೆಂದೆನ್ನಿಸುವವು. ಅವುಗಳು

ಹೇಳುವ ಅರ್ಥವಿಶೇಷಗಳು "ಕಾರಕಾರ್ಥ"ಗಳೆಂದು ವ್ಯವಹರಿಸುವವು.

123. ಕಾರಕಾರ್ಥಗಳು ಎಷ್ಟು ವಿಧವು?

"ಕರ್ತೃ" (Agent), "ಕರ್ಮ" (Object), "ಮೂಲ" (Source), "ಸಂಪ್ರದಾನ" (Connexion), "ಸ್ಥಾನ" (Place), "ಕಾಲ" (Time), "ರೀತಿ" (Mode), ಇವು ಆಖ್ಯಾತಗಳ ಅರ್ಥವನ್ನು ಸಂಪೂರ್ಣ ಮಾಡುವ ಮುಖ್ಯವಾದ ಕಾರಕಾರ್ಥಗಳೇ.

124. ಕರ್ತೃವಂದರೇನು?

ಕ್ರಿಯಾವಾಚಕ ಆಖ್ಯಾತಪದ ಹೇಳುವ ಕ್ರಿಯೆಯನ್ನು ಮಾಡುವ ವಸ್ತುವಾಗಲಿ ಲಕ್ಷಣವಾಚಕ ಆಖ್ಯಾತಪದ ಹೇಳುವ ಲಕ್ಷಣವನ್ನು ಧರಿಸುವ ವಸ್ತುವಾಗಲಿ "ಕರ್ತೃ" (Agent or Actor) ಎಂದು ವರ್ತಿಸುವದು. ಅದನ್ನು ಕೇಳುವದಕ್ಕೆ "ಯಾರು [ಏನು]?" ಎಂಬ ಪ್ರಶ್ನೆ ಪ್ರಯೋಗಿಸುವದು. ಉದಾ: ಅರಸನು ಆಳುತ್ತಾನೆ; ದೇವರು ಮಹೋನ್ನತನೇ.

125. ಕರ್ಮವಂದರೇನು?

ಕ್ರಿಯೆಯನ್ನು ಪಡುವ ವಸ್ತು "ಕರ್ಮ" (Object) ಎಂದೆನ್ನಿಸುವದು. ಕರ್ಮವು ಸಕರ್ಮಕಕ್ರಿಯೆಗೆ ವಿಷಯವಾದದ್ದು. ಅದನ್ನು ಕೇಳುವದಕ್ಕೆ "ಯಾರನ್ನು [ಏನನ್ನು]?" ಎಂಬ ಪ್ರಶ್ನೆ ಪ್ರಯೋಗಿಸುವದು. ಉದಾ: ಅರಸನು ರಾಜ್ಯವನ್ನು ಆಳುತ್ತಾನೆ; ದೇವರು ನಮ್ಮನ್ನು ಸಲಹುತ್ತಾನೆ.

126. ಮೂಲವಂದರೇನು?

ಕ್ರಿಯೆಯು ಯಾವದರಿಂದ ಉತ್ಪತ್ತಿ ಆಗುವದೋ ಅದೇ ಕ್ರಿಯೆಯ "ಮೂಲ" (Source). ಅದನ್ನು ಕೇಳುವದಕ್ಕೆ "ಯಾರಿಂದ [ಯಾತರಿಂದ]?" ಎಂಬ ಪ್ರಶ್ನೆ ಪ್ರಯೋಗಿಸುವದು. ಮತ್ತು ಮೂಲಕಾರಕಾರ್ಥಕ್ಕೆ "ಕರಣ" (Means), "ಕಾರಣ" (Cause) ಮೊದಲಾದ ನಾನಾ ಅರ್ಥವಿಶೇಷಗಳು ಉಂಟು.

127. ಸಂಪ್ರದಾನವಂದರೇನು?

ಕ್ರಿಯೆಯೂ ಅದರ ಫಲವೂ ಯಾವದಕ್ಕೆ ಕೂಡುವದೋ ಅದೇ "ಸಂಪ್ರದಾನಕಾರಕ" (Connexion). ಅದನ್ನು ಕೇಳುವದಕ್ಕೆ "ಯಾರಿಗೆ [ಯಾತಕ್ಕೆ, ಯಾಕೆ]?" ಎಂಬ ಪ್ರಶ್ನೆ ಪ್ರಯೋಗಿಸುವದು. ಸಂಪ್ರದಾನಕಾರಕಾರ್ಥಕ್ಕೆ ನಾನಾ ವಿಶೇಷಗಳುಉಂಟು. ಉದಾ: ಹುಡುಗರಿಗೆ ವಿದ್ಯೆ ಹಿಡಿಯುವದು.

128. ಸ್ಥಾನಕಾರಕಾರ್ಥವು ಹ್ಯಾಗೆ?

ಕ್ರಿಯೆ ಸಂಭವಿಸಿದ ಸ್ಥಾನವನ್ನು ಹೇಳುವ ಪದಗಳಿಗೆ "ಸ್ಥಾನಕಾರಕಾರ್ಥವು" (Place) ಬರುವದು. ಅದನ್ನು ಕೇಳುವ ಪ್ರಶ್ನೆಯು "ಎಲ್ಲಿ?" ಎಂಬದು. ಉದಾ: ಹುಡುಗರು ಶಾಲೆಯಲ್ಲಿ ಕಲಿಯುತ್ತಾರೆ; ನಾವು ಲೋಕದಲ್ಲಿ ಇದ್ದೇವೆ; ಆತ್ಮದಲ್ಲಿ ಧ್ಯಾನಿಸು.

ಇದಲ್ಲದೆ "ಬರು, ಹೋಗು, ನಡೆ, ಹಾರು" ಮುಂತಾದ ಗಮನಾರ್ಥಕಕ್ರಿಯೆಗಳೊಡನೆ "ಎಲ್ಲಿಂದ?" ಎಂಬ ಪ್ರಶ್ನೆಗೆ ಪ್ರತ್ಯುತ್ತರವಾಗಿ ಬಿಟ್ಟ ಸ್ಥಾನವನ್ನು ಅಥವಾ ಹೊರಟ ದಿಕ್ಕನ್ನು (Direction from) ಹೇಳುವ ದಿಗ್ವಾಚಕಪದಗಳು ಸೇರುವವು. ಉದಾ: ಊರಿನಿಂದ ಬೀಗರು ಬಂದರು; ಮೋಡಗಳಿಂದ ಮಳೆ ಉದುರುವದು; ಬಾಯಿಂದ ಮಾತುಗಳು ಹೊರಡುತ್ತವೆ; ಅವನು ಪೂರ್ವ ದಿಕ್ಕಿನಿಂದ ಬಂದನು.

ಮತ್ತು ಅದೇ ಗಮನಾರ್ಥಕಕ್ರಿಯೆಗಳೊಡನೆ "ಎಲ್ಲಿಗೆ?" ಎಂಬ ಪ್ರಶ್ನೆಗೆ ಪ್ರತ್ಯುತ್ತರವಾಗಿ ಮುಟ್ಟುವ ಸ್ಥಾನವನ್ನು ಅಥವಾ ಎದುರಿರುವ ದಿಕ್ಕನ್ನು (Direction to) ಹೇಳುವ ದಿಗ್ವಾಚಿಗಳು ಸೇರುವವು. ಉದಾ: ನದಿಗಳು ಸಮುದ್ರಕ್ಕೆ ಹರಿಯುತ್ತವೆ; ಹೊಗೆ ಆಕಾಶಕ್ಕೆ ಏರುವದು; ಶಿಕ್ಷೆಯನ್ನು ಮನಸ್ಸಿಗೆ ತರಬೇಕು; ಅವನು ಪಶ್ಚಿಮಕ್ಕೆ ಹೋದನು.

129. ಕಾಲಕಾರಕಾರ್ಥವು ಹ್ಯಾಗೆ?

"ಎಂದು?" ಎಂಬ ಪ್ರಶ್ನೆಗೆ ಪ್ರತ್ಯುತ್ತರವಾಗಿ ಕಾಲವಾಚಕ ನಾಮಪದಗಳ ಪ್ರಥಮೆ, ಸಪ್ತಮಿ, ವಿಭಕ್ತಿಗಳು ಕ್ರಿಯೆ ಸಂಭವಿಸಿದ ಸಮಯವನ್ನು (Time) ಹೇಳುವವು. ಉದಾ: ಒಂದು ದಿನ ಒಬ್ಬ ಸಾವುಕಾರನು ಊರಿಗೆ ಹೋದನು; ಅದೇ ದಿನದ ರಾತ್ರಿಯಲ್ಲಿ ಕಳ್ಳರು ಅವನ ಮನೆಗೆ ಹೊಕ್ಕರು.

ಮತ್ತು ಕೃನ್ನಾಮಗಳ ಪ್ರಥಮಾರೂಪಕ್ಕೆ ಅವಧಾರಣಾರ್ಥಕ "ಏ"ಕಾರವನ್ನು ಕೂಡಿಸಿ ಕಾಲಕಾರಕಾರ್ಥವಾಗಿ ಪ್ರಯೋಗಿಸುವ ವಾಡಿಕೆಯುಂಟು. ಉದಾ: ನಾನು ಊರಿಂದ ಬಂದವನೇ ಜ್ವರದಲ್ಲಿ ಬಿದ್ದೆನು.

"ಎಂದಿನಿಂದ?" ಎಂಬ ಪ್ರಶ್ನೆಗೆ ಪ್ರತ್ಯುತ್ತರವಾಗಿ ತೃತೀಯಾ ವಿಭಕ್ತಿಯು ಕ್ರಿಯೆಯ ಆರಂಭವನ್ನು (Beginning) ಹೇಳುವದು. ಉದಾ: ಕೆಲವು ಪ್ರಾಣಿಗಳು ಹುಟ್ಟಿದ ದಿವಸದಿಂದ ಹಾರ್‍ಯಾಡುವವು; ಚಿಕ್ಕತನದಿಂದ ಸುಬುದ್ಧಿ ಕಲಿಯ ಬೇಕು; ನಿನ್ನೆಯಿಂದ ಮಳೆ ಬರುತ್ತಾ ಇದೆ.

"ಎಂದಿನ ತನಕ?=ಎಲ್ಲಿ ತನಕ?" ಎಂಬ ಪ್ರಶ್ನೆಗಳು ಕ್ರಿಯೆಯ ಅಂತವನ್ನು (End) ಕೇಳುವವು. ಉದಾ: ತಾವು ದೊಡ್ಡವರಾಗುವ ತನಕ ತಂದೆತಾಯಿಗಳು ತಮಗೆ ಮಾಡಿದ ಉಪಕಾರಗಳನ್ನು ಮಕ್ಕಳು ಸಾಯುವ ಘಳಿಗೆಯ ಪರ್ಯಂತಕ್ಕೂ ಮರೆಯ ಬಾರದು.

"ಎಷ್ಟು ಕಾಲ" (=ಎಷ್ಟು ಹೊತ್ತು)?" ಎಂಬ ಪ್ರಶ್ನೆಯು ಕ್ರಿಯೆಯು ನಡೆದ ಕಾಲದ ಪರಿಮಾಣವನ್ನು (Duration) ಕೇಳುವದು. ಅದಕ್ಕೆ ಪ್ರತ್ಯುತ್ತರವಾಗಿ ಪ್ರಥಮಾವಿಭಕ್ತಿ ಪ್ರಯೋಗವಾಗುವದು. ಉದಾ: ಕಪ್ಪೆಗಳು ಬಿಸಲುಕಾಲವೆಲ್ಲಾ ನೆಲದಲ್ಲಿ ಅಡಗಿರುತ್ತವೆ; ಹುಡುಗರು ಹಗಲೆಲ್ಲಾ ಓದುತ್ತಾರೆ.

130. ರೀತಿಕಾರಕಾರ್ಥವು ಹ್ಯಾಗೆ?

ಕ್ರಿಯೆ ಸಂಭವಿಸಿದ ಬಗೆಯನ್ನು ಹೇಳುವ ಪದಗಳೆಲ್ಲಾ ರೀತಿಕಾರಕಾರ್ಥವನ್ನು ಹೇಳುವವು. ಅದನ್ನು ಕೇಳುವ ಪ್ರಶ್ನೆ "ಹ್ಯಾಗೆ?" ಎಂಬದು. ಉದಾ: ಅವಕಾಶದಿಂದ ಬಂದನು; ವೇಗದಿಂದ ಹೋದನು; ತೀವ್ರವಾಗಿ ಸತ್ತನು; ಸುಮ್ಮನೆ ಅವನನ್ನು ಮರೆತುಬಿಟ್ಟರು.

131. ಕಾರಕಾರ್ಥಗಳನ್ನು ಹೇಳುವ ಶಬ್ದಗಳು ಯಾವವು?

ಮೇಲೆ ಸಂಕ್ಷೇಪವಾಗಿ ಸೂಚಿಸಿದ ನಾನಾ ವಿಧದ ಕಾರಕಾರ್ಥಗಳನ್ನು ವಾಕ್ಯಗಳಲ್ಲಿ ಹೇಳುವದಕ್ಕೆ ಕಾರಕವಿಭಕ್ತಿಗಳೂ ವಿಭಕ್ತ್ಯರ್ಥಕಾವ್ಯಯಗಳಾದ ಉಪಸರ್ಗಗಳೂ ಕ್ರಿಯಾವಿಶೇಷಣಾವ್ಯಯಗಳೂ ಅವ್ಯಯಕ್ರಿಯಾಪದಗಳೂ ಪ್ರಯೋಗವಾಗುವವು.

ಕಾರಕವಿಭಕ್ತಿಗಳ ಪ್ರಯೋಗ (Uses of the Complemental Cases).

132. ಕಾರಕವಿಭಕ್ತಿಗಳು ಯಾವವು?

"ನಾಮಪದ, ಸರ್ವನಾಮ, ವಿಶೇಷಣನಾಮ, ಕೃನ್ನಾಮ, ಕ್ರಿಯಾನಾಮ" ಈ ಐದು ವಿಧದ ನಾಮಗಳಿಗೆ ಬರುವ ವಿಭಕ್ತಿಗಳಲ್ಲಿ ಪ್ರಥಮೆ, ದ್ವಿತೀಯೆ, ತೃತೀಯೆ, ಚತುರ್ಥಿ, ಸಪ್ತಮಿ, ಈ ಐದು ವಿಭಕ್ತಿಗಳು "ಕಾರಕವಿಭಕ್ತಿ"ಗಳೆಂದು ವರ್ತಿಸುವವು. ಸಂಬೋಧನಾವಿಭಕ್ತಿಯು ಬೇರೆಯವರನ್ನು ಕರೆಯುವ ಸಂಬುದ್ಧ್ಯರ್ಥದಲ್ಲಿ ಹೊರತು, ಆಖ್ಯಾತಕ್ಕೆ ಅನ್ವಿತವಾಗದು. ಸಂಬಂಧವೆಂಬ ಷಷ್ಠೀವಿಭಕ್ತಿಯು ಕಾರಕಾರ್ಥ ಹೇಳದೆ, ವಿಶೇಷಣಪದವಾಗಿ ಪ್ರಯೋಗವಾಗುವದು. ಪಂಚಮೀವಿಭಕ್ತಿಯೆಂದೆನ್ನಿಸುವ ಅಪಾದಾನಾರ್ಥವನ್ನು ಹೇಳುವದಕ್ಕೆ ಹೊಸಗನ್ನಡದಲ್ಲಿ ತೃತೀಯಾವಿಭಕ್ತಿ ಪ್ರಯೋಗವಾಗುವದು.

ಪ್ರಥಮಾವಿಭಕ್ತಿ (Nominative).

133. ಪ್ರಥಮಾವಿಭಕ್ತಿಯ ಪ್ರಯೋಗವು ಹ್ಯಾಗೆ?

ಅದು ಮೂರು ವಿಧವಾದದ್ದು. ಹ್ಯಾಗಂದರೆ—

1. ಉದ್ದೇಶಪದಕ್ಕೆ ಎಲ್ಲಾ ವಾಕ್ಯಗಳಲ್ಲಿ ಪ್ರಥಮಾವಿಭಕ್ತಿ ಬರುವದು. ಅದು (1) ಕರ್ತರಿಪ್ರಯೋಗದಲ್ಲಿಯೂ ಆತ್ಮನೇಪದಪ್ರಯೋಗದಲ್ಲಿಯೂ ಕರ್ತೃವನ್ನೂ, (2) ಕರ್ಮಣಿಪ್ರಯೋಗದಲ್ಲಿ ಕರ್ಮವನ್ನೂ, (3) ಭಾವಿಪ್ರಯೋಗದಲ್ಲಿ ಕ್ರಿಯೆಯ ಭಾವಾರ್ಥವನ್ನೂ ಹೇಳುವದು. ಉದಾ:

   1. ಅರಸನು ಪ್ರಜೆಗಳನ್ನು ಆಳುತ್ತಾನೆ; ಹುಡುಗನು ಉಪಾಧ್ಯಾಯನಿಂದ ವಿದ್ಯೆ ಕಲಿತುಕೊಳ್ಳುತ್ತಾನೆ.
   2. ಪ್ರಜೆಗಳು ಅರಸಿನಿಂದ ಆಳಲ್ಪಡುತ್ತಾರೆ; ದೇವರಿಂದ ಸಮಸ್ತವು ಸಂರಕ್ಷಿಸಲ್ಪಡುವದು.
   3. ದುಷ್ಟ ಅರಸನಿಂದ ರಾಜ್ಯವನ್ನು ನೆಟ್ಟಗೆ ಆಳುವದು ಆಗದು; ಸಾಳುಭೂಮಿಯಿಂದ ಸವಿನೀರು ಊರಲಾರದು.

2. ಲಕ್ಷಣವಾಚಕ ಆಖ್ಯಾತಗಳಲ್ಲಿ ಲಕ್ಷಣಪದಗಳಿಗೂ ಉತ್ತರವಿಶೇಷಣಗಳಿಗೂ ಪ್ರಥಮಾವಿಭಕ್ತಿ ಬರುವದು. ಉದಾ: ಚಿಕ್ಕವರು ದೊಡ್ಡವರು (ಆಗುತ್ತಾರೆ); ಮನುಷ್ಯರು ಬಲಹೀನರು (ಆಗಿದ್ದಾರೆ); ನಮ್ಮ ಶರೀರವು ಮಣ್ಣಿನದು; ದೇವರು ಸರ್ವಜ್ಞಾನಿ.

3. ಯಾವದೊಂದು ಕ್ರಿಯೆ ಸಂಭವಿಸಿದ ಸಮಯವನ್ನು ಸಾಧಾರಣವಾಗಿ ಹೇಳುವದಕ್ಕೆ ಪ್ರಥಮಾವಿಭಕ್ತಿ ಪ್ರಯೋಗವಾಗುವದು. ಉದಾ: ಒಂದು ದಿನ[ವು] ಒಬ್ಬ ರಾಜನು ಯುದ್ಧಕ್ಕೆ ಹೊರಟನು.

ದ್ವಿತೀಯಾವಿಭಕ್ತಿ (Accusative).

134. ದ್ವಿತೀಯಾವಿಭಕ್ತಿಯ ಪ್ರಯೋಗಗಳು ಯಾವವು?

ದ್ವಿತೀಯಾವಿಭಕ್ತಿಯು ಎರಡು ವಿಧದ ಕಾರಕಾರ್ಥಗಳನ್ನು ಹೇಳುವದು. ಹ್ಯಾಗಂದರೆ—

1. ಸಕರ್ಮಕ ಕ್ರಿಯಾಪದಗಳೊಡನೆ ಅದು ಕ್ರಿಯೆಗೆ ವಿಷಯವಾದ ಕರ್ಮವನ್ನು ಹೇಳುವದು. ಉದಾ: ಹುಡುಗರು ಪುಸ್ತಕವನ್ನು ಓದುತ್ತಾರೆ; ಅಕ್ಷರಗಳನ್ನು ಬರೆಯುತ್ತಾರೆ.
2. "ನಡೆ, ಬರು" ಮುಂತಾದ ಗಮನಾರ್ಥಕ ಕ್ರಿಯಾಪದಗಳೊಡನೆ ದ್ವಿತೀಯಾವಿಭಕ್ತಿಯು ಮಾರ್ಗದ ಪರಿಮಾಣವನ್ನು ಹೇಳುವದು. ಉದಾ: ಒಬ್ಬ ಮನುಷ್ಯನು ಒಂದು ದಿವಸದಲ್ಲಿ ಮೂರು ಗಾವುದವನ್ನು ನಡೆದು ಬಂದನು.

135. ದ್ವಿಕರ್ಮಕಕ್ರಿಯೆಗಳೊಡನೆ ದ್ವಿತೀಯಾವಿಭಕ್ತಿ ಹೇಳುವ ಅರ್ಥವಿಶೇಷಗಳು ಯಾವವು?

ಎರಡು ಕರ್ಮಗಳನ್ನು ಹೊಂದುವ ಕ್ರಿಯೆಗಳು "ದ್ವಿಕರ್ಮಕ"ಗಳೆಂದೆನ್ನಿಸಿ ನಾಲ್ಕು ವಿಧವಾಗಿವೆ. ಹ್ಯಾಗಂದರೆ—

1. "ಬೇಡು, ಕೇಳು" ಮುಂತಾದ ವಿಜ್ಞಾಪನಾರ್ಥಕ ಕ್ರಿಯೆಗಳೊಂದಿಗೆ ಪ್ರಧಾನದ್ವಿತೀಯೆ[1] ಬೇಡುವವನು ಯಾವ ಮನುಷ್ಯನನ್ನು ಬೇಡಿಕೊಳ್ಳುವನೋ ಇವನನ್ನು ಹೇಳುವದು; ಗೌಣದ್ವಿತೀಯೆ[2] ಆ ಮನುಷ್ಯನ ಕಡೆಯಿಂದ ಬೇಡುವ ಪದಾರ್ಥವನ್ನು ಹೇಳುವದು. ಉದಾ: ಶಿಷ್ಯರು ಗುರುವನ್ನು ಜ್ಞಾನವನ್ನು ಬೆಸಗೊಂಡರು.
2. "ಕೊಡು" ಮುಂತಾದ ದಾನಾರ್ಥಕ ಕ್ರಿಯೆಗಳೊಂದಿಗೆ ಪ್ರಧಾನದ್ವಿತೀಯೆ ಕೊಡುವ ಪದಾರ್ಥವನ್ನು ಹೇಳುವದು; ಗೌಣದ್ವಿತೀಯೆ ಆ ಪದಾರ್ಥವನ್ನು ಯಾವ ಭಾವನೆಯಿಂದ ಯಾವ ಪ್ರಯೋಜನಕ್ಕಾಗಿ ಕೊಡುವನೆಂಬದನ್ನು ಹೇಳುವದು.

---

1) ಮೊದಲು ಬರುವದಕ್ಕೆ ಪ್ರಧಾನದ್ವಿತೀಯೆ ಎಂದೂ } ಸಂಕೇತವು.
2) ಅನಂತರ ಬರುವದಕ್ಕೆ ಗೌಣದ್ವಿತೀಯೆ ಎಂದೂ }

ಉದಾ: ಪೂರ್ವದ ರಾಜರು ಬ್ರಾಹ್ಮಣರಿಗೆ ಸಹಸ್ರ ಆಕಳುಗಳನ್ನು ದಾನ(ವನ್ನು) ಕೊಟ್ಟರು.

3. "ಮಾಡು" ಧಾತುವಿಗೆ "ವಿಕಾರಿಸು" ಎಂಬ ಅರ್ಥ ಬರುವ ಪಕ್ಷದಲ್ಲಿ ಪ್ರಧಾನದ್ವಿತೀಯೆ ಕ್ರಿಯೆಗೆ ವಿಷಯವಾದ ವಸ್ತುವನ್ನೂ, ಗೌಣದ್ವಿತೀಯೆ ಆ ವಸ್ತುವಿಗೆ ಕ್ರಿಯೆಯಿಂದ ಬಂದ ವಿಕೃತಿಯನ್ನೂ ಹೇಳುವದು. ಉದಾ: ಕಾಗೆಯು ಕೋಗಿಲೆಯ ತತ್ತಿಯನ್ನು ಮರಿಯನ್ನು ಮಾಡುವದು.

4. ಪ್ರಯೋಜಕ ಕ್ರಿಯಾಪದಗಳೊಡನೆ ಪ್ರಧಾನದ್ವಿತೀಯೆ ಪ್ರಯೋಜಕ ಕರ್ತೃವು ಪ್ರೇರಿಸಿದ ಪ್ರಯೋಜ್ಯಕರ್ತೃವನ್ನೂ, ಗೌಣದ್ವಿತೀಯೆ ಇವನು ಮಾಡಿದ ಕ್ರಿಯೆಯ ಕರ್ಮವನ್ನೂ ಹೇಳುವದು. ಉದಾ: ಉಪಾಧ್ಯನು ಹುಡುಗರನ್ನು ಪುಸ್ತಕಗಳನ್ನು ಓದಿಸುತ್ತಾನೆ.

ತೃತೀಯಾವಿಭಕ್ತಿ (Instrumental).

136. ತೃತೀಯಾವಿಭಕ್ತಿ ಹೇಳುವ ಕಾರಕಾರ್ಥಗಳು ಯಾವವು?

ತೃತೀಯಾವಿಭಕ್ತಿಯು ಕ್ರಿಯೆಯ ಮೂಲವನ್ನು ಹೇಳುವದು. ಆದರೆ ಈ ಸಾಧಾರಣ ಅರ್ಥಕ್ಕೆ ನಾನಾ ಅರ್ಥವಿಶೇಷಗಳು ಬರುವವು. ಅವುಗಳಲ್ಲಿ ಮುಖ್ಯವಾದವು ಯಾವವಂದರೆ—

1. "ಕರ್ತೃ"—ಕರ್ಮಣಿಪ್ರಯೋಗದಲ್ಲಿ ತೃತೀಯಾವಿಭಕ್ತಿಯು ಕ್ರಿಯೆಯನ್ನು ಮಾಡಿದ ಕರ್ತೃವನ್ನು ಹೇಳುವದು. ಉದಾ: ಪ್ರಜೆಗಳು ಅರಸನಿಂದ ಆಳಲ್ಪಡುತ್ತಾರೆ.

   ಇದಲ್ಲದೆ ಪರಕರ್ತೃವುಳ್ಳ ಕ್ರಿಯೆಗಳೊಡನೆ ತೃತೀಯಾವಿಭಕ್ತಿಯು ಸಹಾಯ ಕರ್ತೃವನ್ನು ಹೇಳುವದು. ಉದಾ: ಅರಸನು ಪ್ರಧಾನಿಯಿಂದ ರಾಜಕಾರ್ಯ ನಡಿಸುತ್ತಾನೆ.

2. "ಕರಣ"ವಂದರೆ — ಕ್ರಿಯೆಯನ್ನು ನಡಿಸುವದಕ್ಕೆ ಬೇಕಾದ ಸಾಹಿತ್ಯ. ಉದಾ: ಬಾಯಿಂದ ಮಾತಾಡುತ್ತೇವೆ;

ಬುದ್ಧಿಯಿಂದ ತಿಳಕೊಳ್ಳುತ್ತೇವೆ; ಲೇಖಣಿಯಿಂದ ಬರದರು; ಕಿವಿಯಿಂದ ಕೇಳಿದರು.

3. "ದ್ರವ್ಯ"ವಂದರೆ—ಒಂದು ವಸ್ತುವನ್ನು ಮಾಡುವದಕ್ಕೆ ಬೇಕಾದ ಪದಾರ್ಥ. ಉದಾ: ರೂಪಾಯಿಗಳು ಬೆಳ್ಳಿಯಿಂದ ಆಗುತ್ತವೆ; ಗಡಿಗೆಗಳು ಮಣ್ಣಿನಿಂದ ಆಗುತ್ತವೆ.

4. "ಕಾರಣ"—ಉದಾ: ವರ್ತಕರು ತಮ್ಮ ಉದ್ಯೋಗದಿಂದ ದೂರ ದೇಶಗಳಿಗೆ ಹೋಗುತ್ತಾರೆ.

5. "ರೀತಿ"—ಉದಾ: ನಮ್ಮ ದಿವಸಗಳು ವೇಗದಿಂದ ಗತಿಸಿ ಹೋಗುತ್ತವೆ; ಅವನು ಅವಕಾಶದಿಂದ ಬಂದನು.

6. ಕಾಲವಾಚಕಗಳಲ್ಲಿ ತೃತೀಯಾವಿಭಕ್ತಿಯು ಕ್ರಿಯೆಯ ಆರಂಭವನ್ನು ಹೇಳುವದು. ಉದಾ: ಸರ್ಪಗಳು ಹುಟ್ಟಿದ ದಿವಸದಿಂದ ತಮ್ಮ ಆಹಾರ ತಾವೇ ಹುಡುಕುತ್ತವೆ.

7. ಗಮನಾರ್ಥಕ ಕ್ರಿಯಾಪದಗಳೊಂದಿಗೆ ತೃತೀಯಾವಿಭಕ್ತಿಯು ಬಿಟ್ಟ ಸ್ಥಳವನ್ನೂ ಹೊರಟ ದಿಕ್ಕನ್ನೂ ಹೇಳುವದು. ಉದಾ: ಇಂಗ್ಲಿಷ ದೇಶದಿಂದ ಹೊರಟ ಹಡಗಗಳು ಪಶ್ಚಿಮದಿಂದ ಮುಂಬಯಿಗೆ ಬರುತ್ತವೆ.

ಚತುರ್ಥೀವಿಭಕ್ತಿ (Dative).

137. ಚತುರ್ಥೀವಿಭಕ್ತಿ ಹೇಳುವ ಕಾರಕಾರ್ಥಗಳು ಯಾವವು?

ಚತುರ್ಥೀವಿಭಕ್ತಿಯು ಸಾಧಾರಣವಾಗಿ ಸಂಪ್ರದಾನಾರ್ಥವನ್ನು ಹೇಳುವದು. ಹ್ಯಾಗಂದರೆ—ಆಖ್ಯಾತ ಹೇಳುವ ಕ್ರಿಯೆಯೂ ಲಕ್ಷಣವೂ ಯಾವದಕ್ಕೆ ಕೂಡುವದೋ ಅದಕ್ಕೆ ಚತುರ್ಥೀವಿಭಕ್ತಿ ಬರುವದು. ಆದರೆ ಇದರ ಪ್ರಯೋಗದ ಅರ್ಥವಿಶೇಷಗಳು ನಾನಾ ವಿಧವಾಗಿವೆ. ಅವುಗಳಲ್ಲಿ ಮುಖ್ಯವಾದವು ಯಾವವಂದರೆ—

1. "ಅನುಭೋಗಿ" ಅಂದರೆ—ಕ್ರಿಯೆಯ ಫಲ ಅನುಭೋಗಿಸುವ ವಸ್ತುವಿಗೆ ಚತುರ್ಥಿ ಬರುವದು. ಉದಾ: ಬಡವ

ರಿಗೆ ದಾನ ಕೊಡು; ಅವಿವೇಕಿಗೆ ಬುದ್ಧಿ ಹೇಳು; ಉಪಕಾರಿಗೆ ಪ್ರತ್ಯುಪಕಾರ ಮಾಡು; ದೇವರಿಗೆ ಭಕ್ತಿಯಿಂದ ನಡಕೋ.

2. "ಅಧಿಕರ್ತೃ" ಅಂದರೆ "ಉಂಟು, ಇರು, ಇಲ್ಲ" ಎಂಬ ಕ್ರಿಯಾಪದಗಳೊಡನೆ. ಉದಾ: ಮನುಷ್ಯನಿಗೆ ಆತ್ಮ ಉಂಟು; ಕೈಗೆ ಐದು ಬೆರಳು ಇರುತ್ತವೆ; ಮೂರ್ಖರಿಗೆ ಬುದ್ಧಿ ಇಲ್ಲ.

3. "ನಿಮಿತ್ತ"—ಉದಾ: ಅರಸನ ಕುಮಾರರು ಪಟ್ಟಕ್ಕೆ ಬಡಿದಾಡಿದರು; ಭಿಕ್ಷಕ್ಕೆ ಹೊರಟನು; ಸುಳ್ಳಿಗೆ ಕಷ್ಟ ಪಡಬೇಡ.

4. "ವಿಷಯ"—"ಆಶಿಸು, ಹೇಸು" ಮುಂತಾದ ಇಚ್ಛಾರ್ಥಕ ಕ್ರಿಯಾಪದಗಳೂ, "ಅಂಜು, ಚಿಂತಿಸು" ಮೊದಲಾದ ಭಯಾರ್ಥಕಗಳೂ, "ತಪ್ಪು, ಅಗಲು" ಮುಂತಾದ ವಿಯೋಗಾರ್ಥಕಗಳೂ, ಇವುಗಳ ವಿಷಯಗಳನ್ನು ಹೇಳುವ ನಾಮಪದಗಳಿಗೆ ಚತುರ್ಥಿ ಬರುವದು. ಉದಾ: ಪರದ್ರವ್ಯಕ್ಕೆ ಆಶಿಸ ಬೇಡ; ಪಾಪಕ್ಕೆ ಅಂಜಿಕೋ; ದೇವರ ಶಿಕ್ಷೆಗೆ ತಪ್ಪಿಸಿಕೊಳ್ಳುವವನು ಯಾರು? ದುಷ್ಟರ ಸಹವಾಸಕ್ಕೆ ಅಗಲಿಕೋ.

5. "ಕ್ರಯ=ಪ್ರತಿದಾನ"—ಉದಾ: ನೂರು ರೂಪಾಯಿಗೆ ಕುದುರೆ ಕೊಂಡನು. ಆಳು ಕೂಲಿಗೆ ಕೆಲಸ ಮಾಡಿದನು.

6. "ಮಿತಿ"—ಉದಾ: ದಿನಕ್ಕೆ ಒಂದು ಆಣೆಯ ಮೇರೆಗೆ ಖರ್ಚು ಮಾಡುವವನು 20 ವರ್ಷಗಳಿಗೆ ಎಷ್ಟು ವೆಚ್ಚ ಮಾಡುವನು?

7. ಕಾಲವಾಚಕಗಳಲ್ಲಿ ಚತುರ್ಥೀವಿಭಕ್ತಿಯು ಕ್ರಿಯೆಯ ಸಮಯವನ್ನು ಸ್ಪಷ್ಟವಾಗಿ ಹೇಳದೆ ಸೂಚನೆಯಾಗಿ ಹೇಳುವದು. ಉದಾ: ಹಗಲಿಗೆ ಕಾಗೆಗಳು ಹಾರ್‍ಯಾಡುತ್ತವೆ; ರಾತ್ರಿಗೆ ಗೂಗೆಗಳು ಬರುತ್ತವೆ.

8. ಗಮನಾರ್ಥಕ ಕ್ರಿಯಾಪದಗಳೊಡನೆ ಚತುರ್ಥೀವಿಭಕ್ತಿಯು ಮುಟ್ಟುವ ಸ್ಥಳವನ್ನೂ ಹಿಡಿದ ದಿಕ್ಕನ್ನೂ ಹೇಳುವದು. ಉದಾ: ನದಿಗಳು ಸಮುದ್ರಕ್ಕೆ ಹರಿಯುತ್ತವೆ; ಮನೆಗೆ ಬಂದನು.

ಇವು ಮೊದಲಾದ ಚತುರ್ಥೀವಿಭಕ್ತಿಯ ಕಾರಕಾರ್ಥಗಳು ಕ್ರಿಯಾವಾಚಕ ಆಖ್ಯಾತಗಳ ಅರ್ಥವನ್ನು ಪೂರ್ಣ ಮಾಡುವಂಥವೆ. ಅವುಗಳಲ್ಲದೆ ಇನ್ನು ಲಕ್ಷಣವಾಚಕ ಆಖ್ಯಾತಗಳ ಅರ್ಥವನ್ನು ಪೂರ್ಣ ಮಾಡುವಂಥವು ಕೆಲವು ಉಂಟು, ಯಾವವಂದರೆ—

9. "ಲಕ್ಷಣವಿಷಯ"—ಲಕ್ಷಣವಾಚಕ ಆಖ್ಯಾತವು ಹೇಳುವ ಲಕ್ಷಣವು ಯಾವ ವಿಷಯಕ್ಕೆ ಬರುವದೋ ಅದಕ್ಕೆ ಚತುರ್ಥಿ ಬರುವದು. ಉದಾ: ದೇವರು ಸದ್ಭಕ್ತರಿಗೆ ತಂದೆ [ಆಗಿದ್ದಾನೆ]; ಅವರು ಆತನಿಗೆ ಮಕ್ಕಳು [ಆಗಿದ್ದಾರೆ]; ನಾವು ದೇವರ ದಯಕ್ಕೆ ಯೋಗ್ಯರಲ್ಲ; ಬುದ್ಧಿಯು ಎಲ್ಲರಿಗೆ ಅಗತ್ಯ[ಆಗಿದೆ].

10 "ಪ್ರತಿನಿಧಿ"—ಎರಡು ವಸ್ತುಗಳ ಗುಣಗಳಲ್ಲಿ ಆಗಲಿ ದಿಕ್ಕುಗಳಲ್ಲಿ ಆಗಲಿ ಇರುವ ಹೆಚ್ಚುಕಡಿಮೆಯನ್ನು ಹೇಳುವದಕ್ಕೆ ಗುರಿಯಿಟ್ಟ ವಸ್ತುವಿನ ನಾಮಕ್ಕೆ ಚತುರ್ಥಿ ಬರುವದು. ಉದಾ: ಶೂದ್ರರಿಗೆ ಬ್ರಾಹ್ಮಣರು ಹಿರಿಯರು; ಮಹಾರಾಷ್ಟ್ರವು ವಿಂಧ್ಯಕ್ಕೆ ದಕ್ಷಿಣದಲ್ಲಿ. ಈ ಪ್ರಯೋಗದಲ್ಲಿ ಬಹಳವಾಗಿ ಚತುರ್ಥಿಗೆ "ಇಂತ" ಎಂಬ ಉಪಸರ್ಗವು ಅನುಬಂಧವಾಗುವದು. ಉದಾ: ಆನೆ ಕುದುರೆಗಿಂತ ದೊಡ್ಡದು.

ಸಪ್ತಮೀವಿಭಕ್ತಿ (Locative).

138. ಸಪ್ತಮೀವಿಭಕ್ತಿಯು ಹೇಳುವ ಅರ್ಥಗಳು ಯಾವವು?

ಅವುಗಳಲ್ಲಿ ಕೆಲವು ಕ್ರಿಯಾವಾಚಕ ಆಖ್ಯಾತಗಳ ಅರ್ಥವನ್ನು ಪೂರ್ಣ ಮಾಡುವಂಥಾವು, ಕೆಲವು ಲಕ್ಷಣವಾಚಕ ಆಖ್ಯಾತಗಳಿಗೆ ಪೂರಣಗಳು. ಹ್ಯಾಗಂದರೆ—

1. "ಸ್ಥಾನ"—ಕ್ರಿಯೆಯು ಸಂಭವಿಸುವ ಸ್ಥಾನ ಹೇಳುವದಕ್ಕೆ ಸಪ್ತಮಿ ಬರುವದು. ಉದಾ: ಹೊಳೆಯಲ್ಲಿ ಈಸು; ಜೀವವು ದೇಹದಲ್ಲಿ ವಾಸಿಸುತ್ತದೆ; ವಿಷ ಬಾಯಲ್ಲಿ ಹಾಕ ಬೇಡ.

2. "ಕಾಲ"—ಕ್ರಿಯೆಯು ಸಂಭವಿಸುವ ಸಮಯುವನ್ನು ಹೇಳುವ ಕಾಲವಾಚಕಗಳಿಗೆ ಸಪ್ತಮಿ ಬರುವದು. ಉದಾ: ಒಂದು ದಿನದಲ್ಲಿ ಸತ್ತೇವು.

3. "ಕರಣ"—ಕೆಲವು ಪ್ರಯೋಗಗಮ್ಯಗಳಲ್ಲಿ ಸಪ್ತಮೀವಿಭಕ್ತಿಯು ಕರಣಾರ್ಥವನ್ನು ಹೇಳುವದು. ಉದಾ: ಶೂರನು ಒಂದೇ ಹೊಡತದಲ್ಲಿ ಶತ್ರುವಿನ ತಲೆಯನ್ನು ಛೇದಿಸಿದನು.

4. "ವಿಭಾಗಾಧಾರ"—ವಿಭಾಗ ಮಾಡುವದಕ್ಕೆ ಆಧಾರವಾಗಿರುವ ವಸ್ತುಗಳನ್ನು ಹೇಳುವ ಸಂಘವಾಚಕಕ್ಕೆ ಸಪ್ತಮಿ ಬರುವದು. ಉದಾ: ಆ ಊರಿನವರಲ್ಲಿ ನೂರು ಮಂದಿ ಸತ್ತರು.

ಇದೇ ಪ್ರಯೋಗದಿಂದ "ತಿನ್ನು, ಕೊಡು" ಮುಂತಾದ ಕ್ರಿಯೆಗಳನ್ನು ನಡಿಸುವದಕ್ಕೆ ಅಗತ್ಯವಾದ ಪದಾರ್ಥದಲ್ಲಿ ಒಂದು ಭಾಗ ಮಾತ್ರ ಬೇಕಾಗಿದ್ದರೆ, ಆ ಅಖಂಡ ಪದಾರ್ಥದ ನಾಮಕ್ಕೆ ಸಪ್ತಮಿ ಬರುವದು. ಉದಾ: ಆ ರೊಟ್ಟಿಯಲ್ಲಿ ತಿನ್ನು; ನಿನ್ನ ಆಸ್ತಿಯಲ್ಲಿ ದಾನ ಕೊಡು.

5. "ವಿಶೇಷಾಧಾರ"—ಅದೇ ಬಗೆಯ ವಸ್ತುಗಳೊಳಗೆ ಒಂದನ್ನಾದರೂ ಕೆಲವನ್ನಾದರೂ ವಿಶೇಷಿಸುವದಕ್ಕೆ ಸಪ್ತಮೀ ಬಹುವಚನ ಬರುವದು. ಉದಾ: ರತ್ನಗಳಲ್ಲಿ ವಜ್ರವು ಉತ್ತಮ; ಎಲ್ಲ ಪ್ರಾಣಿಗಳಲ್ಲಿ ಮನುಷ್ಯರೇ ಶ್ರೇಷ್ಠರು.

6. "ಅಧಿಕರಣ"—ಲಕ್ಷಣವಾಚಕ ಆಖ್ಯಾತ ಹೇಳುವ ಗುಣವು ಯಾವದರಲ್ಲಿ ಕಾಣಿಸುವದೋ, ಅದೇ ಅದರ ಅಧಿಕರಣವೆಂದೆನ್ನಿಸುವದು. ಅದನ್ನು ಹೇಳುವ ನಾಮಕ್ಕೆ ಸಪ್ತಮಿ ಬರುವದು. ಉದಾ: ನೀನು ಕೆಲಸದಲ್ಲಿ ಜಾಣನೂ, ಬುದ್ಧಿಯಲ್ಲಿ ವಿಶೇಷನೂ, ಮನದಲ್ಲಿ ಭಕ್ತನೂ ಆಗಿರು.

ಉಪಸರ್ಗಗಳ ಪ್ರಯೋಗ (Uses of the Postpositions).

139. ಉಪಸರ್ಗಗಳ ಪ್ರಯೋಗ ಹ್ಯಾಗೆ?

ವಿಭಕ್ತಿಗಳು ಹೇಳುವ ಕಾರಕಾರ್ಥ ಕ್ರಿಯಾವಿಶೇಷಾರ್ಥಗಳನ್ನು ಇನ್ನು ಹೆಚ್ಚು ವಿಂಗಡವಾಗಿ ವಿಶೇಷಿಸುವದಕ್ಕೆ ನಾಮಪದಗಳ ತುದಿಗೆ ವಿಭಕ್ತ್ಯರ್ಥಕಾವ್ಯಯಗಳಾದ ಉಪಸರ್ಗಗಳನ್ನು ಅನುಬಂಧಿಸುವದು ಉಂಟು.

(ಇವುಗಳ ಉತ್ಪತ್ತಿ ಭೇದಗಳನ್ನು ಹಿಂದೆ 92ನೇ ಉತ್ತರದಲ್ಲಿ ವಿವರಿಸಲಾಯಿತು.)

ಅವುಗಳು ಹೇಳುವ ಅರ್ಥವಿಶೇಷಗಳು ಯಾವವಂದರೆ—

1. ತೃತೀಯಾವಿಭಕ್ತಿಯ ಕಾರಕಾರ್ಥಗಳನ್ನು ವಿಶೇಷಿಸುವಂಥಾವು:

   "ಕರಣಾರ್ಥಕಗಳು"—ಕೈಯಿಂದ, ಮುಖದಿಂದ, ಮುಖಾಂತರ. ಉದಾ: ದೇವರ ಕೈಯಿಂದ ಬದುಕುತ್ತೇವೆ; ವಿಧಿಗಳು ಉದಾಹರಣೆಗಳ ಮುಖದಿಂದ ತಿಳಿಯಬರುತ್ತವೆ.

   "ದಿಗರ್ಥಕಗಳು"—ದೆಸೆಯಿಂದ, ಕಡೆಯಿಂದ, ಬಳಿಯಿಂದ. ಉದಾ: ಸಮುದ್ರದ ದೆಸೆಯಿಂದ ಮೋಡಗಳು ಬರುತ್ತವೆ; ಮೋಡಗಳ ಕಡೆಯಿಂದ ಮಳೆಗರಿಯುವದು; ಬೆಟ್ಟದ ಬಳಿಯಿಂದ ಹೊಳೆಗಳು ಹರಿದು ಬರುತ್ತವೆ.

   "ರೀತ್ಯರ್ಥಕಗಳು"—ಹಾಗೆ, ಅಂತೆ, ಬಗ್ಯೆ, ಅಪ್ಪಂದ, ಅಂದದಿ, ಓಲು, ಪ್ರಕಾರ, ರೀತಿ, ಮೇರೆ, ಪರಿ, ಓಪಾದಿ. ಉದಾ: ಮಗನು ತಂದೆಯ ಹಾಗೆ ಇದ್ದಾನೆ; ಶಿಷ್ಯರು ಗುರುವಿನಂತೆ ಇರಲಿ.

2. ಚತುರ್ಥೀವಿಭಕ್ತಿಯ ಕಾರಕಾರ್ಥಗಳನ್ನು ವಿಶೇಷಿಸುವಂಥಾವು:

"ನಿಮಿತ್ತಾರ್ಥಕಗಳು"—ನಿಮಿತ್ತ, ಉದ್ದಿಶ್ಯ, ತುಸುಕ, ಸಲುವಾಗಿ, ಓಸ್ಕರ [ಓಸುಗ]. ಉದಾ: ಉದರನಿಮಿತ್ತ ತಪಸ್ಸು ಮಾಡುವವನು ತಪಸಿ ಅಲ್ಲ; ಕಲಿತ ವಿದ್ಯೆಗಳನ್ನು ಹೊಟ್ಟೆಗೋಸ್ಕರ ಮಾರಿಕೊಳ್ಳುವವರು ವಿದ್ವಾಂಸರಲ್ಲ; ಜಗಳಗಂಟಿಗರು ಒಂದು ಮಾತಿನ ಸಲುವಾಗಿ ಬಡದಾಡುವರು.

"ವಿಷಯಾರ್ಥಕಗಳು" ವಿಷಯ, ಕುರಿತು. ಉದಾ: ಮೋಕ್ಷ ವಿಷಯ ಚಿಂತಿಸು; ದೇವರನ್ನು ಕುರಿತು ಪ್ರಾರ್ಥಿಸು.

"ದಿಗರ್ಥಕಗಳು"—ಬಳಿಗೆ, ಕಡೆಗೆ. ಉದಾ: ಮಗನು ತಂದೆಯ ಕಡೆಗೆ ನೋಡಿ, ತಾಯಿಯ ಬಳಿಗೆ ಓಡಿ ಹೋದನು.

"ಸೀಮಾರ್ಥಕಗಳು"—ಪರ್ಯಂತ, ವರೆಗೆ, ಮಟ್ಟಿಗೆ, ತನಕ. ಉದಾ: ಸೂರ್ಯನ ಪರ್ಯಂತ ಎಷ್ಟು ದೂರ? ಕಡೆ ದಿನದ ವರೆಗೆ ತಾಳಿಕೋ; ಇಂದಿನ ತನಕ ಬದುಕುತ್ತೇವೆ.

3. ಸಪ್ತಮೀವಿಭಕ್ತಿಯ ಕಾರಕಾರ್ಥಗಳನ್ನು ವಿಶೇಷಿಸುವಂಥಾವು.

"ಸ್ಥಾನಕಾಲಾರ್ಥಕಗಳು"—ಒಳಗೆ, ಹೊರಗೆ, ಕೆಳಗೆ, ಮೇಲೆ, ಮುಂದೆ, ಹಿಂದೆ, ಬಳಿಕ, ತರುವಾಯ, ಸುತ್ತ, ಹತ್ತರ, ಬಳಿಯ, ಬಳೀಲಿ, ಬದೀಲಿ. ಉದಾ: ಭೂಮಿಯೊಳಗೆ ಬಂಡೆಗಳು ಅವೆ; ಅದರ ಮೇಲೆ ನಾನಾ ಜೀವಿಗಳು ಬದುಕುತ್ತವೆ. ನೂರು ವರುಷಗಳ ಹಿಂದೆ ನಾವು ಇದ್ದಿಲ್ಲ; ಸ್ವಲ್ಪ ದಿವಸಗಳ ಬಳಿಕ ಸಾಯುವೆವು.

"ಸಂಗಾರ್ಥಕಗಳು"—ಸಂಗಡ, ಕೂಡ, ಒಂದಿಗೆ, ಒಡನೆ. ಉದಾ: ದುಷ್ಟರ ಸಂಗಡ ಬಳಿಕೆ ಮಾಡುವವನು ಅವರ ಕೂಡ ಕೆಟ್ಟಾನು.

ಕ್ರಿಯಾವಿಶೇಷಣಗಳ ಪ್ರಯೋಗ (Uses of the Adverbs).

140. ಕ್ರಿಯಾವಿಶೇಷಣಾವ್ಯಯಗಳ ಪ್ರಯೋಗವು ಹ್ಯಾಗೆ?

ಕ್ರಿಯೆಗಳು ನಡೆದ ಸ್ಥಳ, ಕಾಲ, ರೀತಿಗಳನ್ನು ವಿಶೇಷಿಸುವದಕ್ಕೆ ಸ್ಥಳ, ಕಾಲ, ರೀತಿವಾಚಕ ನಾನಾ ಅವ್ಯಯಶಬ್ದಗಳು ಪ್ರಯೋಗವಾಗುವವು.

(ಅವುಗಳನ್ನು ಹಿಂದೆ 91, 92ನೇ ಉತ್ತರಗಳಲ್ಲಿ ನೋಡು.)

ಅವುಗಳು ಹೇಳುವ ಅರ್ಥಗಳು ಯಾವವಂದರೆ—

1. ಸ್ಥಳವಾಚಕಗಳ ಅವ್ಯಯರೂಪವು [ಸಪ್ತಮೀವಿಭಕ್ತಿಗೆ ಸಮವಾಗಿ] ಕ್ರಿಯೆ ಸಂಭವಿಸುವ ಸ್ಥಳವನ್ನು ಹೇಳುವದು. ಉದಾ: ಸತ್ತವರು ಎಲ್ಲಿ ಇದ್ದಾರೆ? ಮರ್ತ್ಯಲೋಕವು ಇತ್ತ ಪರಲೋಕವು ಅತ್ತ.

   ಗಮನಾರ್ಥಕಕ್ರಿಯೆಗಳೊಂದಿಗೆ ಪ್ರಯೋಗವಾಗುವ ಕೆಲವು ತೃತೀಯಾವಿಭಕ್ತಿರೂಪಗಳು ಹೊರಟ ದಿಕ್ಕನ್ನು ಹೇಳುವವು. ಉದಾ: ಮಳೆಗಾಲದಲ್ಲಿ ಕೆಳಗಿನಿಂದ ಮಂಜು ಏರುವದು; ಮೇಲಿನಿಂದ ಹನಿಗಳು ಉದುರುತ್ತವೆ.

   ಅವುಗಳ ಚತುರ್ಥೀವಿಭಕ್ತಿಯ ರೂಪಗಳು ಮುಟ್ಟಿದ ದಿಕ್ಕನ್ನು ಹೇಳುವವು. ಉದಾ: ಮೇಲಕ್ಕೆ ಹಾರಿದ ಪಕ್ಷಿ ಎಲ್ಲಿಗೆ ಹೋಯಿತು?

2. ಕಾಲವಾಚಕಗಳ ಅವ್ಯಯರೂಪವು ಕ್ರಿಯೆ ಸಂಭವಿಸಿದ ಸಮಯವನ್ನು ಸ್ಪಷ್ಟವಾಗಿ ಹೇಳುವದು. ಅವುಗಳ ತೃತೀಯಾವಿಭಕ್ತಿರೂಪವು ಕ್ರಿಯೆಯ ಆರಂಭವನ್ನು ಹೇಳುವದು. ಅವುಗಳ ಚತುರ್ಥೀವಿಭಕ್ತಿರೂಪವು ಅದರ ಕಡೆಯನ್ನು ಹೇಳುವದು. ಉದಾ: ಈಹೊತ್ತು ಬೀಸಿದ ಗಾಳಿ ನಾಳೆಗೆ ಎಲ್ಲಿ ಇರುವದು? ಮೊನ್ನೆಯಿಂದ ಕರೆದ ಮಳೆ ಈಹೊತ್ತಿಗೆ ನಿಂತಿತು.

ಸ್ಥಾನ ಕಾಲಗಳ ಮೇರೆ ಹೇಳುವದಕ್ಕೆ ಸ್ಥಾನ ಕಾಲವಾಚಕಗಳಿಗೆ "ತನಕ, ವರೆಗೆ, ಮುಟ್ಟಿಗೆ, ಪರ್ಯಂತ" ಎಂಬ ಸೀಮಾರ್ಥಕ ಉಪಸರ್ಗಗಳು ಪರವಾಗುವವು. ಉದಾ: ಇಲ್ಲಿ ತನಕ ನಡೆದು ಬಂದೆವು; ಇನ್ನು ಎಲ್ಲಿ ಪರ್ಯಂತ ನಡಿಯಬೇಕು? ಇಂದಿನ ವರೆಗೆ ಸಂರಕ್ಷಣೆ ಮಾಡಿದ ದೇವರು ನಮ್ಮನ್ನು ಕಡೇ ತನಕ ಸಲಹುವನು.

3. ರೀತಿವಾಚಕ ಅವ್ಯಯಗಳು ಕ್ರಿಯೆ ನಡೆದ ಬಗೆಯನ್ನು ವಿಶೇಷಿಸಿ ಹೇಳುವವು. ಉದಾ: ಶಾಲೆಯಲ್ಲಿ ಹುಡುಗರು ಹ್ಯಾಗೆ ಇರಬೇಕು? ಸುಮ್ಮನೆ ಕೂಡ್ರಬಾರದು; ಮೆಲ್ಲಗೆ ಕಲಿಯಬಾರದು; ತಮ್ಮ ಪಾಠಗಳನ್ನು ನೆಟ್ಟಗೆ ಓದಿ ಬರಿಯಬೇಕು.

ನಾಮಪದಗಳಿಗೂ ವಿಶೇಷಣನಾಮಗಳಿಗೂ "ಆಗಿ" ಎಂಬ ಭೂತನ್ಯೂನ ಹತ್ತಿಸುವದರಿಂದ ಅವುಗಳನ್ನೆಲ್ಲಾ ರೀತಿವಾಚಕಕ್ರಿಯಾವಿಶೇಷಣಗಳಾಗಿ ಪ್ರಯೋಗಿಸಲಾಗುವದು. ಉದಾ: ಅರಸನಾಗಿ ಧೊರೆತನ ಮಾಡುವ ಒಡೆಯನು ರಾಜ್ಯವನ್ನು ಘನವಾಗಿ ಆಳಿದರೆ, ಪ್ರಜೆಗಳು ಸುಖಸ್ವರೂಪಿಗಳಾಗಿ ಇರುವರು; ಆದರೆ ಎರಡನೆಯವರ ಮಾತು ಕೇಳದೆ, ಕ್ರೂರವಾಗಿ ಆಳುವ ಅರಸನಿಂದ ರಾಜ್ಯವು ಬಹಳವಾಗಿ ಕೆಟ್ಟು ಹೋಗುವದು.

ಅವ್ಯಯಾತ್ಮಕಕ್ರಿಯಾಪದಗಳ ಪ್ರಯೋಗ (Uses of the Uninflected Verbal Forms).

141. ಅವ್ಯಯಾತ್ಮಕಕ್ರಿಯಾಪದಗಳ ಪ್ರಯೋಗವು ಹ್ಯಾಗೆ?

ಭಾವರೂಪ, ನ್ಯೂನಕ್ರಿಯೆಗಳೆಂಬ ಎರಡು ವಿಧದ ಅವ್ಯಯಕ್ರಿಯಾಪದಗಳು ನಾನಾ ಅರ್ಥವಿಶೇಷಗಳನ್ನು ಹೇಳಿ ಆಖ್ಯಾತಪದಗಳ ಅರ್ಥವನ್ನು ಪೂರ್ಣ ಮಾಡುವದರಲ್ಲಿ ಪ್ರಯೋಗಿಸುವ ಕಾರಣ, ಅವುಗಳ ಪ್ರಯೋಗವನ್ನು ಇಲ್ಲಿ ವಿವರಿಸ ತಕ್ಕದ್ದು.

(ಅವುಗಳ ಸ್ವರೂಪಗಳ ವಿವರವನ್ನು ಹಿಂದೆ 79ನೇ ಉತ್ತರದಲ್ಲಿ ನೋಡು.)

142. ಭಾವರೂಪಗಳ ಪ್ರಯೋಗವು ಹ್ಯಾಗೆ?

ಇದರ ವಿಷಯಕ್ಕೆ ಮುಖ್ಯವಾಗಿ ತಿಳಿಯತಕ್ಕದ್ದೇನಂದರೆ:

1. ಭಾವಿಪ್ರಯೋಗದಲ್ಲಿಯೂ ಭಾವಾರ್ಥಕ ಸಹಾಯಕ್ರಿಯಾಪದಗಳ ಪೂರ್ವದಲ್ಲಿಯೂ ಧಾತುಗಳ ಭಾವರೂಪಗಳಿಗೆ ಉದ್ದೇಶ ಹೇಳುವ ಪ್ರಥಮಾವಿಭಕ್ತಿಯ ಅರ್ಥ ಬರುವದು.

(ಇದರ ವಿವರವನ್ನೂ ಉದಾಹರಣೆಗಳನ್ನೂ ಹಿಂದೆ 120ನೇ ಉತ್ತರದಲ್ಲಿ ನೋಡ ತಕ್ಕದ್ದು.)

2. "ಬಲ್ಲೆನು, ಅರಿಯೆನು, ಒಲ್ಲೆನು, ಆಪೆನು, ಆರೆನು, ಉಳ್ಳ" ಮುಂತಾದ ಪುರುಷಾರ್ಥಕ ಅನುಬಂಧಕ್ರಿಯಾಪದಗಳ ಪೂರ್ವದಲ್ಲಿ ಭಾವರೂಪಗಳು ದ್ವಿತೀಯಾವಿಭಕ್ತಿಗೆ ಸಮವಾಗಿ ಕರ್ಮಾರ್ಥವನ್ನು ಹೇಳುವವು. ಹ್ಯಾಗಂದರೆ: ಭಾವರೂಪವು ಹೇಳುವ ಪ್ರಧಾನಕ್ರಿಯೆಯು ಅನುಬಂಧಕ್ರಿಯಾಪದ ಹೇಳುವ ಉಪಕ್ರಿಯೆಗೆ ವಿಷಯವಾದದ್ದು. ಉದಾ: ಜಾಣನು ಕೆಲಸ ಮಾಡ ಬಲ್ಲನು; ದಡ್ಡನು ವಿದ್ಯ ಗ್ರಹಿಸಲರಿಯನು; ಮೈಗಳ್ಳರು ದುಡಿಯಲೊಲ್ಲರು; ಸರ್ವಶಕ್ತನು ಸಮಸ್ತವನ್ನು ಮಾಡಲಾಪನು; ನಾವು ಅಪ್ಪಣೆ ಮೇರೆಗೆ ನಡದುಕೊಳ್ಳಲುಳ್ಳವರು.

3. ಅನೇಕ ಪ್ರಯೋಗಗವ್ಯಗಳಲ್ಲಿ ಭಾವರೂಪಗಳಿಗೆ "ನಿಮಿತ್ತ, ವಿಷಯ" ಮೊದಲಾದ ಚತುರ್ಥೀವಿಭಕ್ತಿಯ ಅರ್ಥಗಳು ಬರುವವು. ಅವುಗಳನ್ನು ಹೇಳುವದಕ್ಕೆ ಮುಖ್ಯವಾಗಿ 3ನೇ ಭಾವರೂಪವು ಪ್ರಯೋಗವಾಗುವದು. ಉದಾ: ಊಟಕ್ಕೆ ಕರೆಯ ಬಂದ ಹುಡುಗನು ಆಟ ಆಡುವದಕ್ಕೆ ನಿಂತನು; ಜ್ಞಾನಿ ಆಗ ಮನಸ್ಸುಳ್ಳವನು ವಿದ್ಯ ಕಲಿಯಲಿಕ್ಕೆ ಪ್ರಯತ್ನ ಮಾಡಲಿ.

4. ಕೆಲವು ಪ್ರಯೋಗಗವ್ಯಗಳಲ್ಲಿ ಭಾವರೂಪಗಳಿಗೆ "ಕಾಲ, ಪಕ್ಷ" ಮೊದಲಾದ ಸಪ್ತಮೀವಿಭಕ್ತಿಯ ಅರ್ಥಗಳು ಬರು

ಪವು. ಇವುಗಳನ್ನು ಹೇಳುವದಕ್ಕೆ ಮುಖ್ಯವಾಗಿ 2ನೇ ಭಾವರೂಪವೂ ಕೆಲವೆಡೆಯಲ್ಲಿ 3ನೇ ಭಾವರೂಪವೂ ಪ್ರಯೋಗವಾಗುವವು. ಅದಕ್ಕೆ ವಿಕಲ್ಪವಾಗಿ "ಆಗಿ" ಎಂಬದನ್ನು ಅನುಬಂಧಿಸುವದುಂಟು. ಪಕ್ಷಾರ್ಥ ಹೇಳುವ ಭಾವರೂಪವು "ಸತಿಸಪ್ತಮಿ" ಎಂದು ವ್ಯವಹರಿಸುವದು. ಉದಾ: ವಸಂತ ಬರಲು ಕೋಗಿಲೆ ಕೂಗುವದು; ಒಬ್ಬ ರಾಜನು ದೇಶವನ್ನು ಆಳುತ್ತಿರಲಾಗಿ, ಅವನ ಪಟ್ಟಣಕ್ಕೆ ಒಬ್ಬ ಸನ್ಯಾಸಿ ಬಂದನು; ಮಳೆಗರಿಯಲು ಪೈರು ಬೆಳಿಯಿತು; ಬೋಧಕನು ಹೇಳುತ್ತಿರಲಿಕ್ಕಾಗಿ ಹುಡುಗರು ಕೇಳಿದರು.

143. ನ್ಯೂನರೂಪಗಳ ಪ್ರಯೋಗವು ಹ್ಯಾಗೆ?

ಹಿಂದೆ (79ನೇ ಉತ್ತರದ 2ರಲ್ಲಿ) ವಿವರಿಸಿದ ಪ್ರಕಾರ ಮೂರು ವಿಧದ ನ್ಯೂನಗಳು ತಮ್ಮಷ್ಟಕ್ಕೆ ಅಸಮಾಪ್ತಕ್ರಿಯೆ ಹೇಳಿ, ವಾಕ್ಯವನ್ನು ಮುಗಿಸುವ ಆಖ್ಯಾತಕ್ರಿಯೆಗೆ ಪೂರ್ವಕ್ರಿಯೆಗಳಾಗಿ ಅನ್ವಿತವಾಗುತ್ತವೆ. ಯಾವ ಅರ್ಥಗಳಲ್ಲಿ ಅಂದರೆ—

1. "ಸಮುಚ್ಚಯಾರ್ಥ"— ಕರ್ತೃಪದ ಹೇಳುವ ವಸ್ತುವು ಸಮಾನಾಧಿಕರಣವಾದ ಅನೇಕ ಕ್ರಿಯೆಗಳನ್ನು ನಡಿಸಿದರೆ, ಪೂರ್ವಕ್ರಿಯಾಪದಗಳಿಗೆಲ್ಲಾ ನ್ಯೂನರೂಪಗಳೂ, ಕಡೇಕ್ರಿಯೆಗೆ ಮಾತ್ರ ಪುರುಷಾತ್ಮಕ ಆಖ್ಯಾತರೂಪವೂ ಬರುವದು. ಉದಾ: ಇಂಗ್ಲಿಷರು ವ್ಯಾಪಾರದ ಅಪೇಕ್ಷೆಯಿಂದ ಹಿಂದುಸ್ಥಾನಕ್ಕೆ ಬಂದು, ಹಿಂದಕ್ಕೆ ತಿರುಗದೆ, ಅದನ್ನು ತಮಗೆ ವಶಮಾಡಿಕೊಂಡು, ತಮ್ಮ ಪ್ರಜೆಗಳ ಪರಿಣಾಮವನ್ನು ಚಿಂತಿಸುತ್ತಾ ಅವರಿಗೆ ಬುದ್ಧಿಗಳನ್ನು ಕಲಿಸುತ್ತಾ ಇದ್ದಾರೆ.
2. "ಸಾಧನಾರ್ಥ"—ಕೆಲವು ಪ್ರಯೋಗಗಮ್ಯಗಳಲ್ಲಿ ನ್ಯೂನಕ್ರಿಯೆಯು ಆಖ್ಯಾತಕ್ರಿಯೆಯನ್ನು ಸಾಧಿಸಿದ "ರೀತಿ, ಕಾರಣ, ಕರಣ" ಮೊದಲಾದ ಕಾರಕಾರ್ಥಗಳನ್ನು ಹೇಳುವದು. ಉದಾ: "ರೀತಿ"— ನಗುತ್ತಾ ಹೇಳಿದನು; ಅರಿತು ಮಾಡಿದನು; ತಿಳಿಯದೆ ಮಾಡಿದನು.

"ಕಾರಣ, ಕರಣ"—ಹುಡುಗನು ಓದದೆ ಕೆಟ್ಟನು; ಬಳಪ ಬರೆದು ಸವೆಯಿತು.

ಈ ಪ್ರಯೋಗದಲ್ಲಿ ವಿಕಲ್ಪವಾಗಿ ನ್ಯೂನಕ್ರಿಯೆಗೂ ಆ ಖ್ಯಾತಕ್ರಿಯೆಗೂ ಭಿನ್ನಕರ್ತೃ ಬರುವದು. ಉದಾ: ಘಾಳಿ ಬೀಸಿ ಮರದಿಂದ ಹಣ್ಣು ಬಿತ್ತು; ಹಣ ಹೋಗಿ ಬಡವನಾದನು; ಸರ್ಪವು ರಾಜನನ್ನು ಕಚ್ಚಿ, ವಿಷವು ಏರಿ, ರಾಯನು ಸತ್ತನು.

"ಕಾಲಾರ್ಥ".—ಉದಾ: ವಸಂತ ಬರುತ್ತಲೆ ಕೋಗಿಲೆ ಉಲಿಯುವದು; ಶತ್ರುಗಳು ದೇಶದ ಮೇಲೆ ಬಿದ್ದರೆಂಬ ವರ್ತಮಾನ ಕೇಳುತ್ತಲೆ ಅರಸನು ಯುದ್ಧಕ್ಕೆ ಹೊರಟನು; ಈ ಊರಿಗೆ ಬಂದು ಆರು ವರುಷವಾಯಿತು; ನಿಮ್ಮನ್ನು ನೋಡದೆ ಬಹಳ ದಿವಸ ಕಳೆಯಿತು.

ನಾಮಾತ್ಮಕಕ್ರಿಯಾಪದಗಳ ಪ್ರಯೋಗ

(Uses of the Nominalized Verbal Forms).

144. ಕೃದ್ವಾಚಿಗಳ ಪ್ರಯೋಗವು ಹ್ಯಾಗೆ?

ಹಿಂದೆ (78ನೇ ಉತ್ತರದಲ್ಲಿ) ವಿವರಿಸಿ ತೋರಿಸಿದ ಕೃದ್ವಾಚಿಗಳು ನಾಮಪದಗಳ ಪೂರ್ವದಲ್ಲಿ ಸೇರಿ, ವಸ್ತುಗಳು ಮಾಡುವಂಥ, ಪಡುವಂಥ ಕ್ರಿಯೆಗಳನ್ನು ವಿಶೇಷಿಸುವ ಗಮಕಸಮಾಸದ ಪ್ರಯೋಗವು ಮುಂದೆ ವಿಶೇಷಣಪ್ರಕರಣದ 152ನೇ ಉತ್ತರದಲ್ಲಿ ವಿವರಿಸಲಾದೀತು. ಈ ವಿಶೇಷಣಪ್ರಯೋಗವಲ್ಲದೆ ಇನ್ನು ಕೃದ್ವಾಚಿಗಳಿಗೆ ಉಪಸರ್ಗಗಳನ್ನು ಮತ್ತು ಕೆಲವು ಸ್ಥಾನ, ಕಾಲ, ಪಕ್ಷಾರ್ಥಕ ಅವ್ಯಯಗಳನ್ನು ಪರ ಮಾಡುವ ಉಪವಾಕ್ಯಪ್ರಯೋಗವೂ ವ್ಯವಹರಿಸುವದು. ಇದರೊಳಗೆ ಕೃದ್ವಾಚಿಗೆ ಪರವಾದ ಉಪಸರ್ಗಕ್ಕಾಗಲಿ ಅವ್ಯಯಕ್ಕಾಗಲಿ ಯಾವ ಅರ್ಥ ಉಂಟೋ, ಅದೇ ಅರ್ಥದಲ್ಲಿ ಕೃದ್ವಾಚಿ ಹೇಳುವ ಪೂರ್ವಕ್ರಿಯೆಯು ಪ್ರಧಾನವಾಕ್ಯದ ಆಖ್ಯಾತಕ್ರಿಯಾಪದ ಹೇಳುವ ಉತ್ತರಕ್ರಿಯೆಗೆ ಎದುರಾಗುವದು. ಹ್ಯಾಗಂದರೆ—

1. ಕಾರಣಾರ್ಥಕ ಪೂರ್ವಕ್ರಿಯೆಗಳನ್ನು ಹೇಳುವ ಕೃದ್ವಾಚಿಗಳಿಗೆ "ಕಾರಣ, ಮೂಲ, ನಿಮಿತ್ತ, ಉದ್ದಿಶ್ಯ, [ಸಲುವಾಗಿ]" ಎಂಬಿವು ಪರವಾಗುವವು. ಉದಾ: ಮನುಷ್ಯರು ದೇವರ ಆಜ್ಞೆಯನ್ನು ಮೀರಿದ ಕಾರಣದಿಂದ ಅವರು ಮರಣಸ್ಥರಾದರು; ತಮ್ಮ ಕೈಗೆ ನಿಲಕದ ಮೂಲ ಬಡವರು ಅನೇಕ ಉಪಾಯಗಳನ್ನು ಬಿಡುತ್ತಾರೆ.

2. ರೀತ್ಯರ್ಥಕ ಪೂರ್ವಕ್ರಿಯೆಗಳನ್ನು ಹೇಳುವ ಕೃದ್ವಾಚಿಗಳಿಗೆ "ಪ್ರಕಾರ, ರೀತಿ, ಮೇರೆ, ಪರಿ, ಹಿಪಾದಿಯಲ್ಲಿ, ಹಾಗೆ, ಅಂತೆ, ಬಗ್ಯೆ" ಎಂಬಿವು ಪರವಾಗುವವು. ಉದಾ: ಪಶು ಸತ್ತು ಹೋದ ಹಾಗೆ ಭಕ್ತಿ ಇಲ್ಲದ ಮನುಷ್ಯರು ನಾಶವಾಗುತ್ತಾರೆ; ದೇವರ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರವೇ ಭೂಮಿಯ ಮೇಲೆಯೂ ಆಗಲಿ.

ಇದಲ್ಲದೆ "ಹಾಗೆ, ಅಂತೆ, ಬಗ್ಯೆ" ಎಂಬ ರೀತ್ಯರ್ಥಕ ಅವ್ಯಯಗಳು ಪ್ರಯುಕ್ತವಾದಂಥ ಭವಿಷ್ಯತ್‌ಕೃದ್ವಾಚಿಗಳು ಉತ್ತರಕ್ರಿಯೆಗಳ ಪ್ರಯೋಜನಾರ್ಥವನ್ನು ಹೇಳುವವು. ಉದಾ: ಬೇಟೆ ಆಡುವ ಹಾಗೆ ಬೇಡನು ಅಡವಿಗೆ ಹೊರಟನು.

3. ಕಾಲಾರ್ಥಕ ಪೂರ್ವಕ್ರಿಯೆಗಳನ್ನು ಹೇಳುವ ಕೃದ್ವಾಚಿಗಳಿಗೆ ಪರವಾಗುವ ಅವ್ಯಯಗಳು ಐದು ವಿಧವಾಗಿವೆ. ಹ್ಯಾಗಂದರೆ—

1) ಪೂರ್ವಕ್ರಿಯೆಗೆ ಉತ್ತರಕ್ರಿಯೆಯು ಸಮಾನಕಾಲಿಕ (contemporary)ವಾದದ್ದೆಂದು ಹೇಳುವದಕ್ಕೆ "ಆಗ, ಆಗ್ಯೆ, ಅಂದು" ಎಂಬಿವು ಕೃದ್ವಾಚಿಗೆ ಪರವಾಗುವವು. ಉದಾ: ಸಂಪತ್ತು ಬಂದಾಗ ಅನೇಕರು ಗರ್ವದಿಂದ ಉಬ್ಬಿಕೊಳ್ಳುತ್ತಾರೆ.

2) ಪೂರ್ವಕ್ರಿಯೆಗೆ ಉತ್ತರಕ್ರಿಯೆಯು ಉತ್ತರಕಾಲಿಕ (subsequent) ವಾದದ್ದೆಂದು ಹೇಳುವದಕ್ಕೆ "ಮೇಲೆ,

ಬಳಿಕ, ತರುವಾಯ, ಈಚೆ [=ಇತ್ತ]" ಎಂಬಿವು ಕೃದ್ವಾಚಿಗೆ ಪರವಾಗುವವು. ಉದಾ: ಪೆಟ್ಟು ತಿಂದ ಮೇಲೆ ಅವನಿಗೆ ಬುದ್ಧಿ ಬಂತು.

3) ಪೂರ್ವಕ್ರಿಯೆಗೆ ಉತ್ತರಕ್ರಿಯೆಯ ಆರಂಭವು ಸಮಾನಕಾಲಿಕವಾದದ್ದೆಂದು ಹೇಳುವದಕ್ಕೆ, "ಅಂದಿನಿಂದ, ಇಂದ" ಎಂಬಿವು ಭೂತಕೃದ್ವಾಚಿಗೆ ಪರವಾಗುವವು. ಉದಾ: ಹಿಂದುಸ್ಥಾನವು ಇಂಗ್ಲಿಷರಿಗೆ ವಶವಾದಂದಿನಿಂದ ಯುದ್ಧಗಳು ಕಡಿಮೆಯಾದವು.

4) ಪೂರ್ವಕ್ರಿಯೆಗೆ ಉತ್ತರಕ್ರಿಯೆಯ ಪ್ರವರ್ತನೆಯು ಸಮಾನಕಾಲಿಕವಾದದ್ದೆಂದು ಹೇಳುವದಕ್ಕೆ "ಅಷ್ಟರಲ್ಲಿ [=ಅಷ್ಟರೊಳಗೆ]" ಎಂಬಿವು ಕೃದ್ವಾಚಿಗೆ ಪರವಾಗುವವು. ಉದಾ: ಕಣ್ಣುಕಪಟಿ ಹಾರ್‍ಯಾಡುವಷ್ಟರಲ್ಲಿ ಹುಳಗಳನ್ನು ಹಿಡಿದು ನುಂಗುವದು.

5) ಪೂರ್ವಕ್ರಿಯೆಗೆ ಉತ್ತರಕ್ರಿಯೆಯ ಅಂತವು ಸಮಾನಕಾಲಿಕವಾದದ್ದೆಂದು ಹೇಳುವದಕ್ಕೆ "ಅನಕ, ತನಕ, ವರೆಗೆ, ಮಟ್ಟಿಗೆ, ಪರ್ಯಂತ" ಎಂಬಿವು ಕೃದ್ವಾಚಿಗೆ ಪರವಾಗುವವು. ಉದಾ: ಮಕ್ಕಳು ದೊಡ್ಡವರಾಗುವ ತನಕ ತಂದೆತಾಯಿಗಳು ಅವರನ್ನು ಸಾಕುತ್ತಾರೆ; ತನ್ನ ದುರ್ಮಾರ್ಗ ಬಿಡದನಕ ಪಾಪಿಗೆ ಸಮಾಧಾನವು ಬರುವದಿಲ್ಲ.

4. ಸ್ಥಾನಾರ್ಥಕ ಪೂರ್ವಕ್ರಿಯೆಗಳನ್ನು ಹೇಳುವ ಕೃದ್ವಾಚಿಗಳಿಗೆ "ಅಲ್ಲಿ" ಎಂಬದು ಪರವಾಗುವದು. ಉದಾ: ಹೆಣ ಬಿದ್ದಲ್ಲಿ ಹದ್ದುಗಳು ಕೂಡುವವು.

5. ಪಕ್ಷಾರ್ಥಕ ಪೂರ್ವಕ್ರಿಯೆಗಳನ್ನು ಹೇಳುವ ಕೃದ್ವಾಚಿಗಳಿಗೆ "ರೆ [=ಡೆ ಒಡೆ], ಆಗ್ಯೆ [=ಕಾಲಕ್ಕೆ]" ಎಂಬಿವು ಪರವಾಗುವವು. ಉದಾ: ಕೋಣ ಬೆಳದರೆ ಆನೆ ಆದೀತೇ? ಆಕಳು ಕಪ್ಪಾದರೆ ಹಾಲು ಕಪ್ಪೇ? ಅರಸರ ಸಮೀಪಕ್ಕೆ ಹೋಗುವಾಗ್ಯೆ ಒಬ್ಬನೇ ಹೋಗಬಾರದು.

ಪಕ್ಷಾರ್ಥಕ ಅವ್ಯಯಗಳಿಗೆ ಅಧಿಕ್ಯಾರ್ಥಕ "ಊ" ನಿಪಾತವನ್ನು ಅನುಬಂಧಿಸುವದರಿಂದ "ರೂ [ರು], ಆಗ್ಯೂ [=ಆಗ್ಯು], [ಕಾಲಕ್ಯೂ]" ಎಂಬ ಪ್ರತಿಪಕ್ಷಾರ್ಥಕ ಅವ್ಯಯಗಳು ಆಗುವವು. ಪ್ರತಿಪಕ್ಷಾರ್ಥವಂದರೆ, ಪೂರ್ವಕ್ರಿಯೆಯು ನಡದ ಪಕ್ಷದಲ್ಲಿ ಉತ್ತರಕ್ರಿಯೆಯು ವಿಪರೀತವಾದದ್ದೆಂದು ಹೇಳುವ ಅರ್ಥ. ಉದಾ: ಪ್ರೀತಿ ಇದ್ದರೂ, ಭೀತಿ ಇರಬೇಕು; ಕೀಟ ಸಣ್ಣದಾದರೂ ಕಾಟ ಬಹಳ; ತನಗೆ ಶ್ರಮೆ ಬಂದಾಗ್ಯೂ ಧೈರ್ಯವ ಬಿಡಬಾರದು. ಬಡತನ ಬಿದ್ದ ಕಾಲಕ್ಯೂ ಕಳವು ಮಾಡಬಾರದು.

145. ಕೃನ್ನಾಮಗಳ ಪ್ರಯೋಗವು ಹ್ಯಾಗೆ?

ಹಿಂದೆ (78ನೇ ಉತ್ತರದ 2ರಲ್ಲಿ) ವಿವರಿಸಿದ ಕೃನ್ನಾಮಗಳು ಸಕಲ ವಿಷಯದಲ್ಲಿ ನಾಮಪದಗಳಿಗೂ ಸರ್ವನಾಮಗಳಿಗೂ ಸಮವಾಗಿದ್ದು, ಅವುಗಳಂತೆ ವಿಭಕ್ತಿಗಳನ್ನು ಹೊಂದಿ, ಇವುಗಳ ವಿವಿಧ ಕಾರಕಾರ್ಥಗಳನ್ನು ಹೇಳುವವು; ಮತ್ತು ಆ ನಾಮ ಸರ್ವನಾಮಗಳಂತೆ ಲಕ್ಷಣವಾಚಕ ಆಖ್ಯಾತಗಳಲ್ಲಿ ಪ್ರಯೋಗವಾಗುವವು. ಉದಾ:

ಕಾರಕಕ್ಕೆ—ಹಾಳಿದವನು ಬಾಳ್ಯಾನು; ದೇವರು ತನ್ನನ್ನು ಬೇಡುವವರಿಗೆ ಕೊಡುವನು; ತಪ್ಪು ಮಾಡದವನಲ್ಲಿ ದೋಷ ಹಿಡಿಯಬಾರದು.

ಲಕ್ಷಣವಾಚಕ ಆಖ್ಯಾತಕ್ಕೆ— ಅವರು ಬರುವವರು [ಆಗಿದ್ದಾರೆ]; ನಾವು ಎಂದಿಗೂ ಇದ್ದವರಲ್ಲಾ, ಮೊನ್ನೆ ಹುಟ್ಟಿದವರೇ, ಮತ್ತು ನಾಳೆ ಸಾಯುವವರೇ; ಅವನು ತನ್ನ ವೃತ್ತಾಂತವನ್ನು ಹೇಳುವವನಾದನು.

146. ಕ್ರಿಯಾನಾಮಗಳ ಪ್ರಯೋಗವು ಹ್ಯಾಗೆ?

ಕ್ರಿಯಾನಾಮಗಳು ನಾಮಪದಗಳಿಗೆ ಸಮವಾಗಿ ವಿಭಕ್ತಿಗಳನ್ನೂ ಉಪಸರ್ಗಗಳನ್ನೂ ಹೊಂದಿ, ಇವು ಹೇಳುವ ಎಲ್ಲಾ ಕಾರಕಾರ್ಥಗಳಲ್ಲಿ ಪ್ರಯೋಗವಾಗುವವು.

ಉದಾ: ಪ್ರ.— ತನ್ನನ್ನು ತಾನೇ ತಿಳುಕೊಳ್ಳುವದು ಎಲ್ಲಾ ವಿದ್ಯೆಗಳಲ್ಲಿ ಶ್ರೇಷ್ಠವಾದದ್ದು.

ದ್ವಿ.— ದೇವರು ಲೋಕ ನಿರ್ಮಿಸಿದ್ದನ್ನು ಕಣ್ಣುಗಳಿಂದ ಯಾರೂ ನೋಡಲಿಲ್ಲ.

ತೃ.— ವಿಚಾರಣೆ ಮಾಡುವದರಿಂದ ಬುದ್ಧಿ ಬರುವದು.

ಚ.— ಗ್ರಂಥ ರಚಿಸುವದಕ್ಕೆ ವ್ಯಾಕರಣ ತಿಳಿದಿರಬೇಕು. ಕ್ರಿಯಾನಾಮದ ಚತುರ್ಥೀರೂಪಕ್ಕೂ ಮೂರನೆ ಭಾವರೂಪಕ್ಕೂ ಅರ್ಥಭೇದವಿಲ್ಲ. ಉದಾ: ರಚಿಸುವದಕ್ಕೆ = ರಚಿಸಲಿಕ್ಕೆ.

ಸ.— ವ್ಯಾಪಾರ ನಡಿಸುವವನು ಲೆಖ್ಖ ಮಾಡುವದರಲ್ಲಿ ಜಾಣನಾಗಿರಬೇಕು.

ಕೃನ್ನಾಮ ಕ್ರಿಯಾನಾಮಗಳಿಗೆ ಅವಧಾರಣೆಯ "ಏ"ಕಾರವನ್ನು ಕೂಡಿಸಿ ಪ್ರಯೋಗಿಸುವ ವಾಡಿಕೆಯುಂಟು. ಉದಾ: ಕಲಿತವನೇ ಜಾಣನು; ಮಳೆ ಬೀಳುವದೇ ಹುಲ್ಲು ಚಿಗುರುತ್ತದೆ.

---

3. ವಿಶೇಷಣಪ್ರಕರಣ. Of the Attributive Parts of Speech.

147. ಉಪಪದಗಳು ಯಾವವು?

ವಾಕ್ಯಗಳ ಕಾರಕಾರ್ಥಗಳಲ್ಲಿ ಆಗಲಿ ಲಕ್ಷಣವಾಚಕ ಆಖ್ಯಾತಗಳಲ್ಲಿ ಆಗಲಿ ಪ್ರಯೋಗಿಸುವ ನಾಮಗಳನ್ನು ಧರಿಸುವ ವಸ್ತುಗಳ ಗುಣಸಂಖ್ಯಾದಿ ಲಕ್ಷಣಗಳನ್ನು ವಿಶೇಷಿಸುವದಕ್ಕೆ ಆ ನಾಮಪದಗಳ ಪೂರ್ವದಲ್ಲಿ ಸೇರುವ ಪದಗಳು "ವಿಶೇಷಣ"ಗಳೆಂದೂ, ಇವುಗಳಿಂದ ವಿಶೇಷಿಸಲ್ಪಟ್ಟ ನಾಮಪದಗಳು "ವಿಶೇಷ್ಯ"ಗಳೆಂದೂ ವ್ಯವಹರಿಸುವವು. ಇಂಥಾ ವಿಶೇಷಣಪದಗಳನ್ನು ಮತ್ತೂ ವಿಶೇಷಿಸುವದಕ್ಕೆ ಅವುಗಳ ಪೂರ್ವದಲ್ಲಿ ಸೇರುವ ಪದಗಳು "ಉಪವಿಶೇಷಣ"ಗಳೆಂದು ವರ್ತಿಸುವವು.

148. ವಿಶೇಷಣಗಳು ಎಷ್ಟು ವಿಧವು?

ಹಿಂದೆ (102ನೇ ಉತ್ತರದ IIನೇ ಭಾಗ 7ರಲ್ಲಿ) ವಿವರಿಸಿದ ಗಮಕಸಮಾಸದಲ್ಲಿ ಪ್ರಯೋಗಿಸಿದ ಸರ್ವನಾಮಕ, ಸಂಖ್ಯಾವಾಚಕ, ದಿಗ್ವಾಚಕ, ಕೃದ್ವಾಚಕ ವಿಶೇಷಣಪದಗಳೇ ಹೊರ್ತು ಇನ್ನು ನಾಮಪದಗಳು ಕೃದ್ವಾಚಿಪ್ರಯುಕ್ತರೂಪದಿಂದಲೂ ವಿಶೇಷಣಗಳಾಗಿ ಪ್ರಯೋಗವಾಗುವವು.

149. ಸರ್ವನಾಮಕವಿಶೇಷಣಗಳು ಯಾವವು?

ಅವು ಹಿಂದೆ (60ನೇ ಉತ್ತರದಲ್ಲಿ) ವಿವರಿಸಿ ತೋರಿಸಿ ಪ್ರಶ್ನಾರ್ಥಕ, ನಿದರ್ಶಕ ಸರ್ವನಾಮಗಳೇ. ಇವುಗಳ ಪ್ರಯೋಗಕ್ಕೆ

ಉದಾ:

(ಪ್ರಶ್ನಾರ್ಥಕಗಳಿಗೆ)—ಯಾವ ಹುಡುಗನು? ಎಂಥಾ ಪುಸ್ತಕ?
(ನಿದರ್ಶಕಗಳಿಗೆ—ಸಮೀಪದಲ್ಲಿ)—ಈ ಮನೆ, ಇಂಥಾ ಮನುಷ್ಯ.
(" ದೂರದಲ್ಲಿ)—ಆ ಪುಸ್ತಕ, ಅಂಥಾ ಮಾತು.

150. ಸಂಖ್ಯಾವಾಚಕವಿಶೇಷಣಗಳು ಯಾವವು?

ಅವು ಹಿಂದೆ (62ನೇ ಉತ್ತರದಲ್ಲಿ) ತೋರಿಸಿ ವಿವರಿಸಿದ ಸಂಖ್ಯಾವಾಚಕಗಳೂ ಸಂಖ್ಯಾಪೂರಣಗಳೂ ಪರಿಮಾಣವಾಚಕಗಳೂ ಇವುಗಳಿಂದ (64ನೇ ಉತ್ತರದಲ್ಲಿ ವಿವರಿಸಿದ ಪ್ರಕಾರ) ಹುಟ್ಟಿದ ಸಂಖ್ಯಾವಾಚಕಸಮಾಸಗಳೂ. ಇವುಗಳ ಪ್ರಯೋಗಕ್ಕೆ

ಉದಾ:

(ಸಂಖ್ಯಾವಾಚಕಕ್ಕೆ)—ಹತ್ತು ಕುದುರೆಗಳು; ಹತ್ತು ಮಂದಿ ರಾಹುತರು.
(ಸಂಖ್ಯಾಪೂರಣಕ್ಕೆ)—ಮೂರನೆ ಮಗನು; ಇಪ್ಪತ್ತನೆ ದಿವಸ.
(ಪರಿಮಾಣವಾಚಕಕ್ಕೆ)—ಕೆಲವು ವರುಷಗಳು; ಎಲ್ಲಾ ಮನುಷ್ಯರು.
(ಸಮಾಸಕ್ಕೆ)—ಬೇರೊಂದು ಹೆಸರು; ಒಬ್ಬಾನೊಬ್ಬ ಹುಡುಗ.

ಒಂದು, ಎರಡು, ಮೂರು, ನಾಲ್ಕು ಮುಂತಾದ ಅಂಕೆಗಳ ಹೆಸರುಗಳೆಲ್ಲಾ ನಪುಂಸಕಲಿಂಗಗಳಾಗಿರುವ ಕಾರಣ, ಅವು ನಪುಂ

ಸಕನಾಮಪದಗಳೊಂದಿಗೆ ಮಾತ್ರ ಪ್ರಯೋಗಿಸುವವು. ಅವುಗಳಿಗೆ ಬದಲಾಗಿ ಪುಂಸ್ತ್ರೀಲಿಂಗಗಳ ಪೂರ್ವದಲ್ಲಿ "ಒಬ್ಬ, ಇಬ್ಬರು, ಮೂರು ಮಂದಿ, ನಾಲ್ಕು ಮಂದಿ" ಮೊದಲಾದ ರೂಫಗಳು ಪ್ರಯೋಗವಾಗುವವು. ಉದಾ: ಒಬ್ಬ ಹುಡುಗ, ನಾಲ್ಕು ಮಂದಿ ಹುಡುಗಿಯರು.

151. ಗುಣವಾಚಕವಿಶೇಷಣಗಳು ಯಾವವು?

ವಸ್ತುಗಳ ಗುಣಗಳನ್ನು ವಿಶೇಷಿಸುವದಕ್ಕೆ ಗುಣವಾಚಕ ನಾಮಪದಗಳೇ ಹೊರ್ತು ಇನ್ನು ಹಲವು ದೇಶೀ ಸಂಸ್ಕೃತ ಶಬ್ದಗಳು ಶುದ್ಧ ಗುಣವಾಚಿಗಳಾಗಿ ವಿಶೇಷ್ಯಪದಗಳ ಪೂರ್ವದಲ್ಲಿ ಸೇರುವವು. ಉದಾ:

ದೇಶೀಗುಣವಾಚಿಗೆ—ದೊಡ್ಡ ಆನೆ; ಸಣ್ಣ ಮರ, ತಿಳಿ ನೀರು.

ಸಂಸ್ಕೃತಗುಣವಾಚಿಗೆ—ಉತ್ತಮ ದೇವರು; ಶುದ್ಧ ಮನಸ್ಸು.

ಗುಣವಾಚಿಗಳ ಪ್ರಯೋಗಕ್ಕೆ ಹಿಂದೆ (65ನೇ ಉತ್ತರದಲ್ಲಿ) ವಿವರಿಸಿ ತೋರಿಸಿದ ಕೆಲವು ದಿಗ್ವಾಚಿಗಳ ಪ್ರಯೋಗವು ಸಮವಾಗಿದೆ. ಉದಾ: ಮೂಡಣ ದೇಶ; ಮೇಗಳ ಪೇಟೆ; ಕೆಳಗಣ ಸೀಮೆ.

152. ಕೃದ್ವಾಚಕವಿಶೇಷಣಗಳ ಪ್ರಯೋಗವು ಹ್ಯಾಗೆ?

ಹಿಂದೆ (78ನೇ ಉತ್ತರದಲ್ಲಿ) ವಿವರಿಸಿ ತೋರಿಸಿದ ಮೂರು ವಿಧದ ಕೃದ್ವಾಚಿಗಳನ್ನು ನಾಮಪದಗಳ ಪೂರ್ವದಲ್ಲಿ ಸೇರಿಸುವ ಪ್ರಯೋಗದಲ್ಲಿ ಅವು ಆ ನಾಮಪದಗಳು ಹೇಳುವ ವಸ್ತುಗಳು ಮಾಡುವಂಥ ಪಡುವಂಥ ಕ್ರಿಯೆಗಳನ್ನು ವಿಶೇಷಿಸುವವು. ಈ ಪ್ರಯೋಗದಲ್ಲಿ ಕೃದ್ವಾಚಿಗಳಿಗೆ ವಿಕಲ್ಪವಾಗಿ "ಅಂಥ" ಎಂಬ ಸರ್ವನಾಮಕವಿಶೇಷಣ ಅನುಬಂಧವಾಗುವದು. ಉದಾ: ಅಳುವ[ಂಥ] ಕೂಸು; ಸತ್ತ[ಂಥ] ಹೆಣ; ಕಾಣದ[ಂಥೆ] ಆತ್ಮ.

ಕೃದ್ವಾಚಕವಿಶೇಷಣಗಳ ಪ್ರಯೋಗವು ಕನ್ನಡದಲ್ಲಿ ಬಹಳವಾಗಿ ವ್ಯವಹರಿಸುವದು. ಅವಕ್ಕೆ ಪರವಾದ ವಿಶೇಷ್ಯಪದಗಳು ಸಪ್ತವಿಭಕ್ತಿಗಳ ಎಲ್ಲಾ ಕಾರಕಾರ್ಥಗಳಲ್ಲಿ ಆ ಕೃದ್ವಾಚಿಗಳಿಂದ ವಿಶೇಷಿಸಿದ ಕ್ರಿಯೆಗಳಿಗೆ ಅನ್ವಿತವಾಗುವವು. ಉದಾ:

(ಪ್ರ. ಕರ್ತೃ)—ಹುಲಿ[ಯನ್ನು] ಹೊಡೆದ ಬೇಡನು (=ಯಾವ ಬೇಡನು ಹುಲಿ ಹೊಡೆದನೋ ಅವನೇ).

(ದ್ವಿ. ಕರ್ಮ)—ಬೇಡನು ಹೊಡೆದ ಹುಲಿ (=ಯಾವ ಹುಲಿಯನ್ನು ಬೇಡನು ಹೊಡೆದನೋ ಅದೇ).

(ತೃ. ಕರಣ)—ಬೇಡನು ಹುಲಿ ಹೊಡೆದ ಗುಂಡು; (=ಯಾವ ಗುಂಡಿನಿಂದ ಬೇಡನು ಹುಲಿ ಹೊಡೆದನೋ ಅದೇ).

(" ದಿಕ್ಕು)—ಪ್ರಯಾಣಸ್ಥನು ಹೊರಟ ಪಟ್ಟಣ (=ಯಾವ ಪಟ್ಟಣದ ಕಡೆಯಿಂದ ಪ್ರಯಾಣಸ್ಥನು ಹೊರಟನೋ ಅದೇ).

(ಚ. ನಿಮಿತ್ತ)—ನಾವು ದುಃಖ ಪಟ್ಟ ಕಾರ್ಯ (=ಯಾವ ಕಾರ್ಯಕ್ಕೆ ನಾವು ದುಃಖ ಪಟ್ಟೆವೋ ಅದೇ).

(ಷ. ಅಧಿಕರ್ತೃ)—ಕಣ್ಣು ಹೋದ ಕುದುರೆ (=ಯಾವ ಕುದುರೆಯ ಕಣ್ಣು ಹೋಯಿತೋ ಅದೇ).

(ಸ. ಸ್ಥಾನ)—ನಾವು ವಾಸಿಸುವ ದೇಶ (ಯಾವ ದೇಶದಲ್ಲಿ ನಾವು ವಾಸಿಸುತ್ತೇವೋ ಅದೇ).

ಇದಲ್ಲದೆ ಹಲವು ಪ್ರಯೋಗಗಮ್ಯಗಳಲ್ಲಿ ಕರ್ತರಿಪ್ರಯೋಗಸ್ವರೂಪವಾದ ಕೃದ್ವಾಚಿಗಳಿಗೆ ಕರ್ಮಣಿಪ್ರಯೋಗಾರ್ಥ ಬರುವದು. ಉದಾ: ಸುಲಿದ ಬಾಳೇ ಹಣ್ಣು; ನೂರು ರೂಪಾಯಿಗೆ ಮಾರಿದ ಕುದುರೆ; ಸಾಕ ಕೊಟ್ಟ ಮಗನು.

153. ವಿಶೇಷಣಪ್ರಯೋಗದಲ್ಲಿ ನಾಮಪದಗಳಿಗೆ ಪ್ರಯುಕ್ತವಾಗುವ ಕೃದ್ವಾಚಿಗಳು ಯಾವವು?

"ಆದ, ಅಲ್ಲದ, ಉಳ್ಳ, ಇಲ್ಲದ, ಎಂಬ" ಈ ಐದು ಕೃದ್ವಾಚಿಗಳನ್ನು ನಾಮಪದಗಳಿಗೆ ಅನುಬಂಧಿಸಿ, ಇವನ್ನು ವಿಶೇಷಣಗಳಾಗಿ ಪ್ರಯೋಗಿಸುವದು ಉಂಟು. "ಆದ, ಅಲ್ಲದ" ಎಂಬಿವು ನಿಜನಾಮಪದಗಳಿಗೆ ಹೊರ್ತು, ಇನ್ನು ಹಿಂದೆ (103ನೇ ಉತ್ತರದ 6ರಲ್ಲಿ) ವಿವರಿಸಿದ ವಿಶೇಷಣಾರ್ಥಕ ನಾಮಪದಗಳಿಗೂ ಅನುಬಂಧವಾಗುವವು. ಉದಾ:

"ಆದ"—ಸಾವುಕಾರನಾದ ದೇವದಾಸನು; ಅವನ ಮಗನಾದ ಸುಮಿತ್ರನು; ಕರ್ತನಾದ ದೇವರು; ಬಲಿಷ್ಠರಾದ ಶೂರರು; ಬುದ್ಧಿಹೀನನಾದ ಹುಡುಗ; ನೂತನವಾದ ವಸ್ತ್ರ; ಶ್ರೇಷ್ಠವಾದ ವಜ್ರ.

"ಅಲ್ಲದ"—ವಿಕಾರವಲ್ಲದ ಕಲ್ಲು; ಹಿತಸ್ಥರಲ್ಲದ ಕಪಟಿಗಳು.

"ಉಳ್ಳ"—ಯುಕ್ತಿಯುಳ್ಳ ಹುಡುಗನು; ದುಃಖವುಳ್ಳ ಮನಸ್ಸು; ಕೃಪೆಯುಳ್ಳ ದೇವರು; ಹಲವು ಬೇನೆಗಳುಳ್ಳ ರೋಗಿಷ್ಠರು.

"ಇಲ್ಲದ"—ಬುದ್ಧಿಯಿಲ್ಲದ ಹುಡುಗಿ; ಲೆಖ್ಖವಿಲ್ಲದ ನಕ್ಷತ್ರಗಳು; ಮಾತಿಲ್ಲದ ಮೂಕ; ಕೈಕಾಲುಗಳಿಲ್ಲದ ಸರ್ಪಗಳು.

"ಎಂಬ"—ದೇವದಾಸನೆಂಬ ಸಾವುಕಾರನು; ಸುಮಿತ್ರನೆಂಬ ಅವನ ಮಗನು; ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮವೆಂಬ ಪಂಚೇಂದ್ರಿಯಗಳು; ಸಿಂಹವೆಂಬ ಮೃಗರಾಜನು; ನರಿ ಎಂಬ ಅವನ ಪ್ರಧಾನಿ.

"ಆದ" ಎಂಬದಕ್ಕೆ ರೂಢಿಯಾಗಿ ಲೋಪ ಬರುವದುಂಟು. ಉದಾ: ಸಾವುಕಾರ ದೇವದಾಸ; ಅವನ ಮಗ ಸುಮಿತ್ರ.

154. ಉಪವಿಶೇಷಣಗಳ ಪ್ರಯೋಗವು ಹ್ಯಾಗೆ?

ವಿಶೇಷಣಗಳು ಹೇಳುವ ಲಕ್ಷಣಗಳನ್ನು ಮತ್ತೂ ವಿಶೇಷಿಸುವದಕ್ಕೆ ಅವುಗಳ ಪೂರ್ವದಲ್ಲಿ ಸೇರುವ ಪದಗಳೆಲ್ಲಾ "ಉಪವಿಶೇಷಣಗಳೇ". ಉದಾ: ಬಹಳ ದೊಡ್ಡ ಆನೆ; ಬಳ್ಳೇ ಎತ್ತರ ಮರ.

ಗುಣ[ದಿಕ್ಕು]ಗಳ ತಾರತಮ್ಯಗಳನ್ನು ವಿಶೇಷಿಸುವದಕ್ಕೆ ಗುಣವಾಚಕ [ದಿಗ್ವಾಚಕ] ಉತ್ತರವಿಶೇಷಣಗಳ ಪೂರ್ವದಲ್ಲಿ ಸೇರುವ ಚತುರ್ಥೀ, ಸಪ್ತಮೀವಿಭಕ್ತಿಗಳ ಪ್ರಯೋಗವು ಹಿಂದೆ (137ನೇ ಉತ್ತರದ 10ರಲ್ಲಿ, ಮತ್ತು 138ನೇ ಉತ್ತರದ 5ರಲ್ಲಿ) ವಿವರಿಸಿ ಅದೆ.

ಉಪಮಾನವಾಚಕಶಬ್ದಗಳು ವಿಶೇಷಣಗಳ ಸಂಗಡ ಸಮಾಸಗಳಾಗುವವು. ಉದಾ: ಕೈ ಉದ್ದ ಕಟ್ಟಿಗೆ; ಮರದಂಥ ಆಳು; ಬೆಟ್ಟದಷ್ಟು ಬಂಗಾರ; ಸಕ್ಕರೆಯಂತೆ ಸವಿ.

ಅಭೇಧಸಂಬಂಧವಿಶೇಷಣದ ಪೂರ್ವದಲ್ಲಿ ಮತ್ತು ಅಭೇದ ಸಂಬಂಧ ಮೊದಲಾದ ವಿಶೇಷಣಗಳೆಲ್ಲಾ ಉಪವಿಶೇಷಣಗಳಾಗಿ ಸೇರಬಹುದು. ಉದಾ: ಹುಡುಗನ ತಂದೆಯ ತೋಟದ ಬಾವಿಯ ನೀರು; ಬಹಳ ಐಶ್ವರ್ಯವುಳ್ಳ ಸಾವುಕಾರನಾದ ದೇವದಾಸನ ಮಗ.

---

4. ಅನ್ವಯಪ್ರಕರಣ. Construction.

155. ಅನ್ವಯವಂದರೇನು?

ವಾಕ್ಯಗಳಲ್ಲಿ ಪದಗಳನ್ನು ತಮ್ಮ ತಮ್ಮ ಪರಸ್ಪರ ಸಂಬಂಧಕ್ಕೆ ಅನುಸಾರವಾಗಿ ಒಂದಕ್ಕೊಂದನ್ನು ಪೋಣಿಸುವದೇ "ಅನ್ವಯ" (Construction) ಎಂದು ವ್ಯವಹರಿಸುವದು. ಇದು "ಪದಪರ್ಯಾಯ, ಪದಸಮುಚ್ಚಯ, ಪದಸಮಭಿಹಾರ, ಪದಸಮುಚ್ಚಾಯಕಾವ್ಯಯಗಳು" ಎಂಬ ನಾಲ್ಕು ಸಾಧನಗಳಿಂದ ಆಗುವದು.

ಪದಪರ್ಯಾಯ (Order of Words).

156. ವಾಕ್ಯಗಳಲ್ಲಿ ಪದಗಳ ಪರ್ಯಾಯವು ಹ್ಯಾಗೆ?

ವಾಕ್ಯರಚನೆಯಲ್ಲಿ ಪದಗಳನ್ನು ಒಂದಕ್ಕೊಂದು ಸೇರಿಸುವದಕ್ಕೆ ರೂಢಿ ಬಿದ್ದ ಕ್ರಮವು "ರೂಢಕ್ರಮ" (Conventional Order) ಎಂದೆನ್ನಿಸುವದು. ಇದರ ಮುಖ್ಯ ವಿಧಿಗಳು ಯಾವವಂದರೆ—

1. (ಆಖ್ಯೆ. ಎಂಬ) ಉದ್ದೇಶಪದಕ್ಕೆ ವಿಧೇಯವಾಗಿರುವ ಆಖ್ಯಾತವು ಅದರ ಉತ್ತರದಲ್ಲಿ, ಮತ್ತು ಪುರುಷಾರ್ಥಕ ಆಖ್ಯಾತಕ್ರಿಯಾಪದವು ವಾಕ್ಯದ ಎಲ್ಲ ಪದಗಳ ಕಡೆಯಲ್ಲಿ ಸೇರುವದು. ಉದಾ: ಲೋಕವು ದೊಡ್ಡದು; ಅರಸನು ಆಳುತ್ತಾನೆ.
2. ಕ್ರಿಯೆ ಪೂರ್ಣ ಮಾಡುವ ಕಾರಕಪದಗಳೆಲ್ಲಾ ಕ್ರಿಯಾಪದದ ಪೂರ್ವದಲ್ಲಿ ಸೇರುವವು. ಉದಾ: ಅರಸನು ರಾಜ್ಯದಲ್ಲಿ ಪರಾಕ್ರಮದಿಂದ ಧೊರೆತನ ಮಾಡುತ್ತಾನೆ.

3. ಅದೇ ವಾಕ್ಯದಲ್ಲಿ ವಿವಿಧಾರ್ಥಕ ಅನೇಕ ಕಾರಕಪದಗಳು ಇದ್ದರೆ, ಅವುಗಳೊಳಗೆ ಆಖ್ಯಾತದ ಅರ್ಥವನ್ನು ಪೂರ್ಣ ಮಾಡುವದಕ್ಕೆ ಯಾವದು ಅತ್ಯಗತ್ಯವಾಗಿರುವದೋ ಅದೇ ಆಖ್ಯಾತದ ಸಮೀಪಕ್ಕೆ ಸೇರುವದು; ಅದಕ್ಕಿಂತ ಕಡಿಮೆ ಅಗತ್ಯವಾದವುಗಳು ಅದಕ್ಕಿಂತ ದೂರವಾಗುವವು. ಉದಾ: ಒಂದಾನೊಂದು ದಿವಸದಲ್ಲಿ ಒಬ್ಬ ಹುಡುಗನು ಶಾಲೆಯಲ್ಲಿ ಪರೀಕ್ಷೆಗೆ ಲೇಖನಿಯಿಂದ ಒಂದು ಕಾಗದವನ್ನು ಬರೆದನು.

4. ಒಂದು ಹೊಸ ವಾಕ್ಯವನ್ನು ಅದರ ಹಿಂದೆ ಮುಗಿಸಿದ ವಾಕ್ಯಕ್ಕೆ ಜೋಡಿಸುವ ನಿದರ್ಶಕಸರ್ವನಾಮವಾಗಲಿ, ನಿದರ್ಶಕಸರ್ವನಾಮಕ ವಿಶೇಷಣವುಳ್ಳ ನಾಮಪದವಾಗಲಿ, ಯಾವ ಕಾರಕಾರ್ಥ ಹೇಳಿದರೂ, ಹೊಸ ವಾಕ್ಯದ ಆದಿಯಲ್ಲಿ ಸೇರುವದು. ಉದಾ: ಓಬ್ಬ ಕುರುಡ ಇದ್ದನು, ಇವನಿಗೆ ಹಾದು ಹೋದವರಲ್ಲಿ ಒಬ್ಬೊಬ್ಬನು ದಯದಿಂದ ಒಂದು ದುಡ್ಡನ್ನು ಕೊಟ್ಟನು.

5. ಪ್ರಶ್ನಾರ್ಥಕಶಬ್ದವಾಗಲಿ, ಪ್ರಶ್ನಾರ್ಥಕಸರ್ವನಾಮವಿಶೇಷಣವುಳ್ಳ ನಾಮಪದವಾಗಲಿ, ಯಾವ ಕಾರಕಾರ್ಥ ಹೇಳಿದರೂ, ಕ್ರಿಯಾಪದದ ಸಮೀಪದಲ್ಲಿ ಸೇರುವದು. ಉದಾ: ದುಷ್ಟರು ದೇವರನ್ನು ಯಾವ ಕಾರಣದಿಂದ ನಂಬಲೊಲ್ಲರು?

6. ವಿಶೇಷಣವು ಅದರಿಂದ ವಿಶೇಷಿಸಲ್ಪಟ್ಟ ವಿಶೇಷ್ಯಪದದ ಪೂರ್ವದಲ್ಲಿ ಸೇರುವದು. ಉದಾ: ಬಹಳ ದೊಡ್ಡ ಆನೆ ಕಂಡೆನು.

157. ಈ ವಿಧಿಗಳಿಗೆ ಅಪವಾದಗಳು ಬರುವವೋ?

ಮಾತನಾಡುವದರಲ್ಲಿ ಜನರು ತಮ್ಮ ಶಿಥಿಲಪ್ರಯೋಗದಿಂದ ಮೇಲೆ ವಿವರಿಸಿದ ವಿಧಿಗಳನ್ನು ಬಿಟ್ಟು ಪದಗಳನ್ನು ಪಲ್ಲಟವಾಗಿ ಒಂದಕ್ಕೊಂದನ್ನು ಸೇರಿಸುವದು ಬಹಳವಾಗಿ ಉಂಟು. ಉದಾ: ಮಕ್ಕಳನ್ನು ಪ್ರೀತಿಯಿಂದ ಸಾಕುತ್ತಾರೆ ತಂದೆತಾಯಿಗಳು. ಇದಲ್ಲದೆ ಕವೀಶ್ವರರು ತಮ್ಮ ಕಾವ್ಯಗಳಲ್ಲಿ ಪ್ರಾಸ ಮುಂತಾದ ಛಂದಸ್ಸಿನ ನಿರ್ಬಂಧಗಳಿಂದ

ಪದಗಳನ್ನು ಬಹಳವಾಗಿ ಪಲ್ಲಟಿಸುವರು. ಉದಾ: ಚಿಕ್ಕ ದ್ವೀಪಗಳು, ಮೆಚ್ಚಿದ ವಿದ್ಯೆಗಳು. ಇದಕ್ಕೆ "ವ್ಯತ್ಯಯ" (Inverted Order) ಅನ್ನುವರು.

ಪದಸಮುಚ್ಚಯ (Connexion of Co-ordinate Words).

158. ಪದಸಮುಚ್ಚಯವು ಹ್ಯಾಗೆ?

ಒಂದು ವಾಕ್ಯದಲ್ಲಿ ಅದೇ ಕಾರಕಾರ್ಥ ಹೇಳುವ ಅನೇಕ ಪದಗಳು ಇದ್ದರೆ, ಅವು ತಮ್ಮೊಳಗೆ "ಸಮಾನಾಧಿಕರಣಾನ್ವಿತಪದಗಳೇ" (Co-ordinate words); ಯಾಕಂದರೆ ಅವುಗಳೆಲ್ಲ ವಾಕ್ಯದ ಅದೇ ಎಡೆಯಲ್ಲಿ ಸೇರತಕ್ಕದ್ದು. ಇವನ್ನು ಒಂದಕ್ಕೊಂದು ಕೂಡಿಸುವದೇ "ಪದಸಮುಚ್ಚಯ"ವೆಂದು ವರ್ತಿಸುವದು. ಅದು "ದ್ವಂದ್ವಸಮಾಸ, ಸಂಗ್ರಹಣ, ಸಮುಚ್ಚಯ"ವೆಂಬ ಮೂರು ವಿಧವಾದದ್ದು.

159. ದ್ವಂದ್ವಸಮಾಸವು ಹ್ಯಾಗೆ?

ಸಮುಚ್ಚಯಿಸತಕ್ಕ ನಾಮಪದಗಳನ್ನೆಲ್ಲಾ ತಮ್ಮ ತಮ್ಮ ಪ್ರಕೃತಿರೂಪದಿಂದ ಏಕರಾಶಿಯಲ್ಲಿ ಕೂಡಿಸಿ, ಕಡೇ ಪದದ ಮೇಲೆ ವಿಭಕ್ತಿಪ್ರತ್ಯಯವನ್ನು ಹತ್ತಿಸಿದರೆ, "ದ್ವಂದ್ವಸಮಾಸ"ವೆಂದೆನ್ನಿಸುವದು. ಉದಾ: ಊರು ದೇಶ ದ್ವೀಪಗಳಲ್ಲಿ ಆಕಾಶವು ಒಂದೇ; ರಾಜಭಯ ಚೋರಭಯ ಮೃಗಭಯಗಳು ಅನೇಕರಿಗೆ ಉಂಟು.

160. ಸಂಗ್ರಹಣವು ಹ್ಯಾಗೆ?

ಸಮುಚ್ಚಯಿಸತಕ್ಕ ಪದಗಳ ಒಂದೊಂದನ್ನು ವ್ಯಕ್ತಿಯಾಗಿ ಹೇಳಿದ ಮೇಲೆ, ಅವುಗಳನ್ನೆಲ್ಲಾ ಸಂಗ್ರಹಿಸುವ ಸರ್ವನಾಮದಿಂದಾಗಲಿ ಜಾತಿವಾಚಕದಿಂದಾಗಲಿ ಇನ್ನೊಮ್ಮೆ ಸಂಗ್ರಹವಾಗಿ ಹೇಳುವದು "ಸಂಗ್ರಹಣ"ವೆಂದೆನ್ನಿಸುವದು. ಉದಾ: ರೊಟ್ಟಿ, ಅನ್ನ, ಹಾಲು, ಇವನ್ನು ಎಲ್ಲರು ಉಣ್ಣುತ್ತಾರೆ; ನೋಹನು, ಅವನ ಹೆಂಡತಿ, ಅವನ ಮೂವರು ಕುಮಾರರು, ಇವರ ಹೆಂಡರು, ಈ ಎಂಟು ಜನರು ಜಲಪ್ರಳಯದಲ್ಲಿ ಉಳಿದರು.

161. ಸಮುಚ್ಚಯವು ಹ್ಯಾಗೆ?

ಸಮಾನಾಧಿಕರಣಾನ್ವಿತ ಪದಗಳಲ್ಲಿ ಒಂದೊಂದರ ವಿಭಕ್ತಿ ರೂಪಕ್ಕೆ ಸಮುಚ್ಚಾಯಕಾವ್ಯಯವಾದ "ಊ" ನಿಪಾತವನ್ನು ಅನುಬಂಧಿಸಿದರೆ, "ಶುದ್ಧಸಮುಚ್ಚಯ"ವಾಗುವದು. ಆದರೆ ಈ ನಿಪಾತ ಅನುಬಂಧಿಸದೆ, ಅವನ್ನು ಬರೇ ವಿಭಕ್ತಿರೂಪದಿಂದ ಒಂದಕ್ಕೊಂದು ಕೂಡಿಸಿದರೆ, "ಶಿಥಿಲಸಮುಚ್ಚಯ"ವೆಂದೆನ್ನಿಸುವದು. ಉದಾ:

ಶುದ್ಧಸಮುಚ್ಚಯಕ್ಕೆ—ಎಚ್ಚರದಲ್ಲಿಯೂ ಕನಸಿನಲ್ಲಿಯೂ ಗಾಢ ನಿದ್ರೆಯಲ್ಲಿಯೂ ನಿನ್ನನ್ನು ಕಾಯುವವನು ಯಾರು?

ಶಿಥಿಲಸಮುಚ್ಚಯಕ್ಕೆ—ಮನಸ್ಸಿನಿಂದ, ಮಾತಿನಿಂದ, ನಡತೆಯಿಂದ ಪಾಪಕ್ಕೆ ದೂರವಾಗಿರಬೇಕು.

ಪದಸಮಭಿಹಾರ (Repetition of Words).

162. ಪದಸಮಭಿಹಾರವು ಹ್ಯಾಗೆ?

ವಾಕ್ಯದಲ್ಲಿ ಅದೇ ಪದ ಎರಡು ಸಾರಿ ಹೇಳುವದೇ "ಪದಸಮಭಿಹಾರ"ವೆಂದೆನ್ನಿಸುವದು. ಅದು "ನಾಮಸಮಭಿಹಾರ, ಗುಣಸಮಭಿಹಾರ, ಕ್ರಿಯಾಸಮಭಿಹಾರ, ತಜ್ಜಾತಿದ್ವಿರ್ವಚನ"ವೆಂಬ ನಾಲ್ಕು ವಿಧವಾಗಿದೆ.

1. ಇಮ್ಮೆ ನುಡಿದ ನಾಮಪದವು ಆ ಹೆಸರನ್ನು ಧರಿಸುವ ವಸ್ತುಗಳ ರಾಶಿಯನ್ನೆಲ್ಲಾ ಒಂದೊಂದನ್ನು ವಿಂಗಡಿಸಿ ಹೇಳುವದು. ಅದೇ ಅರ್ಥದಲ್ಲಿ ಸರ್ವನಾಮಗಳಿಗೂ ಸಂಖ್ಯಾವಾಚಕಗಳಿಗೂ ಸಮಭಿಹಾರ ಬರುವದು. ಉದಾ: ಭಿಕ್ಷುಕರು ದೇಶದೇಶವನ್ನು ಸಂಚರಿಸಿ, ಊರೂರಲ್ಲಿ ತಿರುಗಾಡಿ, ಮನೆಮನೆಗೆ ಹೋಗುವರು; ದೇವರು ಒಬ್ಬೊಬ್ಬನಿಗೆ ಅವನವನ ಕ್ರಿಯೆಗಳ ಪ್ರಕಾರ ನ್ಯಾಯತೀರಿಸುವನು.

2. ಇಮ್ಮೆ ನುಡಿದ ಗುಣವಾಚಕ ದಿಗ್ವಾಚಕಗಳು ಆಧಿಕ್ಯಾರ್ಥವನ್ನು ಹೇಳುವವು. ಉದಾ: ದೊಡ್ಡ ದೊಡ್ಡ ಹಡಗಗಳು

ದೂರದೂರ ಬಂದರುಗಳಿಗೆ ಹೋಗುತ್ತವೆ; ಮರದ ತುತ್ತತುದಿಯಲ್ಲಿ ಕೂತ ಮಂಗವು ಬಾವಿಯ ನಟ್ಟನಡುವಿನಲ್ಲಿ ಹಾರಿತು.

3. ಇನ್ಮೆ ನುಡಿದ ಕ್ರಿಯಾಪದಗಳು ಕ್ರಿಯೆಯು ಮತ್ತು ಮತ್ತು ನಡೆಯಿತು ಎಂಬ ಪುನರಾವೃತ್ತ್ಯರ್ಥ ಹೇಳುವವು. ಉದಾ: ತಂದೆಯು ಮಗನಿಗೆ ಬುದ್ಧಿ ಹೇಳಿಹೇಳಿ ಬೇಸತ್ತನು; ಇವನು ದುಷ್ಟರ ಸಂಗತಿಯಲ್ಲಿ ಜರಿಜರಿದು ಕೆಟ್ಟನು; ಹೊಗೆಸೊಪ್ಪು ತಲೆಗೆ ಹತ್ತಿಯೇಹತ್ತಿತು; ನೋಡನೋಡುತ್ತಾ ಅತ್ತನು.

4. ಒಂದು ವಸ್ತುವಿಗೆ ಜೋಡಾದ ವಸ್ತುಗಳನ್ನು ಸೂಚಿಸುವದಕ್ಕೆ ಅದರ ನಾಮವನ್ನು ಅನುಕರಿಸುವ ಮತ್ತೊಂದು ಶಬ್ದವನ್ನು ಜೋಡಿಸುವ ಪ್ರಯೋಗವು ಕನ್ನಡ ಜನರಲ್ಲಿ ಬಹಳವಾಗಿ ವರ್ತಿಸುವದು. ಅದಕ್ಕೆ "ತಜ್ಜಾತಿದ್ವಿರ್ವಚನ" ಎಂಬ ಹೆಸರು. ಉದಾ: ರೊಟ್ಟಿಗಿಟ್ಟಿ, ಹಕ್ಕಿಗಿಕ್ಕಿ, ಅವಳಿಜವಳಿ, ಮನೆಮಾರು, ಹುಳಹುಪ್ಪಟಿ.

ಪದಸಮುಚ್ಚಾಯಕಾವ್ಯಯಗಳ ಪ್ರಯೋಗ
(Uses of Conjunctions).

163. ಪದಸಮುಚ್ಚಾಯಕಾವ್ಯಯಗಳು ಯಾವವು?

ಹಿಂದೆ (94ನೇ ಉತ್ತರದಲ್ಲಿ) ತೋರಿಸಿದ ನಿಪಾತಗಳೂ ಶಬ್ದಗಳೂ ಕ್ರಿಯಾರೂಪಗಳೂ ವಾಕ್ಯಗಳ ಪದಗಳನ್ನು ಒಂದಕ್ಕೊಂದು ಸಮುಚ್ಚಿತ ಮಾಡುವದಕ್ಕೆ ಪ್ರಯೋಗವಾಗುವದರಿಂದ ಅವು "ಪದಸಮುಚ್ಚಾಯಕಾವ್ಯಯ"ಗಳೆಂದೆನ್ನಿಸುವವು.

164. ಇವುಗಳ ಪ್ರಯೋಗವು ಹ್ಯಾಗೆ?

ಅವುಗಳಲ್ಲಿ ನಿಪಾತಗಳು ಪದಗಳ ತುದಿಗೆ ಹತ್ತುವವು. ಅವ್ಯಯಶಬ್ದಗಳೂ ಅವ್ಯಯ ಕ್ರಿಯಾಪದಗಳೂ ಪದಗಳಿಗೆ ಮುಂದಾಗುವವು. ಅವುಗಳು ಹೇಳುವ ಅರ್ಥವಿಶೇಷಗಳು ಯಾವವಂದರೆ—

1. "ಊ—ಊ, ಆದರೂ—ಆದರೂ, ಆಗಲಿ—ಆಗಲಿ, ಮತ್ತು [ಹಾಂಗು], ಕೂಡ, ಸಹ, ಸಹಿತ, ಅಥವಾ, ಇಲ್ಲವೆ, [ಅಲ್ಲವೆ]" ಎಂಬಿವು ನಾನಾ ವಿಧವಾದ ಸಮುಚ್ಚಯಾರ್ಥದಲ್ಲಿ ಪದಗಳನ್ನು ಒಂದಕ್ಕೊಂದು ಜೋಡಿಸುವವು.

2. "ಊ, ಆದರೂ, ಕೂಡ, ಸಹ" ಎಂಬಿವು ಜೋಡಿಲ್ಲದ ಪದಗಳಿಗೆ ಪರವಾದಲ್ಲಿ ಆಧಿಕ್ಯಾರ್ಥವನ್ನು ಹೇಳುವವು. "ಊ, ಆದರೂ" ಎಂಬಿವು ಸರ್ವನಾಮಗಳಿಗೂ ಅವುಗಳಿಗೆ ಸಂಬಂಧವಾದ ಕೆಲವು ಕ್ರಿಯಾವಿಶೇಷಣಗಳಿಗೂ ಮುಂದಾದರೆ, ಆ ಶಬ್ದಗಳ ಅರ್ಥವು ಸಾಮಾನ್ಯವಾಗುವದು.

3. "ಅಲ್ಲ, ಅಲ್ಲದೆ, ಹೊರ್ತು [ಹೊರ್ತಾಗಿ]" ಎಂಬಿವು ಪ್ರತಿಷೇಧಾರ್ಥದಲ್ಲಿ ಪೂರ್ವಪದಕ್ಕೆ ಉತ್ತರಪದವನ್ನು ಎದುರಿಟ್ಟು ಸಮುಚ್ಚಿತ ಮಾಡುವವು.

ಇವಲ್ಲದೆ ಇಲ್ಲಿ ಇನ್ನು ಅವಧಾರಣಾರ್ಥಕ "[ಎ] ಏ" ಕಾರದ, ಮತ್ತು ಪ್ರಶ್ನಾರ್ಥಕ "ಆ, ಏ, ಓ" ಕಾರಗಳ ಪ್ರಯೋಗವನ್ನು ವಿವರಿಸ ತಕ್ಕದ್ದು; ಯಾಕಂದರೆ ಇದು ಅನ್ವಯಿಕ್ಕೆ ಸಂಬಂಧ. ಹ್ಯಾಗಂದರೆ, ಏಕಾರವನ್ನು ಒಂದು ಪದದ ಕೊನೆಯ ಮೇಲೆ ಹತ್ತಿಸಿದರೆ, ಅದು ಆ ಪದಕ್ಕೆ ಬಲಕೊಟ್ಟು ಅದನ್ನು ಅದಕ್ಕೆ ಸಮಾನವಾಗಿರುವ ಎಲ್ಲ ಪದಗಳೊಳಗೆ ವಿಶೇಷಿಸುವದು. ಅದರಂತೆ ಆ, ಏ, ಓಕಾರಗಳಲ್ಲಿ ಒಂದನ್ನು ಪದಗಳ ಕೊನೆಗೆ ಸೇರಿಸುವದರಿಂದ ಅವಕ್ಕೆ ಪ್ರಶ್ನಾರ್ಥ ಬರುವದು.

"ಆ"ಕಾರವು ಪ್ರಶ್ನಾರ್ಥದಲ್ಲಿ ಮುಖ್ಯವಾಗಿ ಮಧ್ಯಮ ಪುರುಷದ ಕ್ರಿಯಾಪದಗಳಿಗೆ ಹತ್ತುವದು.

"ಓ"ಕಾರದ ಪ್ರಶ್ನಾರ್ಥಕ್ಕೆ ಇನ್ನು ಸಂದೇಹಾರ್ಥ ಕೂಡುವ ಕಾರಣ, ಅದು "ವಿಶಂಕಾರ್ಥಕನಿಪಾತ"ವೆಂದು ವ್ಯವಹರಿಸುವದು.

"ಊ, ಏ, ಓ"ಕಾರಗಳ ದೀರ್ಘರೂಪಕ್ಕೆ ಪ್ರತಿಯಾಗಿ ಗ್ರಂಥಗಳಲ್ಲಿ ವಿಕಲ್ಪದಿಂದ ಅವುಗಳ ಹ್ರಸ್ವರೂಪಗಳನ್ನು ಪ್ರಯೋಗಿಸುವರು.

ಮೇಲಿನ ವಿವರಕ್ಕೆ ಉದಾಹರಣೆಗಳು ಯಾವವಂದರೆ—

1. ಸಮುಚ್ಚಯಾರ್ಥಕಗಳು (Copulative Conjunctions).

"ಊ—ಊ."—ಪ್ರೀತಿಯಿಂದಲೂ ಭಯಭಕ್ತಿಯಿಂದಲೂ ದೇವರಿಗೆ ನಡನುಕೊಳ್ಳು (161ನೇ ಉತ್ತರ ನೋಡು).

"ಆದರೂ — ಆದರೂ." — ತಂದೆಗಾದರೂ ತಾಯಿಗಾದರೂ ಮಾನ ಕೊಡು.

"ಆಗಲಿ — ಆಗಲಿ." — ಉಣ್ಣುವದಕ್ಕೆ ಮುಂಚೆ ಆಗಲಿ ಉಂಡ ಮೇಲೆ ಆಗಲಿ ಸಂರಕ್ಷಕನನ್ನು ಸ್ತುತಿಸು.

"ಅಥವಾ, ಇಲ್ಲವೇ [ಅಲ್ಲವೇ]."—ಕತ್ತಲೆಯಲ್ಲಿ ಅಥವಾ ಏಕಾಂತದಲ್ಲಿ ಚಿಕ್ಕವರು ಅಂಜುತ್ತಾರೆ; ಮನುಷ್ಯನ ಮನಸ್ಸು ಅವನ ನುಡಿಯಿಂದ ಇಲ್ಲವೇ ಅವನ ನಡೆಯಿಂದ ಕಾಣಿಸುವದು.

"ಮತ್ತು."— ಕಾರ್ಯ ಶುಭವಾಗುವದಕ್ಕೆ ದೇವರ ದಯ ಮತ್ತು ಸ್ವಂತ ಉಪಾಯ ಬೇಕು.

"ಹಾಂಗು" — ಎಂಬುವದನ್ನು ಧಾರವಾಡ ಮುಂತಾದ ಕೆಲವು ದೇಶಗಳಲ್ಲಿ ಮತ್ತು ಎಂಬ ಅರ್ಥದಲ್ಲಿ ಪ್ರಯೋಗಿಸುವ ಪಾಡಿಕೆಯುಂಟು. ಉದಾ: ಬಲ್ಲವರ ಮುಂದೆ ಹಾಂಗು ಅರಸರ ಮುಂದೆ ಅನೇಕರಿಗೆ ಭಯ ಬರುವದು.

"ಸಹ, ಸಹಿತ, ಕೂಡ." — ಅಣ್ಣನು ತಮ್ಮನು ಸಹ ಶಾಲೆಯಲ್ಲಿ ಕಲಿಯುತ್ತಾರೆ; ಅರಸನು ದಂಡನಾಯಕನು ಸಹಿತ ರಣಭೂಮಿಗೆ ಹೊರಟರು; ಈತನು ಆತನು ಕೂಡ ಯುದ್ಧದಲ್ಲಿ ಸತ್ತರು.

2. ಆಧಿಕ್ಯಾರ್ಥಗಳು (Copulative and Distributive Conjunctions).

"ಸಹ, ಕೂಡಾ."—ಹಿರಿಯರು ಸಹ ದುರ್ಮಾರ್ಗಸ್ಥರಾಗಿದ್ದರೆ, ಚಿಕ್ಕವರು ಸನ್ಮಾರ್ಗಸ್ಥರಾಗಿರುವದು ಹ್ಯಾಗೆ? ಅವರು ಸಹ ದೇವರಿಗೆ ಅಂಜಿಕೊಳ್ಳದೆ ಇದ್ದರೆ, ಇವರು ಕೂಡಾ ಕೆಟ್ಟು ಹೋಗುವರು.

"ಊ, ಆದರೂ."—ಬುದ್ಧಿ ಕೇಳದವನನ್ನು ದೇವರೂ ರಕ್ಷಿಸಲಾರನು; ಗರ್ವವು ಋಷಿಗಳಿಂದಾದರೂ ಗೆಲ್ಲೋಣವಾಗಲಿಲ್ಲ; ದೇವರಿಗೆ ತಿಳಿಯದೆ ಇರುವಂಥಾದ್ದು ಒಂದೂ ಇಲ್ಲ.

ಎಲ್ಲಿಯೂ = ಎಲ್ಲ್ಯಾದರೂ, ಎಂದಿಗೂ, ಎಂದಿಗಾದರೂ, ಅಂತೂ = ಹ್ಯಾಗೂ = ಹ್ಯಾಗಾದರೂ, ಯಾರಾದರೂ, ಏನಾದರೂ, ಒಬ್ಬನಾದರೂ—ಇತ್ಯಾದಿ.

3. ಪ್ರತಿಷೇಧಾರ್ಥಕಗಳು (Disjunctive Conjunctions).

"ಅಲ್ಲ, ಅಲ್ಲದೆ, ಹೊರ್ತು."—ಪ್ರಧಾನಿ ಅಲ್ಲ, ಅರಸನೇ ರಾಜ್ಯದ ಒಡೆಯನು; ಆದ್ದರಿಂದ ಪ್ರಜೆಗಳು ಅವನನ್ನು ಅಲ್ಲ, ಈತನನ್ನೇ ನಂಬಿಕೊಂಡು ಅಂಜಿಕೊಳ್ಳತಕ್ಕದ್ದು; ಪಾಪಾತ್ಮರಿಗೆ ನರಕವಲ್ಲದೆ ಮೋಕ್ಷವಿಲ್ಲ; ದೇವರ ಕೃಪೆಯಿಂದ ಅಲ್ಲದೆ ಪಾಪಪರಿಹಾರವಿಲ್ಲ; ಆತನ ವಾಕ್ಯವೇ ಹೊರ್ತು, ನಮಗೆ ಸತ್ಯಶಾಸ್ತ್ರ ಇಲ್ಲ; ತಲೆ ತಾಗಿದ್ದಲ್ಲದೆ ಬುದ್ಧಿ ಬಾರದು; ನಾವು ಬೇಡಿದ ಹೊರ್ತು, ದೇವರು ಕೊಡನು; ತತ್ವಶಾಸ್ತ್ರ ಓದಿದವರು ಬಾಯಲ್ಲಿ ಜ್ಞಾನದ ಮಾತನ್ನು ಹೇಳುತ್ತಾರಲ್ಲದೆ, ಪಾಪದ ಇಚ್ಛೆಗಳನ್ನು ಜಯಿಸಲಿಲ್ಲ; ಅವರು ಗರ್ವದಿಂದ ಉಬ್ಬಿಕೊಂಡಿದ್ದಾರೆ ಹೊರ್ತು, ದೇವರ ಕೃಪೆಯನ್ನು ಅನುಭವ ಮಾಡಲಿಲ್ಲ.

4. ಅವಧಾರಣಾರ್ಥಕವು (Emphatic Particle).

"[ಎ]ಏ."—ತನ್ನನ್ನು ತಿಳಿಯದವನೇ ಅಜ್ಞಾನಿ; ದೇವರ ಭಕ್ತರು ಸುಜ್ಞಾನಿಗಳೇ; ಇಹಭೋಗಿಗಳಿಗೆ ಭೂಲೋಕವೇ ಸ್ವರ್ಗ, ಅವರ ಮುಂದಿನ ಗತಿ ನರಕವೇ; ಸದ್ಭಕ್ತಿಯಿಂದಲೇ ಜ್ಞಾನ, ಸುಜ್ಞಾನದಿಂದಲೇ ಸದ್ಭಕ್ತಿ ಹುಟ್ಟುವದು; ತಿಳಿಯದಲೆ ಮಾಡಿದ ತಪ್ಪನ್ನು ಎಚ್ಚರವಾಗುತ್ತಲೆ ಬಿಡಬೇಕು. ಇದನ್ನು ಮಾಡಿದವನು ನಾನಲ್ಲ ನೀನೇ.

5. ಪ್ರಶ್ನಾವಿಶಂಕಾರ್ಥಕಗಳು (Interrogative Particles).

"ಆ, ಏ, ಓ."—ಎದ್ದಿರಾ? ಉಂಡಿರಾ? ಸಲಹುವಾತನನ್ನು ಕೊಂಡಾಡುತ್ತೀರಾ? ಕೋಣ ಬೆಳದರೆ, ಆನೆ ಆದೀತೇ? ಉಂಟು ಮಾಡಿದ ದೇವರು ಊಟವ ಕೊಡಲಾರನೇ? ಇದನ್ನು ಮಾಡಿದವನು ನೀನೋ ಅವನೋ? ಅವನು ಲಕ್ಷ್ಮೀಶ್ವರನೋ ಭಿಕ್ಷುಕನೋ ನಾನು ಅರಿಯೆನು; ಎಂತೆಂತೋ ಒಳ್ಳಿತಾಯಿತು?

---

5. ವಾಕ್ಯಸಮುಚ್ಚಯಪ್ರಕರಣ.

Connexion of Sentences.

165. ವಾಕ್ಯಸಮುಚ್ಚಯವಂದರೇನು?

ತಮ್ಮ ತಮ್ಮ ಅರ್ಥದಿಂದ ಒಂದಕ್ಕೊಂದು ಸಂಬಂಧವಾಗಿರುವ ವಾಕ್ಯಗಳನ್ನು ಒಂದಕ್ಕೊಂದು ಕೂಡಿಸುವದೇ "ವಾಕ್ಯಸಮುಚ್ಚಯ"ವೆಂದು ವರ್ತಿಸುವದು. ವಾಕ್ಯಸಮೂಹದಲ್ಲಿರುವ ಮುಖ್ಯ ವಾಕ್ಯವು "ಪ್ರಧಾನವಾಕ್ಯ" (Principal Sentence) ವೆಂದೆನ್ನಿಸಿಕೊಳ್ಳುವದು. ಅದಕ್ಕೆ ಸಮುಚ್ಚಿತವಾಗುವ ವಾಕ್ಯವು ಅದಕ್ಕೆ ಸಮಾನವಾಗಿದ್ದರೆ, "ಸ್ವತಂತ್ರವಾಕ್ಯ" (Co-ordinate Sentence) ಎಂದೂ ಅದಕ್ಕೆ ಅಧೀನವಾಗಿದ್ದರೆ, "ಉಪವಾಕ್ಯ" (Subordinate Sentence) ಎಂದೂ ಹೇಳುವರು. ಸ್ವತಂತ್ರ ವಾಕ್ಯಗಳೂ ಉಪವಾಕ್ಯಗಳೂ ಕೂಡಿರುವ ವಾಕ್ಯಸಮುದಾಯಕ್ಕೆ "ವಾಕ್ಯಮಾಲೆ" (Period) ಎಂಬ ಹೆಸರು.

ಸ್ವತಂತ್ರವಾಕ್ಯಸಮುಚ್ಚಯ

(Connexion of Co-ordinate Sentences).

166. ಸ್ವತಂತ್ರವಾಕ್ಯವಂದರೇನು?

ವಾಕ್ಯಗಳು ತಮ್ಮೊಳಗೆ ಒಂದಕ್ಕೊಂದು ಸಂಬಂಧವಾದ ಆಲೋಚನೆಗಳನ್ನು ಹೇಳಿ ಒಂದಕ್ಕೊಂದು ಸಮಾನವಾಗಿದ್ದರೆ, "ಸ್ವತಂತ್ರವಾಕ್ಯ"ಗಳೆಂದೆನ್ನಿಸುವವು. ಉದಾ: ಸೂರ್ಯನು ಪ್ರಕಾಶಿಸುತ್ತಾನೆ; ಅವನ ಕಿರಣಗಳು ಭೂಮಿಯ ಮೇಲೆ ಬೀಳುತ್ತವೆ; ಅವನ ಬಿಸಿಲಿನಿಂದ ಕಲ್ಲುಗಳು ಕಾಯುತ್ತವೆ.

ಈ ಮೂರರಲ್ಲಿ ಮೊದಲನೇ ಪ್ರಧಾನವಾಕ್ಯದಲ್ಲಿರುವ ಸೂರ್ಯನ ಸಂಬಂಧವಾದ ಆಲೋಚನೆಗಳನ್ನು ಉಳಿದ ಎರಡು ವಾಕ್ಯಗಳು ಹೇಳುತ್ತವೆ. ಆ ಆಲೋಚನೆಗಳು ತಮ್ಮೊಳಗೆ ಒಂದಕ್ಕೊಂದು ಸರಿ ಇರುವ ಕಾರಣ, ಅವನ್ನು ಹೇಳುವ ವಾಕ್ಯಗಳು ಸ್ವತಂತ್ರವಾಕ್ಯಗಳು.

167. ಸ್ವತಂತ್ರವಾಕ್ಯಗಳ ಸಮುಚ್ಚಯವು ಹ್ಯಾಗೆ?

ಸಮುಚ್ಚಯವಾಗುವ ಸ್ವತಂತ್ರವಾಕ್ಯಗಳೊಳಗಣ ಸಂಬಂಧವನ್ನು ವಾಕ್ಯರಚನೆಯಲ್ಲಿ ಕಾಣಿಸುವದಕ್ಕೆ ನಾಲ್ಕು ವಿಧದ ವಾಕ್ಯಸಮುಚ್ಚಾಯಕ ಪದಗಳು ಪ್ರಯೋಗವಾಗುವವು. ಹ್ಯಾಗಂದರೆ:

1. ಪೂರ್ವವಾಕ್ಯಕ್ಕೆ ಪರವಾಕ್ಯವನ್ನು ಜೋಡಿಸುವಂಥಾವು (Copulative Conjunctions) ಯಾವವಂದರೆ:

   "ಮತ್ತು [ಹಾಂಗೆಯೆ], ಮೊದಲು, ಇನ್ನು, ಮೇಲೆ, [ಈ ಮೇಲೆ, ಆ ಮೇಲೆ], ಬಳಿಕ, ತರುವಾಯ, ಕಡೆಗೆ [=ಕಡೇಲಿ], ಇದಲ್ಲದೆ"—ಇತ್ಯಾದಿ. ಉದಾ: ಪ್ರಾಣಿಗಳು ಉಸುರಾಡುತ್ತವೆ, ಮತ್ತು ಸಂಚರಿಸುತ್ತವೆ, ಹಾಂಗೆಯೆ ಮರಿ ಮಾಡುತ್ತವೆ; ಮನುಷ್ಯರು ಹುಟ್ಟುವಾಗ ಮೊದಲು ಕೂತುಕೊಳ್ಳ

ಲಾರರು, ಆ ಮೇಲೆ ನಡಿಯ ಕಲಿಯುತ್ತಾರೆ, ಇನ್ನು ಸ್ವಲ್ಪ ದಿವಸಗಳಲ್ಲಿ ಮಾತನಾಡಲಾರಂಭಿಸುತ್ತಾರೆ, ತರುವಾಯ ಶಾಲೆಯಲ್ಲಿ ಅಕ್ಷರಾಭ್ಯಾಸ ಮಾಡುತ್ತಾರೆ, ಬಳಿಕ ಒಂದು ಉದ್ಯೋಗ ಕಲಿತು ನಡಿಸುತ್ತಾರೆ, ಕಡೆಗೆ ಸಾಯುತ್ತಾರೆ; ಪಶುಗಳು ಮನುಷ್ಯರಿಗೆ ಹಾಲು ಕೊಡುತ್ತವೆ, ಇದಲ್ಲದೆ ಅವುಗಳು ನೇಗಿಲು ಬಂಡಿಗಳನ್ನು ಎಳೆಯುತ್ತವೆ, ಮತ್ತು ಭಾರಗಳನ್ನು ಹೊತ್ತುಕೊಂಡು ದೂರ ಊರುಗಳಿಗೆ ಹೋಗುತ್ತವೆ.

2. ಪೂರ್ವವಾಕ್ಯಕ್ಕೆ ವಿರೋಧವಾಗಿ ಪರವಾಕ್ಯವನ್ನು ಮಾಡುವಂಥಾವು (Disjunctive Conjunctions) ಯಾವವಂದರೆ: "ಆದರೆ, ಪರಂತು, ಆದರೂ, ಆದಾಗ್ಯೂ [ಇದ್ದರೂ, ಇದ್ದಾಗ್ಯೂ], ಅಲ್ಲದೆ, ಹೊರ್ತು, ಇಲ್ಲವೆ, ಅಲ್ಲವೆ"—ಇತ್ಯಾದಿ. ಉದಾ: ಅನೇಕರಿಗೆ ಒಳ್ಳೇ ಉಪಾಯ ತಿಳಿಯುವದು, ಆದರೆ ಅದನ್ನು ನಡಿಸುವದಕ್ಕೆ ಅವರಿಗೆ ಸಾಮರ್ಥ್ಯವಿಲ್ಲ; ಒಬ್ಬ ಧೊರೆ ಅವನ ಪ್ರಧಾನಿ ಇದ್ದರು, ಆದರೆ ಪ್ರಧಾನಿ ತಿಳಿದವನಲ್ಲ; ಉಪಾಧ್ಯಾಯನು ಹುಡುಗನಿಗೆ ಪಾಠ ಚನ್ನಾಗಿ ಹೇಳಿದನು, ಆದರೂ ಹುಡುಗನು ಗ್ರಹಿಸಲಿಲ್ಲ; ಹಾಲು ಹೆಪ್ಪುಗಟ್ಟಿ ತುಪ್ಪ ಆಗುವದಲ್ಲದೆ ತುಪ್ಪ ಹಾಲಾದೀತೇ? ಸದ್ವಿಶ್ವಾಸದಿಂದ ಮೋಕ್ಷ ಆಗುತ್ತದೆ ಹೊರ್ತು, ಮತ್ತೆ ಏನು ತಿಳಿದರೂ ಮೋಕ್ಷವಾಗುವದಿಲ್ಲ; ಅರಸನೇ! ನಿನಗೆ ಪರಾಕ್ರಮ ಉಂಟಾದರೆ, ಸಿಂಹಾಸನದ ಮೇಲೆ ಕುಳ್ಳಿರು, ಇಲ್ಲವೆ ಬೇಡ.

3. ಪೂರ್ವವಾಕ್ಯವು ಪರವಾಕ್ಯಕ್ಕೆ ಮೂಲವೆಂದು ಹೇಳುವಂಥಾವು (Illative Conjunctions) ಯಾವವಂದರೆ:

"ಕಾರಣ, ಅದು ಕಾರಣ, ಅದರ ನಿಮಿತ್ತ, ಅದರ ದೆಸೆಯಿಂದ, ಆದಕಾರಣ, ಆದ್ದರಿಂದ, ಹೀಗಾದ್ದರಿಂದ, ಹೀಗಾಗಿ, ಹೀಗಿರಲಾಗಿ, ಹಾಗಾದರೆ"—ಇತ್ಯಾದಿಗಳು.

ಉದಾ: ಮನುಷ್ಯರು ಪಾಪದಲ್ಲಿ ಬಿದ್ದರು, ಅದು ಕಾರಣ ಇಷ್ಟು ಕಷ್ಟ ಪಡುತ್ತಾರೆ; ಈ ಜೀವವು ಸ್ಥಿರವಲ್ಲ, ಆದ್ದರಿಂದ ಮುಂದಿನ ಗತಿಗೆ ಚಿಂತೆ ಮಾಡು; ಈ ದೇಶದವರು ಕುಲಛಲದಿಂದ ಭೇದಭೇದವಾಗಿದ್ದಾರೆ, ಹೀಗಾದ್ದರಿಂದ ಪರದೇಶಸ್ಥರಿಗೆ ವಶವಾದರು; ದೇವರ ಚಿತ್ತವೇ ನಮಗೆ ಆಜ್ಞೆ, ಹಾಗಾದರೆ, ನಾವು ನಮ್ಮ ಮನಸ್ಸಿಗೆ ಬಂದ ಹಾಗೆ ನಡಿಯಬಾರದು.

4. ಪೂರ್ವವಾಕ್ಯಕ್ಕೆ ಪರವಾಕ್ಯವು ವಿವರವೆಂದು ಹೇಳುವಂಥಾವು (Explanatory Conjunctions) ಯಾವವಂದರೆ:—"ಅಂದರೆ, ಏನಂದರೆ, ಯಾಕಂದರೆ, ಯಾತಕ್ಕಂದರೆ, ಏನು ಕಾರಣವೆಂದರೆ, ಹ್ಯಾಗಂದರೆ"—ಇತ್ಯಾದಿಗಳು. ಉದಾ: ಮನುಷ್ಯರು ಮರ್ತ್ಯರು, ಅಂದರೆ ಅವರು ಸಾಯುತ್ತಾರೆ; ಎರಡನೆಯವರನ್ನು ಕೆಡಿಸುವ ಗುಣ ಈ ದೇಶದವರಲ್ಲಿ ಬಹಳ ಉಂಟು, ಏನು ಕಾರಣವಂದರೆ ಪರಿಶುದ್ಧ ದೇವರಿಗೆ ಅಂಜಿಕೊಳ್ಳುವ ಭಯವೂ ಮನುಷ್ಯನಿಗೆ ನಾಚಿಕೊಳ್ಳುವ ಅಭಿಮಾನವೂ ಅವರಲ್ಲಿ ಕಡಿಮೆ ಆಗಿದೆ; ಪಾಪಿಷ್ಟರ ಮೇಲೆ ದೇವರ ಕೋಪವು ಭಾರವಾಗಿದೆ, ಹ್ಯಾಗಂದರೆ ಅವರಿಗೆ ಒಳಗೆ ಹೊರಗೆ ಸಮಾಧಾನವಿಲ್ಲ, ಮತ್ತು ಅನೇಕ ವ್ಯಸನ ಚಿಂತೆ ಉಪದ್ರವಾದಿಗಳಿಂದ ಬಳಲುತ್ತಾರೆ.

ಉಪವಾಕ್ಯಸಮುಚ್ಚಯ

(Connexion of Subordinate Sentences).

168. ಉಪವಾಕ್ಯವಂದರೇನು?

ತನ್ನಷ್ಟಕ್ಕೆ ಸಂಪೂರ್ಣ ಆಲೋಚನೆಯನ್ನು ಹೇಳದೆ, ಮತ್ತೊಂದು ವಾಕ್ಯದ ಕಾರಕಪದದ ಸ್ಥಳದಲ್ಲಿ ಸೇರುವ ವಾಕ್ಯವು "ಉಪ

ವಾಕ್ಯ"ವೆಂದು ವ್ಯವಹರಿಸುವದು; ಯಾಕಂದರೆ ಇಂಥಾ ವಾಕ್ಯಕ್ಕೆ ಸ್ವತಂತ್ರವಿಲ್ಲ, ಅದು ಮತ್ತೊಂದಕ್ಕೆ ಅಧೀನವಾಗಿದೆ.

169. ಉಪವಾಕ್ಯಗಳು ಎಷ್ಟು ವಿಧವು?

"ಅಪೂರ್ಣ ಉಪವಾಕ್ಯ" (Incomplete Subordinate Sentence), "ಪೂರ್ಣ ಉಪವಾಕ್ಯ" (Complete Subordinate Sentence) ಎಂಬ ಎರಡು ವಿಧವು. ಹ್ಯಾಗಂದರೆ, ಯಾವ ಉಪವಾಕ್ಯಗಳ ಅಂತ್ಯಕ್ರಿಯಾಪದಕ್ಕೆ ಪುರುಷಾತ್ಮಕ ಆಖ್ಯಾತರೂಪವಿರುವದಿಲ್ಲವೋ, ಅವು ಅಪೂರ್ಣ ಉಪವಾಕ್ಯಗಳೆಂದು ತಿಳುಕೊಳ್ಳತಕ್ಕದ್ದು; ಆದರೆ ಯಾವ ಉಪವಾಕ್ಯಗಳ ಅಂತ್ಯಕ್ರಿಯಾಪದಕ್ಕೆ ಪುರುಷಾತ್ಮಕ ಆಖ್ಯಾತರೂಪವಿರುವದೋ ಅವು ಸಂಪೂರ್ಣ ಉಪವಾಕ್ಯಗಳೆಂದು ವ್ಯವಹರಿಸುವವು.

170. ಅಪೂರ್ಣ ಉಪವಾಕ್ಯಗಳಂದರೆ ಏನು? ಅವುಗಳ ಸಮುಚ್ಚಯವು ಹ್ಯಾಗೆ?

ಯಾವ ಉತ್ತರಕ್ರಿಯೆಗೆ ಅದರ ಕರ್ತೃವಿಗೆ ಬಿಂಗಡವಾದ ಭಿನ್ನಕರ್ತೃವಿರುವದೋ ಅದು ಅಪೂರ್ಣ ಉಪವಾಕ್ಯವೆಂದು ತಿಳುಕೊಳ್ಳತಕ್ಕದ್ದು.

ಹಿಂದೆ ಕಾರಕಪ್ರಕರಣದಲ್ಲಿ ವಿವರಿಸಿದ ಪ್ರಕಾರ, ವಿವಿಧ ಕಾರಕಾರ್ಥಗಳನ್ನು ಹೇಳುವದಕ್ಕೆ ವಿಭಕ್ತಿ ಉಪಸರ್ಗಗಳುಳ್ಳ ನಾಮಪದಗಳೇ ಹೊರ್ತು, ಇನ್ನು ಧಾತುಗಳ ಭಾವರೂಪಗಳೂ ನ್ಯೂನಗಳೂ ಉಪಸರ್ಗ ಅವ್ಯಯಪ್ರಯುಕ್ತಕೃದ್ವಾಚಿಗಳೂ ಕೃನ್ನಾಮ ಕ್ರಿಯಾನಾಮಗಳೂ ಕಾರಕಪದಗಳ ಸ್ಥಳಗಳಲ್ಲಿ ಸೇರಿಕೊಂಡು, ತಾವು ಹೇಳುವ ಪೂರ್ವಕ್ರಿಯೆಯಿಂದ ಉತ್ತರಕ್ರಿಯೆಯ ಅರ್ಥವನ್ನು ನಾನಾ ವಿಧವಾಗಿ ಪೂರ್ಣ ಮಾಡುವವು. ಉದಾ:

(ಭಾವರೂಪಕ್ಕೆ)—ಧರ್ಮರಾಜನು ಆಳುತ್ತಿರಲಾಗಿ ಪ್ರಜೆಗಳು ಸುಖದಿಂದ ಇದ್ದರು; ಮಳೆಗರಿಯಲು ಪೈರು ಬೆಳಿಯಿತು.

(ನ್ಯೂನಕ್ಕೆ) — ವಸಂತ ಬರುತ್ತಲೇ ಕೋಗಿಲೆ ಉಲಿಯುವದು;
ಸರ್ಪ ಕಚ್ಚಿ ವಿಷವೇರಿತು.

(ಕೃದ್ವಾಚಿಗೆ) — ತಂದೆ ಹೇಳಿದ ಕಾರಣ ಮಗನು ಮಾಡಿದನು;
ಹೆಣ ಬಿದ್ದಲ್ಲಿ ಹದ್ದುಗಳು ಕೂಡುವವು;
ಆಕಳು ಕಪ್ಪಾದರೆ, ಹಾಲು ಕಪ್ಪಾದೀತೇ?

(ಕೃನ್ನಾಮಕ್ಕೆ) — ಹುಟ್ಟಿಸಿದವನು ಹುಲ್ಲು ಮೇಯಿಸುವನೋ?

(ಕ್ರಿಯಾನಾಮಕ್ಕೆ) — ದೇವರು ಲೋಕವನ್ನು ನಿರ್ಮಿಸಿದ್ದನ್ನು
ಮನುಷ್ಯರೊಳಗೆ ಯಾರೂ ನೋಡಲಿಲ್ಲ.

ಪೂರ್ವಕ್ರಿಯೆಗೂ ಉತ್ತರಕ್ರಿಯೆಗೂ ಅದೇ ಕರ್ತೃ ಇದ್ದರೆ, ಪ್ರಧಾನವಾಕ್ಯದಲ್ಲಿ ಅದನ್ನು ಸೂಚಿಸತಕ್ಕ ಸರ್ವನಾಮಕ್ಕೆ ಲೋಪ ಬರುವದು. ಉದಾ: ಮನುಷ್ಯರು ಪಾಪ ಮಾಡಿದ ಕಾರಣ [ಅವರು] ಮರಣಸ್ಥರಾದರು; ಕೋಣ ಬೆಳದರೆ, [ಅದು] ಆನೆ ಆದೀತೇ?

171. ಪೂರ್ಣ ಉಪವಾಕ್ಯಗಳು ಎಷ್ಟು ವಿಧವು?

"ಸಂಬಂಧಿತ ಉಪವಾಕ್ಯ" (Relative Sentence) "ಸೂಚಿತ ಉಪವಾಕ್ಯ" (Indicated Sentence) ಎಂಬ ಎರಡು ವಿಧವು.

172. ಸಂಬಂಧಿತ ಉಪವಾಕ್ಯಗಳ ಸಮುಚ್ಚಯವು ಹ್ಯಾಗೆ?

ಉಪವಾಕ್ಯದಲ್ಲಿ ತಕ್ಕಂಥ ಪ್ರಶ್ನಾರ್ಥಕಶಬ್ದವನ್ನೂ ಪ್ರಧಾನ ವಾಕ್ಯದ ಆದಿಯಲ್ಲಿ ಆ ಪ್ರಶ್ನೆಗೆ ಪ್ರತ್ಯುತ್ತರವಾದ ನಿದರ್ಶಕಶಬ್ದ ವನ್ನೂ ಸೇರಿಸುವದರಿಂದ ಸಂಬಂಧಿತ ಉಪವಾಕ್ಯಗಳು ತಮ್ಮ ಪ್ರಧಾನವಾಕ್ಯಗಳಿಗೆ ಸಮುಚ್ಚಿತವಾಗುವವು. ಈ ಪ್ರಯೋಗದಲ್ಲಿ ಉಪವಾಕ್ಯದ ಕೊನೆಗೆ ಪ್ರಶ್ನಾರ್ಥಕ "ಓ"ಕಾರವು ನಿತ್ಯವಾಗಿ ಹತ್ತುವದು. ಉದಾ: ಯಾವನು ಪಾಪ ಮಾಡುತ್ತಾನೋ, ಅವನು, ತಾಪವ ಪಡುವನು; ನಿನ್ನ ಗೆಳೆಯರು ಎಂಥವರೋ, ಅಂಥವನು ನೀನೇ; ಎರಡನೆಯವರು ನಿನಗೆ ಹ್ಯಾಗೆ ಮಾಡಬೇಕೋ, ಹಾಗೆಯೇ ಅವರಿಗೆ

ಮಾಡು; ದೇವರ ತಾಳ್ಮೆ ಎಂದು ತೀರುವದೋ, ಅಂದು ಲೋಕಕ್ಕೆ ಅಂತ್ಯ ಬರುವದು.

ಈ ಸಂಬಂಧಿತ ಉಪವಾಕ್ಯಗಳ ಪ್ರಯೋಗವು ಸಂಸ್ಕೃತ ಮುಂತಾದ ಕೆಲವು ಭಾಷೆಗಳಲ್ಲಿ ಬಹಳವಾಗಿ ವರ್ತಿಸುವದು. ಆದರೆ ಶುದ್ಧ ಕನ್ನಡದಲ್ಲಿ ಅದು ಅಪೂರ್ವವಾದದ್ದು; ಯಾಕಂದರೆ ಉಪಕ್ರಿಯೆಗೆ ಕೃದ್ವಾಚಿ ವಿಶೇಷಣರೂಪವನ್ನು ಕೊಡುವದೇ ಬುಡದಿಂದ ಬಂದ ದೇಶೀಯವ್ಯವಹಾರದ ಪ್ರಕಾರ ಕನ್ನಡದಲ್ಲಿ ಸರಳ ವಾಕ್ಯರಚನೆ ಎಂದೆನ್ನಿಸುವದು. ಉದಾ: ಪಾಪ ಮಾಡುವವನು ತಾಪ ಪಡುವನು; ನಿನ್ನ ಗೆಳೆಯರಂತೆ ನೀನೇ. ಎರಡನೆಯವರು ನಿನಗೆ ಮಾಡತಕ್ಕಂತೆ ಅವರಿಗೆ ಮಾಡು; ದೇವರ ತಾಳ್ಮೆ ತೀರಿದಾಗ ಲೋಕಕ್ಕೆ ಅಂತ್ಯ ಬರುವದು.

173. ಸೂಚಿತ ಉಪವಾಕ್ಯಗಳ ಸಮುಚ್ಚಯವು ಹ್ಯಾಗೆ?

"ಎಂದು, ಎಂತ=ಅಂತ [ಅನ್ನುತ್ತಾ], ಅಂತೆ [=ಅನ್ನುತ್ತದೆ], ಎಂಬ, ಎಂಬದು" ಮೊದಲಾದ "ಎನ್ನು [=ಅನ್ನು]" ಧಾತುವಿನ ರೂಪಗಳಿಂದ ಆಖ್ಯಾತ ಉಪವಾಕ್ಯವನ್ನು ಪ್ರಧಾನ ವಾಕ್ಯಕ್ಕೆ ಸೇರಿಸುವದೇ ಸೂಚಿತ ಉಪವಾಕ್ಯಸಮುಚ್ಚಯವೆಂದು ವ್ಯವಹರಿಸುವದು. ಇದರ ಪ್ರಯೋಗವು ಹ್ಯಾಗಂದರೆ—

1. "ಹೇಳು, ನುಡಿ" ಮೊದಲಾದ ವಚನಾರ್ಥಕಧಾತುಗಳು, "ತಿಳಿ, ಕಾಣು" ಮೊದಲಾದ ಜ್ಞಾನಾರ್ಥಕಧಾತುಗಳು, "ಬೇಡು, ಆಜ್ಞಾಪಿಸು" ಮೊದಲಾದ ಇಚ್ಛಾರ್ಥಕಧಾತುಗಳು, ಇವು ಮುಂತಾದ ಧಾತುಗಳಿಗೆ ವಿಷಯವಾದ ಆಖ್ಯಾತಕ್ರಿಯೆಗಳನ್ನು ಪ್ರಧಾನವಾಕ್ಯದಲ್ಲಿ ಸೇರಿಸಿ ಸೂಚಿಸುವದಕ್ಕೆ "ಎಂದು, ಎಂತ [=ಅಂದು, ಅಂತ]" ಎಂಬ ನ್ಯೂನರೂಪಗಳು ಪ್ರಯೋಗವಾಗುವವು. ಉದಾ: ದೇವರು ಎಲ್ಲಿದ್ದಾನೆ ಅಂತ ಕೇಳುವ ಅವಿಶ್ವಾಸಿಗಳು ಅನೇಕರು; ಆದರೂ ದೇವರು ಇದ್ದಾನೆ ಎಂದು ದೆವ್ವಗಳು ಸಹ ಬಲ್ಲವು.

ಕೆಲವರು ಈ ನ್ಯೂನಗಳಿಗೆ ಪ್ರತಿಯಾಗಿ "ಎಂಬದಾಗಿ" ಎಂದನ್ನುವರು. ಉದಾ: ಪೂರ್ವದಲ್ಲಿ ಧರ್ಮರಾಯನು ಆಳಿದನು ಎಂಬದಾಗಿ ಹಿರಿಯರು ಹೇಳುತ್ತಾರೆ.

2. "ಮಾತು, ಆಲೋಚನೆ, ಅಪೇಕ್ಷೆ" ಮೊದಲಾದ ವಚನಾರ್ಥಕ, ಜ್ಞಾನಾರ್ಥಕ, ಇಚ್ಛಾರ್ಥಕ ನಾಮಪದಗಳ ವಿವರವಾದ ಆಖ್ಯಾತಕ್ರಿಯೆಗಳನ್ನು "ಎಂಬ" ಅನ್ನುವ ಕೃದ್ವಾಚಿಯಿಂದ ಆ ನಾಮಪದಗಳ ಪೂರ್ವದಲ್ಲಿ ಸೇರಿಸಿ ಸೂಚಿಸುವದು ಉಂಟು. ಉದಾ: ಪರದ್ರವ್ಯವನ್ನು ಆಶಿಸ ಬಾರದು ಎಂಬ ನೀತಿವಾಕ್ಯ ಅನೇಕರ ಬಾಯಲ್ಲಿ ಇರುತ್ತದೆ, ಆದರೆ ಬೇರೆಯವರದು ತಮ್ಮದಾಗಬೇಕು ಎಂಬ ಭ್ರಮೆ ದೊಡ್ಡದು, ಅದರಿಂದ ಕೆಡುತ್ತೇವೆ ಎಂಬ ಭಯ ಕೆಲವರಿಗೆ ಮಾತ್ರ.

3. "ಎಂಬದು" ಅನ್ನುವ ಕ್ರಿಯಾನಾಮದಿಂದ ಪ್ರಧಾನವಾಕ್ಯದಲ್ಲಿ ಸೇರಿಸಿದ ಉಪವಾಕ್ಯವು, ಹಿಂದೆ 146ನೇ ಉತ್ತರದಲ್ಲಿ ವಿವರಿಸಿದ ಕ್ರಿಯಾನಾಮಗಳಂತೆ, ಪ್ರಧಾನವಾಕ್ಯದ ಕಾರಕಪದಗಳ ಸ್ಥಳದಲ್ಲಿ ಸೇರುವದು. ಉದಾ: ದೇವರು ಸರ್ವತ್ರಾಣಿ ಸರ್ವಜ್ಞಾನಿ ಸರ್ವವ್ಯಾಪಿ ಎಂಬದು ಎಲ್ಲರಿಗೆ ತಿಳಿಯುವದು; ಆದರೆ ಆತನು ಪರಿಶುದ್ಧನೇ, ಪಾಪಕ್ಕೆ ನ್ಯಾಯತೀರಿಸುವಾತನೇ ಎಂಬದನ್ನು ಅನೇಕರು ಒಪ್ಪಿಕೊಳ್ಳಲೊಲ್ಲರು; ಯಾಕಂದರೆ ಇದನ್ನು ಸಮ್ಮತಿಸಿದರೆ, ತಮಗೆ ತಾವೇ ಆಜ್ಞೆ ನಿರ್ಣಯ ಕಟ್ಟುತ್ತೇವೆ ಎಂಬದನ್ನು ಬಲ್ಲರು.

6. ಪದಗಳ ಅರ್ಥವಿಚಾರ.

Meanings of Words.

174. ಪದಗಳ ಅರ್ಥವಿಚಾರವು ಹ್ಯಾಗೆ?

ವಾಕ್ಯದಲ್ಲಿ ಪ್ರಯೋಗಿಸುವ ಪದಗಳ ಅರ್ಥವು "ರೂಢ, ಯೋಗ, ಯೋಗರೂಢ"ವೆಂಬ ಮೂರು ವಿಧವು.

175. ರೂಢವಂದರೇನು?

(ನಿಘಂಟು, ಉಪಮಾನ, ಆಪ್ತವಾಕ್ಯ, ಲೋಕವ್ಯವಹಾರ, ವ್ಯಾಖ್ಯಾನ ಮೊದಲಾದ ಸಾಧನಗಳಿಂದ) ಪ್ರಸಿದ್ಧವಾದ ಅರ್ಥವು "ರೂಢ"ವೆನ್ನಿಸುವದು. ಉದಾ: ಮನೆ, ಕದ, ಕುದುರೆ, ಆನೆ, ಗಿಡ, ಬಾಗಿಲು, ತೋಟ, ಕುರಿ, ನರಿ.

176. ಯೋಗವಂದರೇನು?

ಶಬ್ದಗಳ ಮೂಲಧಾತುಗಳ ಅವಯವಾರ್ಥವಿಶೇಷಗಳಿಂದ ತಿಳಿಯುವ ಅರ್ಥವು "ಯೋಗ"ವೆನ್ನಿಸುವದು. ಉದಾ: ಹೂವಾಡಿಗ, ಬಾಯ್ಬಡಿಕ, ಗುಣಶಾಲಿ, ಜೂದಾಳಿ, ವರ್ತಕ, ಕೋಪಿಷ್ಠ.

177. ಯೋಗರೂಢವಂದರೇನು?

ಅವಯವಾರ್ಥವೂ ಇದ್ದು ಬಹಳವಾಗಿ ರೂಢಿಯೂ ಇರುವದರಿಂದ ತಿಳಿಯುವ ಅರ್ಥವು "ಯೋಗರೂಢ"ವೆನ್ನಿಸುವದು. ಉದಾ: ಪಂಕಜ, ಭೂಪತಿ.

(ಇಲ್ಲಿ ಪಂಕಜವೆಂಬ ಶಬ್ದವು ಕೆಸರಿನಲ್ಲಿ ಹುಟ್ಟಿದ ಮತ್ಸ್ಯಾದಿಗಳಿಗೂ ಅರ್ಥವಾದಾಗ್ಯೂ ರೂಢಿಯು ಕಮಲಕ್ಕೆ ಮಾತ್ರ ಇರುವದರಿಂದ ಇದು ಯೋಗರೂಢವು.)

178. ಶಕ್ಯಾರ್ಥವಂದರೇನು?

ಮೇಲೆ (175-177ನೇ ಉತ್ತರಗಳಲ್ಲಿ) ಹೇಳಿದ ಮೂರು ವಿಧವಾದ ಅರ್ಥವಿಶೇಷಗಳಿಂದ ತಿಳಿಯುವ ಅರ್ಥವು ಶಕ್ಯವಾಗಿರುವದರಿಂದ ಇದಕ್ಕೆ "ಶಕ್ಯಾರ್ಥ"ವೆಂದು ಹೆಸರು.

179. ಲಕ್ಷಣೆ ಅಂದರೇನು?

ಶಕ್ಯಾರ್ಥಕ್ಕೆ ವಾಚಕವಿಲ್ಲದೆ ಶಕ್ಯಸಂಬಂಧವನ್ನು ಹೇಳಿ ಅರ್ಥವನ್ನು ನಿರ್ಣಯಿಸುವದು "ಲಕ್ಷಣೆ" ಎನ್ನಿಸಿಕೊಳ್ಳುತ್ತದೆ.

180. ಲಕ್ಷಣೆ ಎಷ್ಟು ವಿಧವು?

"ಸಂಬಂಧನಿಬಂಧನೆ" ಎಂತಲೂ "ಸಾದೃಶ್ಯನಿಬಂಧನೆ" ಎಂತಲೂ ಎರಡು ವಿಧವು.

181. ಸಂಬಂಧನಿಬಂಧನೆ ಎಷ್ಟು ವಿಧವು?

"ಜಹಲ್ಲಕ್ಷಣೆ, ಅಜಹಲ್ಲಕ್ಷಣೆ, ಜಹದಜಹಲ್ಲಕ್ಷಣೆ" ಎಂದು ಮೂರು ವಿಧವು.

182. ಜಹಲ್ಲಕ್ಷಣೆ ಅಂದರೇನು?

ಪದದ ಶಕ್ಯಾರ್ಥಬೋಧಕವಿಲ್ಲದೆ ಅದಕ್ಕೆ ಸಂಬಂಧವಾದ ಮತ್ತೊಂದರ್ಥವನ್ನು ಹೇಳುವದು "ಜಹಲ್ಲಕ್ಷಣೆ" (Metonomy).

ಉದಾ:

ಜಯಶೀಲನಾದ ರಾಜನ ಭೇರೀ ಪಟಹ ಧ್ವನಿಗಳನ್ನು ಕೇಳಿ ಸಾವಿರಾಪ್ಪ ಪಟ್ಟಣಗಳೆಲ್ಲಾ ಗಟ್ಟಿಯಾಗಿ ಮೊರೆ ಇಟ್ಟವು.

(ಇಲ್ಲಿ ಪಟ್ಟಣಗಳು ಮೊರೆ ಇಡುವದು ಅಸಂಗತವಾದ ಕಾರಣ ಅವರಲ್ಲಿಯ ಜನರು ಭಯಭ್ರಾಂತರಾಗಿ ಮೊರೆ ಇಟ್ಟರೆಂದು ಸಂಬಂದಾರ್ಥ ಬರುವದರಿಂದ ಇದು ಜಹಲ್ಲಕ್ಷಣೆಯು.)

183. ಅಜಹಲ್ಲಕ್ಷಣೆ ಹ್ಯಾಗೆ?

ಪದದ ಶಕ್ಯಾರ್ಥವನ್ನು ಬಿಡದೆ ಅದನ್ನು ತಿಳಿಸಿ ಅದರ ಸಂ

ಬಂಧಪದಗಳನ್ನು ಹೇಳದಿದ್ದರೂ ಅದರ ಅರ್ಥವನ್ನು ತಿಳಿಸುವದು "ಅಜಹಲ್ಲಕ್ಷಣೆ" ಎನ್ನಿಸುವದು. ಉದಾ:

1. ಕೊಡೆಯವರೂ ಹೋಗುತ್ತಾರೆ; 2. ಈಟಿಗಳೂ ಪ್ರವೇಶಿಸುವದು.

(1. ಇಲ್ಲಿ ಕೊಡೆಯುಳ್ಳವರೂ ಅವರೊಡನೆ ಕೊಡೆ ಇಲ್ಲದವರೂ ಹೋಗುತ್ತಾರೆಂದು ತತ್ಸಂಬಂಧವನ್ನೂ ಹೇಳುವದರಿಂದಲೂ; 2. ಜೀವವಿಲ್ಲದ ಈಟಿಗಳು ಜೀವ ಸಂಬಂಧವಿಲ್ಲದೆ ಪ್ರವೇಶಿಸುವದು ಅಸಂಭವವಾದ್ದರಿಂದ, ಈಟಿ ಶಬ್ದವು ತನಿಗೆ ವಾಚ್ಯಾರ್ಥವಾದ ಆಯುಧವನ್ನೂ ಬಿಡದೆ ಈಟಿ ಹಿಡಿದವರನ್ನೂ ಸೂಚಿಸುವದರಿಂದಲೂ ಅಜಹಲ್ಲಕ್ಷಣೆಯು.)

184. ಜಹದಜಹಲ್ಲಕ್ಷಣೆ ಹ್ಯಾಗೆ?

ಶಕ್ಯಾರ್ಥದಲ್ಲಿ ವಿಶೇಷಣಾರ್ಥವನ್ನು ಬಿಟ್ಟು ವಿಶೇಷ್ಯಪದಕ್ಕೆ ಸಾರ್ಥಿಕ್ಯವನ್ನು ತೋರಿಸುವದು "ಜಹದಜಹಲ್ಲಕ್ಷಣೆ" ಎನ್ನಿಸುವದು. ಉದಾ: ಇವನೇ ನಾನು ಹೇಳಿದ ದೇವಪ್ರಿಯನು.

(ಇಲ್ಲಿ ದೇವಪ್ರಿಯನ ವಿಷಯವಾಗಿ ಪರೋಕ್ಷದಲ್ಲಿ ನಡೆದಿರುವ ಪ್ರಶಂಸೆಯನ್ನು ಬೋಧಿಸಿ, ವಿಶೇಷಣ ಪದದ ಅರ್ಥವು ಸ್ಪಷ್ಟವಾಗದೆ, ವಿಶೇಷ್ಯಕ್ಕೆ ಮಾತ್ರ ಅರ್ಥವಾಗುವದರಿಂದ ಇದು ಜಹದಜಹಲ್ಲಕ್ಷಣೆಯು).

185. ಸಾದೃಶ್ಯನಿಬಂಧನೆ ಎಷ್ಟು ವಿಧವು?

"ಸಾರೋಪಲಕ್ಷಣೆ" ಎಂತಲೂ "ಸಾಧ್ಯವಸಾಯಲಕ್ಷಣೆ" ಎಂತಲೂ ಎರಡು ವಿಧವು.

186. ಸಾರೋಪಲಕ್ಷಣೆ ಹ್ಯಾಗೆ?

ಶಕ್ಯಪದವನ್ನು ಪ್ರಯೋಗಿಸದೆ ವಿರೋಧವಾದದ್ದನ್ನು ನಿಶ್ಚಯಾರ್ಥದಲ್ಲಿ ಹೇಳುವದು "ಸಾರೋಪಲಕ್ಷಣೆ" (Metaphor) ಎನ್ನಿಸುವದು. ಉದಾ: ಈ ಅರಸನು ಸಿಂಹವು.

(ಇಲ್ಲಿ ಅರಸನು ಸಿಂಹಸದೃಶನೆಂದು ಅರ್ಥವಾದ್ದರಿಂದ ಇದು ಸಾರೋಪಲಕ್ಷಣೆಯು.)

187. ಸಾಧ್ಯವಸಾಯಲಕ್ಷಣೆ ಹ್ಯಾಗೆ?

ವಾಚ್ಯವಾದ ಪದಗಳನ್ನು ಬೇರೆ ವಾಚ್ಯವಾದ ಪದಗಳಲ್ಲಿ ಉತ್ಪ್ರೇಕ್ಷಿಸಿ ಹೇಳುವದು "ಸಾಧ್ಯವಸಾಯಲಕ್ಷಣೆ" (Simile) ಎನ್ನಿಸುವದು. ಉದಾ: ಶ್ರೇಷ್ಠರ ಕಣ್ಣುಗಳೆಂಬ ಚಕೋರಪಕ್ಷಿಗಳನ್ನು ಸಂತೋಷ ಪಡಿಸುವಂಥ, ಭಕ್ತರ ಹೃದಯಗಳೆಂಬ ನೈದಿಲೆಗಳನ್ನು ವಿಕಸನ ಮಾಡುವಂಥ, ಕರುಣಾಮೃತವೆಂಬ ಕಲೆಗಳನ್ನು ಹೊಂದಿದ ಮುಗುಳುನಗೆ ಎಂಬ ಬೆಳದಿಂಗಳನ್ನು ಪಸರಿಸುವಂಥ, ಸರ್ವೇಶ್ವರನ ಮುಖವೆಂಬ ಚಂದ್ರನು ನಮಗೆ ಸಕಲೇಷ್ಟಗಳನ್ನು ಕೊಡಲಿ.

(ಇಲ್ಲಿ ಕಣ್ಣುಗಳೆಂಬ ಚಕೋರಪಕ್ಷಿಗಳು, ಹೃದಯಗಳೆಂಬ ನೈದಿಲೆಗಳು, ಮುಗುಳುನಗೆ ಎಂಬ ಬೆಳದಿಂಗಳು, ಮುಖವೆಂಬ ಚಂದ್ರನು ಇವುಗಳೆಲ್ಲಾ ಉತ್ಪ್ರೇಕ್ಷೆಗಳಾದ್ದರಿಂದ ಇದು ಸಾಧ್ಯವಸಾಯಲಕ್ಷಣೆಯು.)

IV. Part: Prosody.

ನಾಲ್ಕನೆ ಭಾಗ.

ಛಂದೋಲಕ್ಷಣಸಂಗ್ರಹ.

---

188. ಛಂದೋಲಕ್ಷಣವಂದರೇನು?

ಗುರು, ಲಘು, ಮಾತ್ರೆ, ಗಣ, ಪ್ರಾಸ, ಯತಿ, ಪಾದ (ಚರಣ) ಮುಂತಾದ ನಿಯಮಗಳಿಂದ ಪದ್ಯಗಳನ್ನು ರಚಿಸುವ ಮತ್ತು ತಿಳಿಯುವ ಕ್ರಮವು.

189. ಗುರುಲಘುಗಳ ವಿವರವು ಹ್ಯಾಗೆ?

ದೀರ್ಘಾಕ್ಷರ, ಒತ್ತಕ್ಷರದ ಹಿಂದಿನ ಅಕ್ಷರ, ವಿಸರ್ಗಾನುಸ್ವಾರ (ಃ, ಂ)ಗಳಿಂದ ಕೂಡಿದ ಅಕ್ಷರ, ಪಾದಾಂತದಲ್ಲಿರುವ ಅಕ್ಷರ, ಈ ಐದು ವಿಧದ ಅಕ್ಷರಗಳಲ್ಲಿ ಪ್ರತಿಯೊಂದಕ್ಕೂ ಗುರ್ವಕ್ಷರ (Long letter) ವೆಂತಲೂ, ಉಳಿದದ್ದಕ್ಕೆ ಲಘ್ವಕ್ಷರ (Short letter) ವೆಂತಲೂ ಸಂಕೇತವು.

ಗುರ್ವಕ್ಷರವನ್ನು ತೋರಿಸುವದಕ್ಕೆ (—) ಈ ಗುರುತೂ ಲಘ್ವಕ್ಷರವನ್ನು ತೋರಿಸುವದಕ್ಕೆ (⏑) ಈ ಗುರುತೂ ಉಪಯೋಗಿಸಲ್ಪಟ್ಟಿರುತ್ತವೆ.

190. ಮಾತ್ರೆಯಂದರೇನು?

ಒಂದು ನುಡಿಯಷ್ಟು ಕಾಲವು ಮಾತ್ರೆ (Metre) ಎಂದೆನಿಸುವದು. ಲಘ್ವಕ್ಷರಕ್ಕೆ ಒಂದು ಮಾತ್ರೆಯೂ ಗುರ್ವಕ್ಷರಕ್ಕೆ ಎರಡು ಮಾತ್ರೆಗಳೂ ಪ್ಲುತಕ್ಕೆ ಮೂರು ಮಾತ್ರೆಗಳೂ ಆಗಿರುವವು; ಗುರ್ವಕ್ಷರವನ್ನು ಒಂದು ಮಾತ್ರೆಯಷ್ಟು ಹೆಚ್ಚಾಗಿ ಎಳೆದು ಹೇಳಿದರೆ, ಅಥವಾ ಲಘ್ವಕ್ಷರವನ್ನು ಎರಡು ಮಾತ್ರೆಗಳಷ್ಟು ಹೆಚ್ಚಾಗಿ ಎಳೆದು ಹೇಳಿದರೆ, ಅದು "ಪ್ಲುತವು". ಉದಾ:

ಲಘು.	ಗುರು.	ಪ್ಲುತ.
ನ[1]	ನಾ[2]	ನಾ೩[3]

191. ಗಣವಂದರೇನು?

ಕೆಲವು ಮಾತ್ರೆಗಳ ಅಥವಾ ಕೆಲವು ಅಕ್ಷರಗಳ ಕೂಟವು "ಗಣ" (Syllable-foot)ವೆನ್ನಿಸುವದು.

192. ಗಣವೆಷ್ಟು ವಿಧವು?

"ಮಾತ್ರಾಗಣ"ವೆಂದೂ "ಅಕ್ಷರಗಣ"ವೆಂದೂ ಎರಡು ವಿಧವು. ಅವುಗಳ ವಿವರ ಹ್ಯಾಗಂದರೆ:

1. ಮಾತ್ರಾಗಣಗಳಲ್ಲಿ "ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ, ಐದು ಮಾತ್ರೆಯ ಗಣ"ವೆಂದು ಮೂರು ಪ್ರಕಾರವುಂಟು. ಉದಾ:

ಮೂರು ಮಾ. ಗ.—ಬರೆದ, ಬಂದ, ಕಲಾ.

ನಾಲ್ಕು ಮಾ. ಗ.—ಬರೆದಂ, ಬಂದಂ, ರಾಮನು, ಕರಗಳು.

ಐದು ಮಾ. ಗ.—ಬರೆದವಂ, ಕರಪಾದ, ಬಂದಾನು, ದನಕರುವು.

2. ಅಕ್ಷರಗಣಗಳಲ್ಲಿ ಗುರುಲಘು ಮಿಶ್ರವಾದ ಮೂರು ಅಕ್ಷರಗಳಿಗೆ ಒಂದು ಗಣವೆಂದು ಎಣಿಸುತ್ತಾರೆ; ಇವು "ಮ, ಯ, ರ, ಸ, ತ, ಜ, ಭ, ನ" ಗಣವೆಂದು ಎಂಟು ಪ್ರಕಾರವಾಗಿರುತ್ತವೆ. ಹ್ಯಾಗಂದರೆ—

ಅಷ್ಟಗಣಮಾಲೆ.

ಅಂಕೆ	ಗಣನಾಮ	ಸಂಕೇತಾಕ್ಷರ	ಪ್ರಸ್ತಾರ	ಉದಾಹರಣೆ	ಗಣವಿವರ
1	ಧರಣಿ	ಮ	— — —	ಶ್ರೀಶೈಲಂ	ಮೂರೂಗುರು
2	ಜಲ	ಯ	⏑ — —	ಪ್ರವಾಹಂ	ಆದಿಲಘು
3	ಅಗ್ನಿ	ರ	— ⏑ —	ವಾರಿಜಂ	ಮಧ್ಯಲಘು
4	ಮರುತ	ಸ	⏑ ⏑ —	ವನಜಂ	ಅಂತ್ಯಗುರು
5	ವ್ಯೋಮ	ತ	— — ⏑	ಆಕಾಶ	ಅಂತ್ಯಲಘು
6	ರವಿ	ಜ	⏑ — ⏑	ಅಧೈರ್ಯ	ಮಧ್ಯಗುರು
7	ಶಶಾಂಕ	ಭ	— ⏑ ⏑	ಆಗುವ	ಆದಿಗುರು
8	ಸ್ವರ್ಗ	ನ	⏑ ⏑ ⏑	ಗಗನ	ಮೂರೂಲಘು

193. ಪ್ರಾಸವಂದರೇನು? ಅವು ಎಷ್ಟು ವಿಧವು?

ಪದ್ಯದಲ್ಲಿ ಪ್ರತಿಪಾದದ 2ನೇ ಅಕ್ಷರವು "ಪ್ರಾಸ" (Alliteration) ಎನ್ನಿಸುತ್ತದೆ. ಆ ಎರಡನೇ ಅಕ್ಷರವು ಎಲ್ಲಾ ಪಾದಗಳಲ್ಲಿಯೂ ಒಂದೇ ಆಗಿರ ತಕ್ಕದ್ದು. ಇವುಗಳಲ್ಲಿ ಮುಖ್ಯವಾದವುಗಳು ಯಾವವಂದರೆ—

ಷಟ್ಪ್ರಾಸಮಾಲೆ.

ಅಂಕೆ	ಹೆಸರು	ಉದಾಹರಣೆ	ವಿವರ
1	ಸಿಂಹ	ಸಕಲ, ಸುಕರ	ಹ್ರಸ್ವಾಕ್ಷರ
2	ಗಜ	ಆರಾರೇ, ಶ್ರೀರೋಹ	ದೀರ್ಘಾಕ್ಷರ
3	ವೃಷಭ	ಆನಂದ, ಹಾನಂದ	ಬಿಂದುಯುಕ್ತಾಕ್ಷರ
4	ಶರಭ	ಬಾಯ್ಬಿಡು, ತಾಯ್ಬಿಡು	ಬೇರೆ ವ್ಯಂಜನದ ಒತ್ತಕ್ಷರ
5	ಅಜ	ನೀಂನಿಃಶ, ವಾನಿಃಶ	ವಿಸರ್ಗಯುಕ್ತಾಕ್ಷರ
6	ಅಶ್ವ	ಮಲ್ಲಿಗೆ, ಸಲ್ಲಲಿ	ಸ್ವವ್ಯಂಜನ ದ್ವಿತ್ವಾಕ್ಷರ

194. ಯತಿ ಅಂದರೇನು?

ಪದ್ಯಗಳನ್ನು ಓದುವಾಗ ನಿಲ್ಲಿಸುವ (ವಿಶ್ರಮಣ, ವಿರಾಮ) ಸ್ಥಾನವು "ಯತಿ" (Pause or Caesura) ಎಂದೆನಿಸುವದು. ಈ ಯತಿಯು ಪಾದದ ಮಧ್ಯದಲ್ಲಿಯೂ ಕೊನೆಯಲ್ಲಿಯೂ ಬರುವದುಂಟು.

195. ಪಾದವಂದರೇನು?

ಒಂದು ಪದ್ಯದ ಒಂದು ಭಾಗವು ಪಾದ (ಚರಣ) (Verseline) ಎಂದು ವ್ಯವಹರಿಸಲ್ಪಡುತ್ತದೆ.

196. ಪದ್ಯವಂದರೇನು? ಅವುಗಳ ವಿವರ ಹ್ಯಾಗೆ?

ಕೆಲವು ಪಾದಗಳ ಕೂಟವು "ಪದ್ಯ"ವೆಂದು ವ್ಯವಹರಿಸಲ್ಪಡುತ್ತದೆ. ಇವು ಎರಡು ಪಾದ ವೊದಲಾಗಿ ಎಂಟು ಪಾದಗಳ ವರೆಗೂ ಉಳ್ಳದ್ದಾಗಿ ನಾನಾ ಹೆಸರುಗಳಿಂದ ಒಪ್ಪುತ್ತವೆ, ಇವುಗಳಲ್ಲಿ ಪಾದಗಳು ಒಂದಕ್ಕೊಂದು ಸಮಾನವಾಗಿ ಇರುವ "ಸಮಪಾದವೃತ್ತ"ಗಳೆಂತಲೂ ಒಂದಕ್ಕೊಂದು ಸಮಾನವಾಗಿಲ್ಲದ "ವಿಷಮಪಾದವೃತ್ತ"ಗಳೆಂತಲೂ ಎರಡು ವಿಧವಾಗಿದೆ.

197. ಸಮಪಾದವೃತ್ತಗಳ ವಿವರ ಹ್ಯಾಗೆ?

ಹಿಂದೆ 192ನೇ ಉತ್ತರದ 2ರಲ್ಲಿ ವಿವರಿಸಿದ ಪ್ರಕಾರ 8 ಗಣಗಳೂ ಗುರು ಲಘುಗಳೂ ಸೇರಿ 26 ಅಕ್ಷರಗಳಾಗುತ್ತವೆ; ಈ ಅಕ್ಷರಗಳಿಂದ ಏಕೋತ್ತರ ವೃದ್ಧಿ ಕ್ರಮದ ಪ್ರಕಾರ ಒಂದು ಅಕ್ಷರದ ಪಾದ ಉಳ್ಳ ಉಕ್ತಿ ವೊದಲಾದ 26 ಛಂದಸ್ಸುಗಳು ಹುಟ್ಟುತ್ತವೆ; 1ನೇ ಛಂದಸ್ಸಿನಿಂದ 2, 2ನೇ ಛಂದಸ್ಸಿನಿಂದ 4, 3ನೇದರಿಂದ 8, ಈ ಪ್ರಕಾರ ಕ್ರಮದಿಂದ ಇಮ್ಮಡಿಯಾಗಿ ಬೇರೆಬೇರೆ ವೃತ್ತಗಳು ಹುಟ್ಟುತ್ತವೆ; ಒಂದೊಂದು ವೃತ್ತಕೆ ನಾಲ್ಕುನಾಲ್ಕು ಪಾದಗಳು (ಚರಣಗಳು) ಇರುವವು. ಇವುಗಳಲ್ಲಿ ಮುಖ್ಯವಾದವುಗಳು ಯಾವವಂದರೆ—

I. 7ನೇ ಉಷ್ಣಿಕ್ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 7 ಅಕ್ಷರಗಳಾಗಿ ಹುಟ್ಟುವ ವಿಭೂತಿವೃತ್ತವು—

ಪ್ರಸ್ತಾರ.

ರ ಜ ಗು
—◡— | ◡—◡ | —, ಪಾದಾಂತದಲ್ಲಿ ಯತಿ.

ಉದಾ: ತೇಜಮರ್ಕನೀಶನಿಂ.

II. 11ನೇ ತ್ರಿಷ್ಟುಪ್ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 11 ಅಕ್ಷರಗಳಾಗಿ ಹುಟ್ಟುವ ವೃತ್ತಗಳಲ್ಲಿ—

1. ಇಂದ್ರವಜ್ರವೃತ್ತವು—

ಪ್ರಸ್ತಾರ.

ತ | ತ | ಜ | ಗು
— — ⏑ | — — ⏑ | ⏑ — ⏑ | — —, ಎಂಟರಲ್ಲಿ ಯತಿ.

ಉದಾ:

ವ್ಯೋಮದ್ವಯಂ ಭಾನು ಕಪರ್ದಿ ಯುಗ್ಮಂ.

2. ಸ್ವಾಗತವೃತ್ತವು —

ಪ್ರಸ್ತಾರ.

ರ | ನ | ಭ | ಗು
— ⏑ — | ⏑ ⏑ ⏑ | — ⏑ ⏑ | — —, ಎಂಟರಲ್ಲಿ ಯತಿ.

ಉದಾ:

ಆಗಳಗ್ನಿ ದಿವಿಜೇಂದು ಹರರ್ಸಂ.

III. 12ನೇ ಜಗತೀ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 12 ಅಕ್ಷರಗಳಾಗಿ ಹುಟ್ಟುವ ವೃತ್ತಗಳಲ್ಲಿ —

1. ವಂಶಸ್ಥವೃತ್ತವು — ಪ್ರಸ್ತಾರ.

ಜ | ತ | ಜ | ರ
⏑ — ⏑ | — — ⏑ | ⏑ — ⏑ | — ⏑ — | ಏಳರಲ್ಲಿ ಯತಿ.

ಉದಾ:

ದಿವಾಕರಾಕಾಶ ದಿನೇಶ ಪಾವಕರ್.

2. ಭುಜಂಗಪ್ರಯಾತವೃತ್ತವು —

ಪ್ರಸ್ತಾರ.

ಯ | ಯ | ಯ | ಯ
⏑ — — | ⏑ — — | ⏑ — — | ⏑ — — | ಎಂಟರಲ್ಲಿ ಯತಿ.

ಉದಾ:

ಕುಶಂ ವಾರ್ಧಿಪರ್ಯಾಯಮುಕ್ಯಂ ವಿರಾಮಂ.

IV. 14ನೇ ಶಕ್ವರೀ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 14 ಅಕ್ಷರಗಳಾಗಿ ಹುಟ್ಟುವ ವೃತ್ತಗಳಲ್ಲಿ ವಸಂತತಿಲಕವೃತ್ತವು —

ಪ್ರಸ್ತಾರ.

ತ ಭ ಜ ಜ ಗು
— — ᴗ | — ᴗ ᴗ | ᴗ — ᴗ | ᴗ — ᴗ | — —, ಪಾದಾಂತದಲ್ಲಿ ಯತಿ.

ಉದಾ:

ವ್ಯೋಮೇಂದು ಭಾನುಗಣ ಯುಗ್ಮದಿನತ್ತ್ರಲಕ್ಯಂ.

V. 15ನೇ ಅತಿಶಕ್ವರೀ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 15 ಅಕ್ಷರಗಳಾಗಿ ಹುಟ್ಟುವ ವೃತ್ತಗಳಲ್ಲಿ ಮಾಲಿನೀವೃತ್ತವು—

ಪ್ರಸ್ತಾರ.

ನ ನ ಮ ಯ ಯ
ᴗ ᴗ ᴗ | ᴗ ᴗ ᴗ | — — — | ᴗ — — | ᴗ — — | ಎಂಟರಲ್ಲಿ ಯತಿ.

ಉದಾ:

ಅಮರಗಣ ಯುಗಂಗಳ್ ಮುಂದೆ ಭೂ ತೋಯ ಯುಗ್ಮಂ.

VI. 19ನೇ ಅತಿಧೃತಿ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 19 ಅಕ್ಷರಗಳಾಗಿ ಹುಟ್ಟುವ ವೃತ್ತಗಳಲ್ಲಿ ಶಾರ್ದೂಲವಿಕ್ರೀಡಿತವೃತ್ತವು—

ಪ್ರಸ್ತಾರ.

ಮ ಸ ಜ ಸ ತ ತ ಗು
— — — | ᴗ ᴗ — | ᴗ — ᴗ | ᴗ ᴗ — | — — ᴗ | — — ᴗ | —, ಹನ್ನೆರಡರಲ್ಲಿ ಯತಿ.

ಉದಾ:

ಉರ್ವೀಮಾರುತ ಭಾಸ್ಕರಾನಿಲ ವಿಯದ್ವಂದ್ವಂ ಪದಾಂತಂಗಳೊಳ್.

VII. 20ನೇ ಕೃತಿ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 20 ಅಕ್ಷರಗಳಾಗಿ ಹುಟ್ಟುವ ವೃತ್ತಗಳಲ್ಲಿ—

1. ಮತ್ತೇಭವಿಕ್ರೀಡಿತವೃತ್ತವು—

ಪ್ರಸ್ತಾರ.

ಸ ಭ ರ ನ ಮ ಯ ಲ,ಗು
ᴗ ᴗ — | — ᴗ ᴗ | — ᴗ — | ᴗ ᴗ ᴗ | — — — | ᴗ — — | ᴗ —, ಹದಿಮೂರರಲ್ಲಿ ಯತಿ.

ಉದಾ:

ಶ್ವಸನೇಂದು ಜ್ವಲನಂ ದಿವಂ ಧರೆ ಜಲಂ ದೈತ್ಯಾರಿ ಕಾಮಾಂತಕ.

2. ಉತ್ಪಲಮಾಲಾವೃತ್ತವು —

ಪ್ರಸ್ತಾರ.

ಭ ರ ನ ಭ ಭ ರ ಲ,ಗು
—⏑⏑ | —⏑— | ⏑⏑⏑ | —⏑⏑ | —⏑⏑ | —⏑— | ⏑—, ಹನ್ನೊಂದರಲ್ಲಿ ಯತಿ.

ಉದಾ:

ಶೀತಕರಾನಿಲೇಂದ್ರಪುರ ಚಂದ್ರ ಶಶಾಂಕ ಹುತಾಶನಂ ಲಗೋಂ.

VIII. 21ನೇ ಪ್ರಕೃತಿ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 21 ಅಕ್ಷರಗಳಾಗಿ ಹುಟ್ಟುವ ವೃತ್ತಗಳಲ್ಲಿ —

1. ಚಂಪಕಮಾಲಾವೃತ್ತವು —

ಪ್ರಸ್ತಾರ.

ನ ಜ ಭ ಜ ಜ ಜ ರ
⏑⏑⏑ | ⏑—⏑ | —⏑⏑ | ⏑—⏑ | ⏑—⏑ | ⏑—⏑ | —⏑— | ಹದಿಮೂರರಲ್ಲಿ ಯತಿ.

ಉದಾ:

ತ್ರಿದಶ ರವೀಂದು ಭಾಸ್ಕರಗಣ ತ್ರಿಶಯಾಸ್ರದೊಳಗ್ನಿ ಚಲ್ವುವೆ.

2. ಸ್ರಗ್ಧರಾವೃತ್ತವು —

ಪ್ರಸ್ತಾರ.

ಮ ರ ಭ ನ ಯ ಯ ಯ
——— | —⏑— | —⏑⏑ | ⏑⏑⏑ | ⏑—— | ⏑—— | ⏑—— | ಏಳರಲ್ಲಿ ಯತಿ.

ಉದಾ:

ಭೂಮಿ ಜ್ವಾಲೇಂದು ದೇವಾಧಿಪಪುರಗಣದಿಂ ಮುಂತೆ ತೋಯತ್ರಯಂ.

IX. 22ನೇ ಆಕೃತಿ ಎಂಬ ಛಂದಸ್ಸಿನಲ್ಲಿ ಪಾದಕ್ಕೆ 22 ಅಕ್ಷರಗಳಾಗಿ ಹುಟ್ಟುವ ವೃತ್ತಗಳಲ್ಲಿ — ಮಹಾಸ್ರಗ್ಧರಾವೃತ್ತವು —

ಪ್ರಸ್ತಾರ.

ಸ ತ ತ ನ ಸ ರ ರ ಗು
⏑⏑— | ——⏑ | ——⏑ | ⏑⏑⏑ | ⏑⏑— | —⏑— | —⏑— | —,
ಹದಿನೈದರಲ್ಲಿ ಯತಿ.

ಉದಾ:

ಮರುದಾಕಾಶದ್ವಯೇಂದ್ರಾನಿಲ ಹುತವಹ ಯುಗ್ಮಾಂಗಜನ್ಮಾಂತಕರ್ಗಳ್.

198. ಮಾತ್ರಾಗಣದಿಂದ ಕಟ್ಟಲ್ಪಟ್ಟ ಪದ್ಯಗಳು ಯಾವವು?

"ದ್ವಿಪದಿ, ತ್ರಿಪದಿ, ಚೌಪದಿ (ಚತುಷ್ಪದಿ), ಷಟ್ಪದಿ" ಮೊದಲಾದವುಗಳು.

199. ದ್ವಿಪದಿಯ ಲಕ್ಷಣವು ಹ್ಯಾಗೆ?

ಎರಡು ಪಾದಗಳುಳ್ಳ ಪದ್ಯಕ್ಕೆ "ದ್ವಿಪದಿ" ಎಂದು ಹೆಸರು. ಈ ದ್ವಿಪದಿಯಲ್ಲಿ ಪಾದ 1ಕ್ಕೆ 28 ಮಾತ್ರೆಗಳಿರಬೇಕು; ಕೆಲವು ಕಾವ್ಯಗಳಲ್ಲಿ 18, 19 ಮಾತ್ರೆಗಳನ್ನು ಸೇರಿಸಿ ದ್ವಿಪದಿಯಾಗಿ ಪೂರ್ವಕವೀಶ್ವರರು ಪ್ರಯೋಗಿಸಿರುತ್ತಾರೆ.

ಉದಾ:

ಪರಮ ಪದಂ ವಿನಮಿತ ಜನಮುಂ ಪರೀಕ್ಷಣಂ ಗೆಯ್ದು ನಿಂತಿದಂ ಮಾತ್ರೆ 28
ದಳಪನೆಂದನು ಪೊಜನೆಣಿಸಿರೆನ್ನುತ್ತಾ. " 19

200. ತ್ರಿಪದಿಯ ಲಕ್ಷಣವು ಹ್ಯಾಗೆ?

ಮೂರು ಪಾದವುಳ್ಳ ಪದಕ್ಕೆ "ತ್ರಿಪದಿ" (ತಿವದಿ) ಎಂದು ಹೆಸರು. ಇದರ 1ನೇ ಪಾದಕ್ಕೆ 20, 2ನೇ ಪಾದಕ್ಕೆ 17, 3ನೇದಕ್ಕೆ 13 ಮಾತ್ರೆಗಳಿರಬೇಕು.

ಉದಾ: ಮಾ.

ಆಡದೇ ಮಾಡುವನು ರೂಢಿಯೊಳಗುತ್ತಮನು | 20
ಆಡಿ ಮಾಡುವನು ಮಧ್ಯಮನಧಮ ತಾ- | 17
ನಾಡಿ ಮಾಡದವ ಸರ್ವಜ್ಞ || 13

201. ಚೌಪದಿಯೆಂದರೇನು?

ನಾಲ್ಕು ಪಾದಗಳುಳ್ಳ ಪದ್ಯಗಳಿಗೆ "ಚೌಪದಿ" (ಚತುಷ್ಪದಿ) ಎಂದು ಹೆಸರು; ಇದರಲ್ಲಿ ಅನೇಕ ಭೇದಗಳುಂಟು; ಅವುಗಳಲ್ಲಿ ಮುಖ್ಯವಾದವುಗಳನ್ನು ಮುಂದೆ ವಿವರಿಸಿರುತ್ತದೆ.

202. ಕಂದಪದ್ಯ ಲಕ್ಷಣವು ಹ್ಯಾಗೆ?

1ನೇ 3ನೇ ಪಾದಗಳಲ್ಲಿ 12 ಮಾತ್ರೆಗಳೂ, 2ನೇ 4ನೇ ಪಾದಗಳಲ್ಲಿ 20 ಮಾತ್ರೆಗಳೂ ಉಳ್ಳದ್ದು "ಕಂದಪದ್ಯ"ವೆನ್ನಿಸಿಕೊಳ್ಳುತ್ತದೆ.

ಉದಾ:	ಮಾ.
ಪನ್ನೆರಡು ಮಾತ್ರೆ ಮೊದಲೊಳ್ |	12
ಸನ್ನುತವಿಪ್ಪತ್ತು ಮಾತ್ರೆ ಯೆರಡನೆಯಡಿಯೊಳ್ ||	20
ಇನ್ನಿಪ್ಪವುವಿಾ ತೆಱದಿಂ |	12
ಬಿನ್ನಣಮೇಂ ಕಂದಲಕ್ಷಣಂ ಕಮಲಮುಖೀ ||	20

203. ರಗಳೆಗಳ (ರಘಟೆಗಳ) ಲಕ್ಷಣವು ಹ್ಯಾಗೆ?

ರಗಳೆ (ರಗಟಾ)ಗಳು ಮೂರು ವಿಧವಾಗಿವೆ. ಹ್ಯಾಗೆಂದರೆ —

1. "ಮಂದಾನಿಲರಗಳೆ"—ಪಾದ 1ಕ್ಕೆ 16 ಮಾತ್ರೆಗಳುಳ್ಳ ನಾಲ್ಕು ಪಾದಗಳು ಇರುತ್ತವೆ. ಉದಾ:

   ಆ ವೇಳೆಯೊಳ್ಗತಿ ಸಂಭ್ರಮ ಮೆಸೆದಿರೆ. 16 ಮಾ.

2. "ಲಲಿತರಗಳೆ"—ಪಾದ 1ಕ್ಕೆ 20 ಮಾತ್ರೆಗಳುಳ್ಳ ನಾಲ್ಕು ಪಾದಗಳಾಗಿರುತ್ತವೆ. ಉದಾ:

   ಅಲ್ಲಿ ಮಾಮರದಲ್ಲಿ ಮಲ್ಲಿಕಾಲತೆಯಲ್ಲಿ 20 ಮಾ.

3. "ಉತ್ಸಾಹರಗಳೆ"—ಪಾದ 1ಕ್ಕೆ 24 ಮಾತ್ರೆಗಳುಳ್ಳ ನಾಲ್ಕು ಪಾದಗಳಾಗಿರುತ್ತವೆ. ಉದಾ:

   ಅಟ್ಟ ಅನ್ನ ಉಣ್ಣ ಬಿಡನು, ಕೊಟ್ಟ ಸಾಲ ಕೇಳ ಬಿಡನು. 24 ಮಾ.

204. ಷಟ್ಪದಿ ಅಂದರೇನು? ಅವುಗಳೆಷ್ಟು ವಿಧವು?

ಆರು ಪಾದ (ಚರಣ)ಗಳುಳ್ಳ ಪದ್ಯಗಳಿಗೆ "ಷಟ್ಪದಿ" ಎಂದು ಹೆಸರು. ಇವು "ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ"ಗಳೆಂದು ಆರು ವಿಧಗಳಾಗಿವೆ.

205. ಶರಷಟ್ಪದಿಯು ವಿವರವು ಹ್ಯಾಗೆ?

1ನೇ, 2ನೇ, 4ನೇ, 5ನೇ ಪಾದಗಳಲ್ಲಿ ಪಾದ 1ಕ್ಕೆ 8 ಮಾತ್ರೆಗಳೂ, 3ನೇ, 6ನೇ ಪಾದಗಳಲ್ಲಿ 14 ಮಾತ್ರೆಗಳೂ ಇದ್ದರೆ, "ಶರಷಟ್ಪದಿ" ಎಂದರಿಯತಕ್ಕದ್ದು. ಉದಾ:

	ಮಾ.
ಚರಣಗಳೆರಡಕೆ |	8
ಕರಿಲಘುಗಳು ಬರೆ |	8
ನಿರುತದಿ ಮೂಱನೆಯಡಿಗಳಿಗೇ ||	14
ಶರಧಿಯುಗಂ ಪೆ- |	8
ರ್ಚಿರೆ ಶರಷಟ್ಪದಿ |	8
ಸರಸಿಜನಯನೆ ಸುರಮ್ಯನಿಧೀ ||	14

206. ಕುಸುಮಷಟ್ಪದಿಯು ವಿವರವು ಹ್ಯಾಗೆ?

1ನೇ, 2ನೇ, 4ನೇ, 5ನೇ ಪಾದಗಳಲ್ಲಿ ಪಾದ 1ಕ್ಕೆ 10 ಮಾತ್ರೆಗಳೂ, 3ನೇ, 6ನೇ ಪಾದಗಳಲ್ಲಿ 17 ಮಾತ್ರೆಗಳೂ ಇದ್ದರೆ, "ಕುಸುಮಷಟ್ಪದಿ" ಎಂದರಿಯತಕ್ಕದ್ದು. ಉದಾ:

	ಮಾ.
ಸೊಗಸುವೆರಡಡಿಗಳೊಳು |	10
ಪೊಗಳ್ಗೆ ದಶ ಲಘುಗಳಿರೆ |	10
ಮಿಗೆ ಮೂಱನೆಯ ಪದಕೆ ಮೇಲೆ ಯೇೞೊ ||	17
ಪೊಗಲೊಡನೆ ಮೆಱೆವುತಿರೆ |	10
ಮೃಗನೇತ್ರೆ ಆ ಮತದಿ |	10
ಜಗದೊಳದು ಕುಸುಮಷಟ್ಪದಿ ಯೆನಿಪುದೂ ||	17

207. ಭೋಗಷಟ್ಪದಿಯ ವಿವರವು ಹ್ಯಾಗೆ?

1ನೇ, 2ನೇ, 4ನೇ, 5ನೇ ಪಾದಗಳಲ್ಲಿ ಪಾದ 1ಕ್ಕೆ 12 ಮಾತ್ರೆಗಳೂ, 3ನೇ, 6ನೇ ಪಾದಗಳಲ್ಲಿ 20 ಮಾತ್ರೆಗಳೂ ಇದ್ದರೆ, "ಭೋಗಷಟ್ಪದಿ" ಎಂದರಿಯತಕ್ಕದ್ದು. ಉದಾ:

	ಮಾ.
ಮುನ್ನಿನಂಘ್ರಿಗಳ್ಗೆ ಮಾತ್ರೆ |	12
ಹನ್ನೆರಡು ವಿರಾಜಿಸುವುದು |	12
ಚನ್ನೆ ಮೇಲಣಡಿಗೆ ಮಾತ್ರೆ ಪತ್ತುಮೆರಡುಮಂ ||	20
ಸನ್ನಿಸಲ್ಕೆ ಭೋಗದಾಯ್ತು |	12
ಚನ್ನ ಪದಗಳೊಂದುಗೂಡಿ |	12
ಸನ್ನುತಾಂಗಿ ಅಷ್ಟಕೋತ್ತರಾಷ್ಟ ದಶಕ ಕೇಳ್ ||	20

208. ಭಾಮಿನಿಷಟ್ಪದಿಯ ವಿವರವು ಹ್ಯಾಗೆ?

1ನೇ, 2ನೇ, 4ನೇ, 5ನೇ ಪಾದಗಳಲ್ಲಿ ಪಾದ 1ಕ್ಕೆ 14 ಮಾತ್ರೆಗಳೂ 3ನೇ, 6ನೇ ಪಾದಗಳಲ್ಲಿ 23 ಮಾತ್ರೆಗಳೂ ಇದ್ದರೆ, "ಭಾಮಿನಿಷಟ್ಪದಿ" ಎಂದರಿಯತಕ್ಕದ್ದು. ಉದಾ:

	ಮಾ.
ಮೊದಲೆರಡು ನಾಲ್ಕೆಯ್ದೆನಿಪ ಸ- |	14
ತ್ಪದದೆ ಮನುಸಂಖ್ಯಾತ ಮಾತ್ರೆಯು |	14
ತುದಿಯ ಮೂಱಾಱನೆಯೊಳಿರ್ಪತು ಮೂಱು ಮಾತ್ರೆಗಳೂ ||	23
ಒದವಿದೀ ಪರಿಯಾಯ್ತು ಪಾದಕೆ |	14
ಪುದಿದ ಮಾತ್ರೆಯು ನೂಱೆರಡು ಕೇ- |	14
ಳಿದುವೆ ಭಾಮಿನಿಯೆಂದೆನಿಪ ಷಟ್ಪದಿಯ ಲಕ್ಷಣವೂ ||	23

209. ಪರಿವರ್ಧಿನಿಷಟ್ಪದಿಯ ವಿವರವು ಹ್ಯಾಗೆ?

1ನೇ, 2ನೇ, 4ನೇ, 5ನೇ ಪಾದಗಳಲ್ಲಿ ಪಾದ 1ಕ್ಕೆ 16 ಮಾತ್ರೆಗಳೂ, 3ನೇ, 6ನೇ ಪಾದಗಳಲ್ಲಿ 26 ಮಾತ್ರೆಗಳೂ ಇದ್ದರೆ, "ಪರಿವರ್ಧಿನಿಷಟ್ಪದಿ" ಎಂದರಿಯತಕ್ಕದ್ದು.

ಉದಾ:

	ಮಾ.
ಪರಿವರ್ಧಿನಿಷಟ್ಪದಿಗಾ ಮೊದಲಲಿ ।	16
ಯೆರಡು ಪದಂಗಳು ಷೋಡಶ ಮಾತ್ರೆಗ- ।	16
ಳುರುತರದಿಂ ಮೇಲೊಂದೊಂದು ಷಡ್ವಿಂಶತಿ ಮಾ	
ತ್ರೆಗಳೂ ॥	26
ನಿರುತಂ ಪದವಾಱುಂ ಕೂಡಲು ಶತ- ।	16
ಮಿರೆ ಮೇಲಧಿಕಂ ಷೋಡಶ ಮಾತ್ರೆಗ- ।	16
ಳುರುತರ ಮಿತಾಕ್ಷರದಿಂ ನೆಱೆ ಬಲ್ಲವರಾಲಿಪುದೊಲವಿಂದಾ ॥	26

210. ವಾರ್ಧಿಕ (ವಾರ್ಧಕ) ಷಟ್ಪದಿಯ ವಿವರವು ಹ್ಯಾಗೆ?

1ನೇ, 2ನೇ, 4ನೇ, 5ನೇ ಪಾದಗಳಲ್ಲಿ ಪಾದ 1ಕ್ಕೆ 20 ಮಾತ್ರೆಗಳೂ, 3ನೇ, 6ನೇ ಪಾದಗಳಲ್ಲಿ 32 ಮಾತ್ರೆಗಳೂ ಇದ್ದರೆ, "ವಾರ್ಧಿಕ ಷಟ್ಪದಿ" ಎಂದರಿಯತಕ್ಕದ್ದು. ಉದಾ:

	ಮಾ.
ಲೀಲೆಯಿಂ ವಾರ್ಧಿಕದ ಷಟ್ಪದಿಯ ಮೊದಲ ಪದ- ।	20
ದೇಳಿಗೆಯುಮಿರ್ಪತ್ತು ಮಾತ್ರೆಯಿಂದೆಸೆದಿರ್ಕು- ।	20
ಮಾ ಲಲಿತಮೆನಿಪ ಮೂಱಾಱನೆಯ ಪಾದಗಳ್ಮೂವತ್ತೆ-	
ರಡು ಮಾತ್ರೆಯಿಂ ॥	32
ಮೇಲೆನೆ ವಿರಾಜಿಸುಗುಮಿಂತಾಱು ಪಾದಂಗ- ।	20
ಳಾಲಿಸಲ್ಮಾತ್ರೆಗಳ್ನೂಱ ನಾಲ್ವತ್ತೆಱಿಂ ।	20
ಮೇಲೆ ನಾಲ್ಕೆಸೆದಪುವು ಛಂದೋಂಬುರಾಶಿಯೊಳ್ನೀಂ	
ಕೇಳ್ವುದಿಂದುವದನೇ ॥	32